ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 5 ಸೋಮವಾರ 2022

ಸಂಪುಟ: 43 | ಸಂಚಿಕೆ: 140 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಟಾಟಾ ಸನ್ಸ್ ಮಾಜಿ ಅಧ್ಯಕ್ಷ ಸೈರಸ್ ಮಿಸ್ತ್ರಿ ಅಪಘಾತದಲ್ಲಿ ನಿಧನ



ಮುಂಬೈ, ಸೆ.4– ಟಾಟಾ ಸನ್ಸ್‌ನ ಮಾಜಿ ಅಧ್ಯಕ್ಷ ಸೈರಸ್ ಮಿಸ್ತ್ರಿ ಅವರು ರಸ್ತೆ ಅಪಘಾತದಲ್ಲಿ ಸಾವನ್ನಪ್ಪಿದ್ದಾರೆ. ಅವರಿಗೆ 54 ವರ್ಷ ವಯಸ್ಸಾಗಿತ್ತು. ಅಹಮದಾಬಾದ್‌ನಿಂದ ಮುಂಬೈಗೆ ಪ್ರಯಾಣಿಸುತ್ತಿದ್ದಾಗ ಅವರ ಕಾರು ಡಿವೈಡರ್‌ಗೆ ಡಿಕ್ಕಿ ಹೊಡೆದಿದೆ.

ಭಾನುವಾರ ಮಹಾರಾಷ್ಟ್ರದ ಪಾಲ್ಘರ್‌ನಲ್ಲಿ ಸೂರ್ಯ ನದಿಯ ಸೇತುವೆಯ ಮೇಲೆ ಈ ಅವಘಡ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಕಾರು ಚಾಲಕ ಸೇರಿದಂತೆ ಅವರೊಂದಿಗೆ ಪ್ರಯಾಣಿಸುತ್ತಿದ್ದ ಇನ್ನಿಬ್ಬರು ಗಾಯಗೊಂಡಿದ್ದಾರೆ. ಎಲ್ಲಾ ಗಾಯಾಳುಗಳನ್ನು ಗುಜರಾತ್‌ನ ಆಸ್ಪತ್ರೆಗೆ ರವಾನಿಸಲಾಗಿದೆ. ರತನ್ ಟಾಟಾ ಅವರ ನಂತರ ಸಂಘಟಿತ ಅಧ್ಯಕ್ಷರಾಗಿ ಆಯ್ಕೆಯಾದ ಸೈರಸ್ ಮಿಸ್ತ್ರಿ ಅವರನ್ನು ಭಾರತದ ಅತ್ಯಂತ ಉನ್ನತ ಮಟ್ಟದ ಸಂಸ್ಥೆ ಟಾಟಾ ಸನ್ಸ್‌ನಿಂದ 2016ರಲ್ಲಿ ತೆರವುಗೊಳಿಸಲಾಗಿತ್ತು.

ಸೈರಸ್ ಮಿಸ್ತ್ರಿ ಅವರ ನಿಧನಕ್ಕೆ ಶರದ್ ಪವಾರ್ ಪುತ್ರಿ ಸುಪ್ರಿಯಾ ಸುಳೆ ಸೇರಿದಂತೆ ಹಲವು ಗಣ್ಯರು ಟ್ವೀಟ್ ಮಾಡಿ ಸಂತಾಪ ಸೂಚಿಸಿದ್ದಾರೆ. ವಿನಾಶಕಾರಿ ಸುದ್ದಿ. ನನ್ನ ಸಹೋದರ ಸೈರಸ್ ಮಿಸ್ತ್ರಿ ನಿಧನರಾಗಿರುವುದನ್ನು ನಂಬಲು ▶ 5ನೇ ಪುಟಕ್ಕೆ

ನಾಡಹಬ್ಬ ದಸರಾ ಮಹೋತ್ಸವದಲ್ಲಿ
ಮೊದಲ ಬಾರಿಗೆ ಆರೋಗ್ಯ ಮೇಳ

● ಜಿಲ್ಲೆಯ ಎಲ್ಲಾ ತಾಲೂಕು ಕೇಂದ್ರಗಳಲ್ಲೂ ಆರೋಗ್ಯ ಮೇಳ ● ಖಾಸಗಿ ಆಸ್ಪತ್ರೆಗಳ ಸಹಯೋಗದಲ್ಲಿ ಹೃದ್ರೋಗ, ಕ್ಯಾನ್ಸರ್ ಸೇರಿದಂತೆ ಇನ್ನಿತರ ಖಾಯಿಲೆಗಳ ತಪಾಸಣೆ

ಎಂ.ಟಿ.ಯೋಗೇಶ್ ಕುಮಾರ್



ಮೈಸೂರು,ಸೆ.4–ಕೊರೊನಾ ಹಿನ್ನೆಲೆಯಲ್ಲಿ ಕಳೆದ 2 ವರ್ಷಗಳಿಂದ ಸರಳ ಹಾಗೂ ಸಾಂಪ್ರದಾಯಿಕ ಆಚರಣೆಗಷ್ಟೇ ಸೀಮಿತವಾಗಿದ್ದ ನಾಡಹಬ್ಬ ದಸರಾ ಮಹೋತ್ಸವ ಈ ಬಾರಿ ಅದ್ಧೂರಿಯಾಗಿ ಆಚರಿಸಲಾಗುತ್ತಿದ್ದು, ಕೊರೊನಾ ಭಯ ಹೋಗಲಾಡಿಸಲು ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಇದೇ ಮೊದಲ ಬಾರಿಗೆ ನವರಾತ್ರಿ ವೇಳೆ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲು ಜಿಲ್ಲಾಡಳಿತ ಮುಂದಾಗಿದೆ. ಈ ಬಾರಿ ದಸರಾ ಮಹೋತ್ಸವವನ್ನು ಅದ್ಧೂರಿಯಾಗಿ ಆಚರಿಸುತ್ತಿರುವುದರಿಂದ ನಾಡಿನ ವಿವಿಧೆಡೆಯಿಂದ ಅಪಾರ ಸಂಖ್ಯೆಯಲ್ಲಿ ಪ್ರವಾಸಿಗರು ಮೈಸೂರಿಗೆ ಆಗಮಿಸುತ್ತಿರುವುದರಿಂದ ಜನರಲ್ಲಿರುವ ಆರೋಗ್ಯದ ಭಯ ಹೋಗಲಾಡಿಸುವುದರೊಂದಿಗೆ ಆರೋಗ್ಯ ತಪಾಸಣೆ ಮಾಡುವ ನಿಟ್ಟಿನಲ್ಲಿ ಮೈಸೂರು ನಗರ ಸೇರಿದಂತೆ ಜಿಲ್ಲೆಯ 7 ತಾಲೂಕುಗಳಲ್ಲೂ ಸೆ.26ರಿಂದ ಅ.10ರವರೆಗೂ ಆರೋಗ್ಯ ಮೇಳ ನಡೆಸುವುದಕ್ಕೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕ್ರಮ ಕೈಗೊಂಡಿದ್ದು, ಚಿಕಿತ್ಸೆ ಹಾಗೂ ತಪಾಸಣೆಗಾಗಿ ಖಾಸಗಿ ಆಸ್ಪತ್ರೆಗಳ ನೆರವು ಪಡೆಯಲು ಚಿಂತಿಸಲಾಗಿದೆ. ▶ 5ನೇ ಪುಟಕ್ಕೆ



> “ಈಗಾಗಲೇ ಕೊರೊನಾ ಲಸಿಕೆ ಶೇ.100ರಷ್ಟು ನೀಡಿರುವುದರಿಂದ ಕೊರೊನಾ ಸೋಂಕಿನ ಅಪಾಯದಿಂದ ಜನರು ಪಾರಾಗಬಹುದು. ಇತ್ತೀಚಿನ ದಿನಗಳಲ್ಲಿ ಸೋಂಕಿತರ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಆತಂಕಪಡುವ ಅಗತ್ಯವಿಲ್ಲ. ಆರೋಗ್ಯ ಮೇಳದಲ್ಲಿ ಜೀವನ ಶೈಲಿ ಹೇಗಿರಬೇಕು, ಕೊರೊನಾ ಸೇರಿದಂತೆ ವಿವಿಧ ಸಾಂಕ್ರಾಮಿಕ ರೋಗಗಳಿಂದ ಜನರು ಹೇಗೆ ಪಾರಾಗಬಹುದೆಂದು ಜನ ಜಾಗೃತಿ ಮೂಡಿಸುವುದಕ್ಕೆ ಜಾಗೃತಿ ಮೇಳವನ್ನು ನಡೆಸಲಾಗುತ್ತಿದೆ. **–ಡಾ.ಪ್ರಸಾದ್, ಡಿಹೆಚ್‌ಓ**

ಮುರುಘಾ ಮಠದಲ್ಲಿ ಮಹಜರ್
ಕಣ್ಣೀರಿಟ್ಟ ಮುರುಘಾ ಶ್ರೀ



ಚಿತ್ರದುರ್ಗ, ಸೆ.4– ಅಪ್ರಾಪ್ತ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ ಆರೋಪದಲ್ಲಿ ಪೋಕ್ಸೋ ಪ್ರಕರಣ ಎದುರಿಸುತ್ತಿರುವ ಮುರುಘಾ ಶ್ರೀಗಳ ಪ್ರಕರಣದಲ್ಲಿ ಪೊಲೀಸರು ಭಾನುವಾರ ಮಠದಲ್ಲಿ ಸ್ಥಳ ಮಹಜರು ನಡೆಸಿದ್ದಾರೆ.

ಸಂತ್ರಸ್ತ ಬಾಲಕಿಯರು ಸೂಚಿಸಿದ್ದ ಪ್ರತೀ ಸ್ಥಳದಲ್ಲೂ ಪೊಲೀಸರು ಪರಿಶೀಲನೆ ಮಾಡಿದ್ದಾರೆ. ಸ್ವಾಮೀಜಿ ಕೊಠಡಿ, ಸ್ನಾನದ ಕೋಣೆ, ಕೊಠಡಿ ಮುಂಭಾಗ, ಸ್ಕೈ ವಾಕ್ ಸಮೀಪ ಹಾಗೂ ಹಾಸ್ಟೆಲ್ ಬಳಿ ಪೊಲೀಸರು ಸ್ಥಳ ಮಹಜರು ಮಾಡಿದ್ದಾರೆ. ಮಹಜರು ವೇಳೆ ಕೃತ್ಯಕ್ಕೆ ಸಂಬಂಧಿಸಿದ ▶ 8ನೇ ಪುಟಕ್ಕೆ

ಶ್ರೀಗಳಿಗೆ ಜಾಮೀನು ಅರ್ಜಿ ಸಲ್ಲಿಕೆ ಸಾಧ್ಯತೆ

ಚಿತ್ರದುರ್ಗ, ಸೆ.4– ಮುರುಘಾ ಶ್ರೀಗಳಿಗೆ ನಾಳೆ ಜೈಲಾ? ಬೇಲಾ? ಅಥವಾ ಆಸ್ಪತ್ರೆ ಭಾಗ್ಯನಾ? ಎನ್ನೋದು ಕುತೂಹಲ ಕೆರಳಿಸಿದೆ. ಪೊಲೀಸ್ ಕಸ್ಟಡಿ ನಾಳೆ ಬೆಳಗ್ಗೆ 11 ಗಂಟೆಗೆ ಅಂತ್ಯವಾಗಲಿದ್ದು, ಪೊಲೀಸರು ಸ್ಥಳ ಮಹಜರು, ಶ್ರೀಗಳ ಪುರುಷತ್ವ ವರದಿಯನ್ನು ನಾಳೆ ಕೋರ್ಟ್‌ಗೆ ಹಾಜರುಪಡಿಸಲಿದ್ದಾರೆ. ಮತ್ತೊಂದೆಡೆ ಬೇಲ್‌ಗಾಗಿ ಶ್ರೀಗಳ ಪರ ವಕೀಲರು ಸಕಲ ಸಿದ್ಧತೆ ಮಾಡಿಕೊಂಡಿದ್ದಾರೆ. ಅನಾರೋಗ್ಯ ಹಿನ್ನೆಲೆಯಲ್ಲಿ ಬೆಂಗಳೂರಿಗೆ ಕರೆದೊಯ್ಯಲು ▶ 8ನೇ ಪುಟಕ್ಕೆ

ಮೈಸೂರು ಮೇಯರ್ ಚುನಾವಣೆಗೆ ಒಂದೇ ದಿನ ಬಾಕಿ

● ಮೂರೂ ಪಕ್ಷಗಳಲ್ಲಿ ಗೆಲುವಿಗೆ ವ್ಯೂಹ ರಚನೆ ● ಇಂದು ಸಿದ್ದರಾಮಯ್ಯ ಮೈಸೂರಿಗೆ

ಮೈಸೂರು,ಸೆ.4(ಎಸ್‌ಬಿಡಿ)– ಮೈಸೂರು ನಗರ ಪಾಲಿಕೆ ಮೇಯರ್ ಹಾಗೂ ಉಪಮೇಯರ್ ಚುನಾವಣೆಗೆ ಇನ್ನೊಂದು ದಿನ ಬಾಕಿ ಇದ್ದು, ಮೂರು ಪಕ್ಷಗಳು ಪ್ರತ್ಯೇಕವಾಗಿ ಸೋಮವಾರ ಮಹತ್ವದ ಸಭೆ ನಡೆಸಿ ಸ್ಪಷ್ಟ ನಿರ್ಧಾರ ಪ್ರಕಟಿಸುವ ಸಾಧ್ಯತೆ ಇದೆ.

ವಿಪಕ್ಷ ನಾಯಕ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಸೋಮವಾರ ಮೈಸೂರಿಗೆ ಆಗಮಿಸಲಿದ್ದು, ಕಾಂಗ್ರೆಸ್ ಹಾಗೂ ಬಿಜೆಪಿ ಪಾಳಯದಲ್ಲಿ ಬಿರುಸಿನ ಚಟುವಟಿಕೆ ನಡೆಯಬಹುದು. ಇನ್ನು ಪಾಲಿಕೆ ಚುನಾವಣೆ ಜವಾಬ್ದಾರಿ ಹೊಂದಿರುವ ಜೆಡಿಎಸ್ ಶಾಸಕ ಸಾ.ರಾ. ಮಹೇಶ್, ಕಾಂಗ್ರೆಸ್ ಹಾಗೂ ಬಿಜೆಪಿ ನಡೆಯನ್ನು ಆಧರಿಸಿ ತಮ್ಮ ನಿಲುವನ್ನು ಪಕ್ಷದ ವರಿಷ್ಠರಿಗೆ ರವಾನಿಸಬಹುದು. ಶನಿವಾರ ಕಾಂಗ್ರೆಸ್ ಹಾಗೂ ಬಿಜೆಪಿ ಮುಖಂಡರು ಪ್ರತ್ಯೇಕ ಸಭೆ ನಡೆಸಿ ಮೇಯರ್ ಚುನಾವಣೆಯಲ್ಲಿ ಸ್ವತಂತ್ರವಾಗಿ ಸ್ಪರ್ಧಿಸಲು ತೀರ್ಮಾನಿಸಿದ್ದಾರೆ. ▶ 8ನೇ ಪುಟಕ್ಕೆ



ಕೊರೊನಾ ಸಂದರ್ಭದಲ್ಲಿ ಸೇವೆ ಸಲ್ಲಿಸಿದ ಮೂವರಿಗೆ ಅದಮ್ಯ ಚೇತನ ಪ್ರಶಸ್ತಿ ಪ್ರದಾನ



ಮೈಸೂರು, ಸೆ.4(ಜಿಎ)– ಮೈಸೂರಿನ ಅದಮ್ಯ ರಂಗಶಾಲೆ ವತಿಯಿಂದ ಕೊರೊನಾ ಸಂದರ್ಭದಲ್ಲಿ ಸೇವೆ ಸಲ್ಲಿಸಿದ ಮೂವರಿಗೆ 'ಅದಮ್ಯ ಚೇತನ' ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು.

ನಗರದ ಜಯಲಕ್ಷ್ಮೀಪುರಂನಲ್ಲಿರುವ ವಿವೇಕಾನಂದ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಎನ್. ಕಾವ್ಯ, ಎಸ್.ಎ.ಜೀವನ್ ಮತ್ತು ವಿಶ್ವಕವಿ ಕುವೆಂಪು ಪ್ರಥಮ ದರ್ಜೆ ಕಾಲೇಜಿನ ತೃತೀಯ ಬಿ.ಕಾಂ. ವಿದ್ಯಾರ್ಥಿನಿ ಕೆ.ಟಿ. ಯಮುನಾ ಅವರಿಗೆ 'ಅದಮ್ಯ ಚೇತನ' ಪ್ರಶಸ್ತಿ ನೀಡಲಾಯಿತು.

ಈ ವೇಳೆ ಮೈಸೂರು ಕಂದಾಯ ವಿಭಾಗದ ಪ್ರಾದೇಶಿಕ ಹೆಚ್ಚುವರಿ ಆಯುಕ್ತ ಪಿ.ಶಿವರಾಜ್ ಮಾತನಾಡಿ, ಮಕ್ಕಳಿನಲ್ಲಿರುವ ಪ್ರತಿಭೆಯನ್ನು ಹೊರ ತರಲು ರಂಗಭೂಮಿಯಂತಹ ಚಟುವಟಿಕೆಗಳು ಸಹಕಾರಿಯಾಗಲಿದೆ. ಅದಮ್ಯ ಎಂಬ ಹೆಸರಿಗೆ ತಕ್ಕಂತೆ ವಿಶೇಷ ಪ್ರತಿಭೆಗಳನ್ನು ಗುರುತಿಸಿ ಅವರಿಗೆ ಪ್ರಶಸ್ತಿ ನೀಡುತ್ತಿರುವುದು ಸಂತಸದ ವಿಚಾರವಾಗಿದೆ. ಪೋಷಕರು ಮಕ್ಕಳಿಗೆ ಒತ್ತಡ ಹೇರದೆ ಅವರಲ್ಲಿನ ಪ್ರತಿಭೆಯನ್ನು ಪ್ರದರ್ಶಿಸಲು ಅವಕಾಶ ನೀಡಿ ಎಂದು ಸಲಹೆ ನೀಡಿದರು.

ನಾವು ದೇಶದಿಂದ ಏನು ಪಡೆದುಕೊಳ್ಳುತ್ತೇವೆ ಎಂಬುದಕ್ಕಿಂತ ನಾವು ಏನು ಕೊಡುಗೆ ನೀಡುತ್ತಿದ್ದೇವೆ ಎಂಬುದು ಬಹಳ ಮುಖ್ಯವಾಗಿರುತ್ತದೆ. ಪರಿಸರ, ಸ್ವಚ್ಛತೆ ಮತ್ತು ಆರೋಗ್ಯದ ಬಗ್ಗೆ ಹೆಚ್ಚು ಗಮನಹರಿಸಬೇಕಿದ್ದು, ಕುವೆಂಪು ಅವರು ತಿಳಿಸಿರುವಂತೆ ವಿಶ್ವಮಾನವರಾಗಬೇಕಿದೆ ಎಂದು ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಡಾ. ಈ.ಸಿ.ನಿಂಗರಾಜ್‌ಗೌಡ ತಿಳಿಸಿದರು.

ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲಾ ಯುವ ಬರಹಗಾರರ ಬಳಗದ ಅಧ್ಯಕ್ಷ ಟಿ.ಸತೀಶ್ ಜವರೇಗೌಡ, ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಎನ್.ಸಂತೋಷ್‌ಕುಮಾರ್, ಅದಮ್ಯ ರಂಗಶಾಲೆ ಸಂಸ್ಥಾಪಕ ಚಂದ್ರು ಇದ್ದರು.



ಮೈಸೂರು ವಿವಿ ಮೊಹಲ್ಲಾದಲ್ಲಿ ಎಸ್‌ಪಿವಿಜಿಎಂಸಿ ಟ್ರಸ್ಟ್ ವತಿಯಿಂದ ಆಯೋಜಿಸಿರುವ ಗಣೇಶೋತ್ಸವದ 61ನೇ ಪಾರಂಪರಿಕ ಸಂಗೀತೋತ್ಸವದಲ್ಲಿ ಭಾನುವಾರ ಸಂಜೆ ವಿದ್ವಾನ್ ಪ್ರವೀಣ್ ಗೋಡ್ಖಿಂಡಿ, ವಿದ್ವಾನ್ ಅನಿಲ್ ಶ್ರೀನಿವಾಸನ್ ಮತ್ತು ವಿದ್ವಾನ್ ಅನಂತ ಆರ್.ಕೃಷ್ಣನ್ ಪಿಯಾನೋ, ಕೊಳಲು ನುಡಿಸಿ ಪ್ರೇಕ್ಷಕರಿಗೆ ಮುದ ನೀಡಿದರು.

ವೇತನ ಪರಿಷ್ಕರಣೆ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸಾರಿಗೆ ಜಂಟಿ ಕ್ರಿಯಾ ಸಮಿತಿ ಸಿಎಂಗೆ ಮನವಿ

ಮೈಸೂರು, ಸೆ.4(ಎಸ್‌ಪಿಎನ್)– ವೇತನ ಪರಿಷ್ಕರಣೆ ಸೇರಿದಂತೆ ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಪದಾಧಿಕಾರಿಗಳು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದು ಮನವಿ ಮಾಡಿದ್ದಾರೆ.

ಕೆಎಸ್‌ಆರ್‌ಟಿಸಿ ಸ್ಟಾಫ್ ವರ್ಕರ್ಸ್ ಫೆಡರೇಷನ್‌ನ ಹೆಚ್.ವಿ.ಅನಂತ ಸುಬ್ಬರಾವ್, ಕೆಎಸ್‌ಆರ್‌ಟಿಸಿ ನೌಕರರ ಮಹಾಮಂಡಳದ ಬಿ.ಜಯದೇವರಾಜೇ ಅರಸು, ಕೆಎಸ್‌ಆರ್‌ಟಿಸಿ ಫೆಡರೇಷನ್ (ಸಿಐಟಿಯು)ನ ಹೆಚ್.ಡಿ.ರೇವಪ್ಪ, ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ಯುನೈಟೆಡ್ ಎಂಪ್ಲಾಯಿಸ್ ಯೂನಿಯನ್‌ನ ಕೆ.ಆರ್.ವಿಜಯ್‌ಕುಮಾರ್, ಕೆಎಸ್‌ಆರ್‌ಟಿಸಿ ಎಸ್ಸಿ–ಎಸ್ಟಿ ಎಂಪ್ಲಾಯಿಸ್ ಯೂನಿಯನ್‌ನ ವೆಂಕಟರಮಣಪ್ಪ, ಕೆಎಸ್‌ಆರ್‌ಟಿಸಿ ಪ.ಜಾ–ಪ.ಪಂಗಳ ಅಧಿಕಾರಿಗಳು ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಎಂ.ಮಲ್ಲಿಕಾರ್ಜುನ ಮೂರ್ತಿ ಅವರುಗಳು ಸಹಿ ಮಾಹಿತಿ ಮಾಡಿರುವ ಜಂಟಿ ಕ್ರಿಯಾ ಸಮಿತಿಯ ಮನವಿ ಪತ್ರವನ್ನು ಮುಖ್ಯಮಂತ್ರಿಗಳಿಗೆ ಶುಕ್ರವಾರ ಸಲ್ಲಿಸಿದ್ದಾರೆ.

ಸಾರಿಗೆ ನಿಗಮದ ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ವಾಯವ್ಯ ಮತ್ತು ಕಲ್ಯಾಣ ಕರ್ನಾಟಕಗಳಲ್ಲಿ ಸಮಾರು 1.30 ಲಕ್ಷ ನೌಕರರು ಕೆಲಸ ಮಾಡುತ್ತಿದ್ದು, ಸಾರಿಗೆ ನೌಕರರಿಗೆ ಪ್ರತಿ 4 ವರ್ಷಕ್ಕೊಮ್ಮೆ ವೇತನ ಹೆಚ್ಚಳ ಮಾಡುವ ಪರಂಪರೆಯಿದೆ. ಆದರೆ, 32 ತಿಂಗಳಿಂದ ವೇತನ ಪರಿಷ್ಕರಣೆಯಾಗಿಲ್ಲ. ಇದರಿಂದ ಬೆಲೆಯೇರಿಕೆ, ಮತ್ತಿತರ ಕಾರಣಗಳಿಂದ ಸಾರಿಗೆ ನಿಗಮಗಳ ನೌಕರರ ಜೀವನ ನಡೆಸುವುದೇ ಕಷ್ಟವಾಗಿದೆ ಎಂದು ಉಲ್ಲೇಖಿಸಲಾಗಿದೆ.


ಮೂಲ ವೇತನವನ್ನು ಪರಿಷ್ಕರಿಸಿ ಇಎಸ್‌ಐ ಮಾದರಿಯಲ್ಲಿ ಆಡಳಿತ ವರ್ಗದವರಿಂದ ನೌಕರರ ಮೂಲ ವೇತನಕ್ಕೆ ಶೇ.3.5ಕ್ಕೆ ಹಾಗೂ ಕಾರ್ಮಿಕರಿಂದ ಶೇ.0.5 ವಂತಿಗೆ ಸಂಗ್ರಹಿಸಿ ಟ್ರಸ್ಟ್ ರಚಿಸಬೇಕು. ಇದರ ಮೂಲಕ ಸಾರಿಗೆ ನೌಕರರಿಗೆ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ ನೀಡಬೇಕು. ಮುಷ್ಕರ ಸಂದರ್ಭದಲ್ಲಿ ಸೇವೆಯಿಂದ ವಜಾಗೊಂಡ ನೌಕರರಿಗೆ ಯಾವುದೇ ಷರತ್ತಿಲ್ಲದೆ ಮರು ನೇಮಕ ಮಾಡಬೇಕು. ಲೋಕ ಅದಾಲತ್‌ನಲ್ಲಿ ಷರತ್ತುಗಳನ್ನು ಒಪ್ಪಿ ಸೇವೆ ಮರು ನೇಮಕಗೊಂಡಿರುವ ನೌಕರರಿಗೆ ಹಿಂದಿನ ದಿನಾಂಕದಿಂದ ಅನ್ವಯವಾಗುವಂತೆ ಷರತ್ತುಗಳನ್ನು ರದ್ದುಪಡಿಸಬೇಕೆಂಬ ಬೇಡಿಕೆ ಸೇರಿದಂತೆ ಒಟ್ಟು 10 ಬೇಡಿಕೆಗಳ ಪಟ್ಟಿಯನ್ನು ಉಲ್ಲೇಖಿಸಿ ಮುಖ್ಯಮಂತ್ರಿಗಳಿಗೆ ಮನವಿ ಮಾಡಿದ್ದಾರೆ.

ರಾಜ್ಯಮಟ್ಟದ ಹಾಕಿ ಪಂದ್ಯಾವಳಿ ವಿಜೇತರು

ಮೈಸೂರು,ಸೆ.4(ಆರ್‌ಕೆಬಿ)–ಮೈಸೂರಿನ ಸೇಫಿಯಂಟ್ ಶಿಕ್ಷಣ ಸಂಸ್ಥೆಯು ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ 2 ದಿನಗಳ ಹಾಕಿ ಕ್ರಿಕೆಟ್ ಪಂದ್ಯಾವಳಿಯಲ್ಲಿ ಬೆಂಗಳೂರಿನ ಸೆಂಟ್ ಜೋಸೆಫ್ಸ್ ಕಾಲೇಜ್ ಆಫ್ ಕಾಮರ್ಸ್ (ಎಸ್‌ಜೆಸಿಸಿ) ವಿಜೇತ ತಂಡವಾಗಿ ಟ್ರೋಫಿ ಮತ್ತು ನಗದು ಬಹುಮಾನ ಹಾಗೂ ಮಡಿಕೇರಿಯ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರಿಯಪ್ಪ ಕಾಲೇಜು (ಎಫ್‌ಎಂಕೆಎಂಸಿಸಿ) ಪಂದ್ಯಾವಳಿಯಲ್ಲಿ ದ್ವಿತೀಯ ಸ್ಥಾನ ಪಡೆದು ಟ್ರೋಫಿ ಮತ್ತು ನಗದು ಬಹುಮಾನಗಳನ್ನು ಪಡೆದವು.

ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಂದ ಒಟ್ಟು 11 ತಂಡಗಳು ಭಾಗವಹಿಸಿದ್ದವು. ಬೆಂಗಳೂರಿನ ಎಸ್‌ಜೆಸಿಸಿ ತಂಡದ ದೀಪೇಂದ್ರ ಪಂದ್ಯಾವಳಿಯ ಅತ್ಯುತ್ತಮ ಆಟಗಾರ ಪ್ರಶಸ್ತಿ ಪಡೆದರೆ, ಮೂರ್ನಾಡು ಪ್ರಥಮ ದರ್ಜೆ ಕಾಲೇಜಿನ ಸೋಮಣ್ಣ ಉತ್ತಮ ಗೋಲ್‌ಕೀಪರ್ ಪ್ರಶಸ್ತಿ ಪಡೆದರು. ಎಫ್‌ಎಂಕೆಎಂಸಿಸಿ ತಂಡದ ಮಿಲನ್ ಉದಯೋನ್ಮುಖ ಆಟಗಾರ ಎಂದು ಗುರುತಿಸಲ್ಪಟ್ಟರು. ಸಮಾರೋಪ ಸಮಾರಂಭದಲ್ಲಿ ಸೇಫಿಯಂಟ್ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ ಲೀಲಾ ಪ್ರಭುರಾಮ್, ಖಜಾಂಚಿ ದಲ್ಜೀತ್ ರಾಂ ಚೌದರಿ, ನಗರಪಾಲಿಕೆ ಸದಸ್ಯ ಸುಬ್ಬಯ್ಯ, ಅಶೋಕ್, ಪ್ರಾಂಶುಪಾಲ ಕೆ.ಗಣೇಶ್, ಉಪ ಪ್ರಾಂಶುಪಾಲ ನರೇಂದ್ರ ಇನ್ನಿತರರು ಉಪಸ್ಥಿತರಿದ್ದರು.

ನಿಧನ



ಡಾ.ಬಿ.ಎಸ್.ಪರ್ವತರಾಜು

ಮೈಸೂರು,ಸೆ4–ಮೈಸೂರಿನ ಮರಿಮಲ್ಲಪ್ಪ ಪಿಯು ಕಾಲೇಜಿನ ನಿವೃತ್ತ ಪ್ರಾಂಶುಪಾಲ ಹಾಗೂ ರಾಮಕೃಷ್ಣನಗರದ ಎ–ಬಿ ಬ್ಲಾಕ್‌ನ ಸಬ್ ರಿಜಿಸ್ಟ್ರಾರ್ ಕಚೇರಿ ಬಳಿ ನಿವಾಸಿ ಡಾ.ಬಿ.ಎಸ್.ಪರ್ವತರಾಜು (67) ಭಾನುವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, ಮಹಾಜನ ಕಾಲೇಜಿನ ಅರ್ಥಶಾಸ್ತ್ರ ಉಪನ್ಯಾಸಕಿ ಸುಮನಾ, ಪುತ್ರ ಎಸ್.ಪಿ.ಪ್ರತ್ಯುಷ್, ಅಪಾರ ಬಂಧು ವರ್ಗ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸೆ.6ರಂದು ವಿದ್ಯಾರಣ್ಯಪುರಂನ ವೀರಶೈವ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಪಾರ್ಥಸಾರಥಿ

ಚಾಮರಾಜನಗರದ ರಾಮಸಮುದ್ರದ ದಿವಂಗತ ಹೆಚ್.ರಾಮದಾಸ್ ಅವರ ಪುತ್ರ ಮೈಸೂರಿನ ಲಕ್ಷ್ಮಿಪುರಂ ನಂದನ ಅಪಾರ್ಟ್‌ಮೆಂಟ್‌ನ ನಿವಾಸಿ ಹೆಚ್.ಪಾರ್ಥಸಾರಥಿ (71) ಶನಿವಾರ ಮೈಸೂರಿನಲ್ಲಿ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಮತ್ತು ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸೋಮವಾರ (ಸೆ.5) ಬೆಳಗ್ಗೆ 10 ಗಂಟೆಗೆ ಮೈಸೂರಿನ ಚಾಮುಂಡಿಬೆಟ್ಟದ ಪಾದದ ಬಳಿ ಸ್ಮಶಾನದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ದಿ ಮೈಸೂರು ಸಿಟಿ ಕೋ–ಆಪರೇಟಿವ್ ಹೌಸಿಂಗ್ ಸೊಸೈಟಿ ಲಿಮಿಟೆಡ್‌ಗೆ ಶತಮಾನೋತ್ಸವ ಸಂಭ್ರಮ

ಟಿಎ–ಡಿಎ ತೆಗೆದುಕೊಳ್ಳದೇ ಹಲವು ಹಿರಿಯರ ಪರಿಶ್ರಮದಿಂದ ಬೆಳೆದು ಬಂದ ಸಂಸ್ಥೆ

ರಾಜ್ಯ ಸಹಕಾರಿ ಮಹಾಮಂಡಳದ ಅಧ್ಯಕ್ಷ, ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಶ್ಲಾಘನೆ



ಮೈಸೂರಿನ ದಿ ಮೈಸೂರು ಸಿಟಿ ಕೋ–ಆಪರೇಟಿವ್ ಹೌಸಿಂಗ್ ಸೊಸೈಟಿ ಲಿಮಿಟೆಡ್‌ನ ಶತಮಾನೋತ್ಸವ ಸಮಾರಂಭವನ್ನು ಭಾನುವಾರ ಶಾಸಕ ಜಿ.ಟಿ.ದೇವೇಗೌಡರು ಉದ್ಘಾಟಿಸಿದರು. ಬಳಿಕ 'ಶತ ದೀಪ್ತಿ' ಸ್ಮರಣ ಸಂಚಿಕೆ ಬಿಡುಗಡೆ ಮಾಡಿದರು. ಚಿತ್ರದಲ್ಲಿ ಶಾಸಕ ಎಲ್.ನಾಗೇಂದ್ರ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಮಾಜಿ ಸಚಿವ ಸಿ.ಹೆಚ್.ವಿಜಯಶಂಕರ್, ಸಂಸ್ಥೆಯ ಅಧ್ಯಕ್ಷ ಎನ್.ಶ್ರೀನಿವಾಸ್ ಇನ್ನಿತರರನ್ನು ಕಾಣಬಹುದು.

ಮೈಸೂರು,ಸೆ.4(ಆರ್‌ಕೆಬಿ)–ಇತ್ತೀಚೆಗೆ ರಿಯಲ್ ಎಸ್ಟೇಟ್ ಹಾವಳಿ ಜಾಸ್ತಿಯಾಗಿ ಸಹಕಾರ ಸಂಘಕ್ಕೆ ನಾನೇನು ಮಾಡಿದೆ ಎನ್ನುವ ಬದಲು ಸಹಕಾರ ಸಂಘದಿಂದ ನನಗೇನು ಸಿಗುತ್ತದೆ ಎಂಬ ಮನೋಭಾವವೇ ಹೆಚ್ಚುತ್ತಿದೆ ಎಂದು ರಾಜ್ಯ ಸಹಕಾರಿ ಮಹಾಮಂಡಳದ ಅಧ್ಯಕ್ಷರೂ ಆಗಿರುವ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡ ಬೇಸರ ವ್ಯಕ್ತಪಡಿಸಿದರು.

ಮೈಸೂರಿನ ಶಿವರಾಂಪೇಟೆಯ ಆಲಮ್ಮನವರ ಛತ್ರದಲ್ಲಿ ಭಾನುವಾರ ಮೈಸೂರಿನ ದಿ ಮೈಸೂರು ಸಿಟಿ ಕೋ–ಅಪರೇಟಿವ್ ಹೌಸಿಂಗ್ ಸೊಸೈಟಿ ಲಿಮಿಟೆಡ್‌ನ ಶತಮಾನೋತ್ಸವ ಸಮಾರಂಭದ ಉದ್ಘಾಟನೆ ನೆರವೇರಿಸಿ, ಬಳಿಕ 'ಶತ ದೀಪ್ತಿ' ಸ್ಮರಣ ಸಂಚಿಕೆ ಬಿಡುಗಡೆ ಮಾಡಿ ಮಾತನಾಡಿದರು.

ಹಲವು ಹಿರಿಯ ಸಹಕಾರಿಗಳು ದೂರದೃಷ್ಟಿ ಇಟ್ಟುಕೊಂಡು ಪರಿಶ್ರಮದಿಂದ ಪ್ರಾರಂಭಿಸಿದ 'ದಿ ಮೈಸೂರು ಸಿಟಿ ಕೋ–ಆಪರೇಟಿವ್ ಹೌಸಿಂಗ್ ಸೊಸೈಟಿ ಲಿಮಿಟೆಡ್' ಸಂಸ್ಥೆ ಇಂದು ಶತಮಾನ ಪೂರೈಸಿ, 106ನೇ ವರ್ಷ ಪೂರ್ಣಗೊಳಿಸಿದೆ. ಮನೆಗಳನ್ನು ಕಟ್ಟಲು ಸಾಲ ಮಂಜೂರು ಮಾಡುವ ಉದ್ದೇಶದಿಂದ ಅಂದಿನ ಸಹಕಾರಿಗಳು ಯಾವುದೇ ಟಿಎ–ಡಿಎ ಪಡೆಯದೇ ಸಂಸ್ಥೆಯನ್ನು ಕಟ್ಟಿ, ಬೆಳೆಸಿಕೊಂಡು ಬಂದಿದ್ದಾರೆ. ದಿ. ಹೆಚ್.ನಂಜುಂಡರಾಜ್ ಅರಸ್, ನಿವೃತ್ತ ನ್ಯಾಯಾಧೀಶರಾದ ದಿ.ಹೆಚ್.ಚನ್ನಯ್ಯ, ದಿ. ಎಂ.ಶ್ರೀನಿವಾಸರಾವ್ ನೇತೃತ್ವದಲ್ಲಿ 1916ರಲ್ಲಿ ಈ ಸಂಸ್ಥೆ ಪ್ರಾರಂಭಗೊಂಡಿತು. ಹಂತ ಹಂತವಾಗಿ ಬೆಳೆದು ಬಂದ ಸಂಸ್ಥೆ ಇಂದು ಹೆಮ್ಮರವಾಗಿ ಬೆಳೆದು, ನೂರಾರು ಸದಸ್ಯರನ್ನು ಹೊಂದಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಸ್ಮರಿಸಿದರು.

ಸಹಕಾರ ಸಂಘಗಳು ರೈತರು, ಕಾರ್ಮಿಕರು, ಗೃಹಿಣಿಯರು, ಮನೆ ಕಟ್ಟುವವರಿಗೆ ಸಾಲ ನೀಡುವ ಮೂಲಕ ಸದಸ್ಯರ ನೆರವಿಗೆ ನಿಂತಿದೆ. ಸರ್ಕಾರ ನೀಡಲಾಗದಷ್ಟು ನಿವೇಶನಗಳನ್ನು ಸಹಕಾರ ಸಂಘಗಳು ಹಂಚಿಕೆ ಮಾಡಿ ಮಾದರಿಯಾಗಿವೆ. ಕರ್ನಾಟಕದಲ್ಲಿ ಸಹಕಾರ ಸಂಘಗಳ ಯಶಸ್ವಿ ಕಾರ್ಯಗಳನ್ನು ನೋಡಿ, ಪ್ರಧಾನಿ ಮೋದಿ, ಮತ್ತು ಕೇಂದ್ರ ಸಚಿವ ಅಮಿತ್ ಶಾ ಕೇಂದ್ರದಲ್ಲಿಯೂ ಸಹಕಾರ ಇಲಾಖೆ ಪ್ರಾರಂಭಿಸಿದ್ದಾರೆ ಎಂದರು.

ಸಹಕಾರ ಸಂಘಗಳ ಸದಸ್ಯರಿಗೆ ಗ್ರಾಮೀಣ ಪ್ರದೇಶದಲ್ಲಿ ನೀಡಲಾಗುವ ಯಶಸ್ವಿನಿ ಯೋಜನೆಯ ಆರೋಗ್ಯ ಲಾಭಗಳನ್ನು ಸರ್ಕಾರ ನಗರ ಪ್ರದೇಶದ ಸಹಕಾರ ಸಂಘಗಳಿಗೂ ವಿಸ್ತರಣೆ ಮಾಡಿದೆ. ಇಂದಿನ ಯುವಕರು ಸಹಕಾರ ಕ್ಷೇತ್ರದತ್ತ ಹೆಚ್ಚು ಒಲವು ತೋರಬೇಕು. ಹೆಚ್ಚು ಸಹಕಾರ ಸಂಘಗಳನ್ನು ಸ್ಥಾಪಿಸಿ, ಜನರಿಗೆ ನೆರವಾಗುವ ನಿಟ್ಟಿನಲ್ಲಿ ಮುಂದಾಗಬೇಕು ಎಂದರು.

ಮಾಜಿ ಸಚಿವ ಸಿ.ಹೆಚ್.ವಿಜಯಶಂಕರ್ ಶಿಲಾಫಲಕ ಅನಾವರಣ ಮಾಡಿದರು. ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್ ಸಾಕ್ಷ್ಯಚಿತ್ರ ಬಿಡುಗಡೆ ಮಾಡಿದರು. ಸಂಸ್ಥೆಯ ಅಧ್ಯಕ್ಷ ಎನ್.ಶ್ರೀನಿವಾಸ್ ಅಧ್ಯಕ್ಷತೆ ವಹಿಸಿದ್ದರು. ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಕೃಷ್ಣರಾಜ ಕ್ಷೇತ್ರದ ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಸ್ಕೈಟಾಪ್ ಬಿಲ್ಡರ್ಸ್ ಪ್ರೈವೇಟ್ ಲಿ.ನ ವ್ಯವಸ್ಥಾಪಕ ನಿರ್ದೇಶಕ ಬಿ.ಎಲ್.ನಾಗೇಂದ್ರ ಪ್ರಸಾದ್, ಮೈಸೂರು ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕ ಜಿ.ಆರ್.ವಿಜಯಕುಮಾರ್, ಸಂಸ್ಥೆಯ ಉಪಾಧ್ಯಕ್ಷ ಕೆ.ಜಿ.ಶಂಕರನಾರಾಯಣ ಶಾಸ್ತ್ರಿ, ಸ್ವಾಗತ ಸಮಿತಿ ಸದಸ್ಯರಾದ ಡಿ.ದೊಡ್ಡಯ್ಯ, ಡಿ.ನಾರಾಯಣಸ್ವಾಮಿ ನಾಯ್ಡು, ಎಲ್. ವೆಂಕಟಕೃಷ್ಣ ಶಾಸ್ತ್ರಿ, ಮಂಜುನಾಥ್, ಎಂ.ಜಿ. ಹರಿಣಿ, ಬಿ.ಎ.ಪ್ರಕಾಶ್, ಬಿ.ಬೋರೇಗೌಡ, ಟಿ.ಶಾರದಮ್ಮ, ಬಿ.ನಾಗರಾಜು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮಾನಸಗಂಗೋತ್ರಿ ಜಯಲಕ್ಷ್ಮಿ ವಿಲಾಸ ಅರಮನೆ ಬೇರೊಂದು ಇಲಾಖೆಗೆ ಗುತ್ತಿಗೆ ನೀಡಲು ಹುನ್ನಾರ ಆರೋಪ

ಕೈಬಿಡದಿದ್ದರೆ ಹೋರಾಟ ಅನಿವಾರ್ಯ: ವಿಶ್ರಾಂತ ಕುಲಪತಿ ಪ್ರೊ.ಜೆ.ಶಶಿಧರಪ್ರಸಾದ್ ಎಚ್ಚರಿಕೆ



ಮೈಸೂರು, ಸೆ.4(ಆರ್‌ಕೆಬಿ)– ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸೇರಿದ ಮಾನಸಗಂಗೋತ್ರಿ ಆವರಣದಲ್ಲಿರುವ ಜಯಲಕ್ಷ್ಮಿ ವಿಲಾಸ ಅರಮನೆಯನ್ನು ಬೇರೆ ಇಲಾಖೆಗೆ ಗುತ್ತಿಗೆ ನೀಡಲು ಮುಂದಾಗಿರುವ ಮೈಸೂರು ವಿಶ್ವ ವಿದ್ಯಾನಿಲಯವು ತಕ್ಷಣ ಈ ನಿರ್ಧಾರ ಕೈಬಿಡದಿದ್ದರೆ ಹೋರಾಟ ಅನಿವಾರ್ಯವಾಗುತ್ತದೆ ಎಂದು ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಜೆ.ಶಶಿಧರಪ್ರಸಾದ್ ತಿಳಿಸಿದರು.

ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತಾಡಿದ ಅವರು, ಬೇರೆ ಇಲಾಖೆಗೆ ಪರಭಾರೆ ಮಾಡುವ ಬದಲು ಮೈಸೂರು ವಿವಿಯೇ ಕಟ್ಟಡದ ದುರಸ್ತಿ ಕಾರ್ಯ ಕೈಗೊಳ್ಳಲಿ ಎಂದು ಒತ್ತಾಯಿಸಿದರು. ಮೈಸೂರು ವಿವಿಗೆ ಒಂದು ಕ್ಯಾಂಪಸ್ ಅಗತ್ಯತೆಯನ್ನು ಮನಗಂಡು ರಾಷ್ಟ್ರಕವಿ ಕುವೆಂಪು ಅವರು ರಾಜವಂಶಸ್ಥರಿಂದ ಜಯಲಕ್ಷ್ಮೀ ವಿಲಾಸ ಅರಮನೆ ಸೇರಿದಂತೆ 360 ಎಕರೆ ಜಾಗ ಖರೀದಿಸಿ ಮಾನಸಗಂಗೋತ್ರಿಯನ್ನು ಕಟ್ಟಿದರು. ಆದರೆ, ಇಂದು ವಿವಿ ಅರಮನೆಯನ್ನು ಸಮರ್ಪಕವಾಗಿ ನಿರ್ವಹಣೆ ಮಾಡದೇ ಶಿಥಿಲಾವಸ್ಥೆ ತಲುಪಿದೆ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ಅರಮನೆ ದುರಸ್ತಿಗೆ ಭಾರೀ ಹಣ ವೆಚ್ಚ ಮಾಡಬೇಕಾಗುತ್ತದೆಂಬ ನೆಪದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯೊಂದಿಗೆ ಒಡಂಬಡಿಕೆ ಮಾಡಿಕೊಂಡು ಕನ್ನಡ ಅತ್ಯುನ್ನತ ಶಾಸ್ತ್ರೀಯ ಅಧ್ಯಯನ ಕೇಂದ್ರಕ್ಕೆ ಬಿಟ್ಟುಕೊಡಲು ನಿರ್ಧರಿಸಿರುವುದು ಸರಿಯಲ್ಲ. ಕಟ್ಟಡದಲ್ಲಿರುವ ಜಾನಪದ ವಸ್ತು ಸಂಗ್ರಹಾಲಯವನ್ನು ಮುಂದುವರೆಸಿಕೊಂಡು ಹೋಗಬೇಕು. ವಿಶ್ವವಿದ್ಯಾಲಯವೇ ಸರ್ಕಾರದಿಂದ ಅನುದಾನ ಪಡೆದು ಜಯಲಕ್ಷ್ಮೀ ವಿಲಾಸ ಅರಮನೆಯನ್ನು ದುರಸ್ತಿ ಮಾಡಿ, ನಿರ್ವಹಣೆ ಮಾಡಬೇಕು ಎಂದು ಆಗ್ರಹಿಸಿದರು.

ಮೈಸೂರು ವಿವಿ ಸಿಂಡಿಕೇಟ್ ಮಾಜಿ ಸದಸ್ಯ ಡಾ.ಕೆ. ಮಹದೇವ್ ಮಾತನಾಡಿ, 2001ರಲ್ಲಿ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾಗಿದ್ದ ಸುಧಾಮೂರ್ತಿ ಅವರು 1.7 ಕೋಟಿ ವೆಚ್ಚದಲ್ಲಿ ಸ್ವತಃ ತಾವೇ ಜಯಲಕ್ಷ್ಮೀ ವಿಲಾಸ ಅರಮನೆಯನ್ನು ದುರಸ್ತಿ ಮಾಡಿಸಿದ್ದರು. ಈ ವೇಳೆ ಕಟ್ಟಡವನ್ನು ಅನ್ಯ ಉದ್ದೇಶಗಳಿಗೆ ಬಳಸದೇ, ಈಗಿರುವ ಜಾನಪದ ವಸ್ತು ಸಂಗ್ರಹಾಲಯವನ್ನು ನಡೆಸಿಕೊಂಡು ಹೋಗುವಂತೆ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದರು.

ಆದರೆ, ಈಗಿನ ವಿವಿ ಆಡಳಿತ ಮಂಡಳಿ ಕಟ್ಟಡವನ್ನು 30 ವರ್ಷಗಳ ಅವಧಿಗೆ ಬೇರೊಂದು ಇಲಾಖೆಗೆ ಗುತ್ತಿಗೆ ನೀಡುತ್ತಿರುವುದು ಬೆಳಕಿಗೆ ಬಂದಿದೆ. ಕಾನೂನಿನಲ್ಲಿ ಇದಕ್ಕೆ ಅವಕಾಶವೂ ಇಲ್ಲ. ಹೀಗಾಗಿ, ಕೂಡಲೇ ವಿಶ್ವವಿದ್ಯಾಲಯ ತನ್ನ ನಿರ್ಧಾರವನ್ನು ಬದಲಿಸಬೇಕು. ಇಲ್ಲವಾದರೆ ಈ ಬಗ್ಗೆ ನ್ಯಾಯಾಲಯದ ಮೆಟ್ಟಿಲೇರಬೇಕಾಗುತ್ತದೆ ಎಂದು ಎಚ್ಚರಿಸಿದರು. ಪ್ರೊ. ನಂಜರಾಜ ಅರಸ್ ಮಾತನಾಡಿ, ಮೈಸೂರು ವಿವಿ ತನ್ನ ಮಾತೃ ಸ್ಥಳಗಳನ್ನು ಒಂದೊಂದಾಗಿ ಹರಾಜು ಹಾಕುತ್ತಿದೆ. ಮಾನಸಗಂಗೋತ್ರಿಯನ್ನು ಕಟ್ಟಿದ್ದು ಕುವೆಂಪು ಅವರು. ಇದಕ್ಕೆ ಜಯಲಕ್ಷ್ಮೀ ವಿಲಾಸ ಅರಮನೆ ಮುಕುಟವಿದ್ದಂತೆ. ಆದರೆ ಕಟ್ಟಡವನ್ನು ನಿರ್ವಹಣೆ ಮಾಡದ ಹಿನ್ನೆಲೆ ಸಂಪೂರ್ಣ ಹಾಳಾಗಿದೆ. ಈಗ ಆ ಕಟ್ಟಡವನ್ನು ಕನ್ನಡ ಅತ್ಯುನ್ನತ ಶಾಸ್ತ್ರೀಯ ಅಧ್ಯಯನ ಕೇಂದ್ರಕ್ಕೆ ನೀಡಲು ಹುನ್ನಾರ ನಡೆಸಿದೆ. ವಿವಿ ಈ ನಿರ್ಧಾರದಿಂದ ಹಿಂದೆ ಸರಿಯದಿದ್ದರೆ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಸೋಮಸುಂದರ್, ಭಾನುಮೋಹನ್, ಅರವಿಂದ ಶರ್ಮ, ಕೆಆರ್‌ಎಸ್ ಪಕ್ಷದ ಮಾ.ಸ. ಪ್ರವೀಣ್, ನಾಗರಾಜು, ವಿಜಯ್‌ಕುಮಾರ್, ರವಿಕುಮಾರ್, ಮಹದೇವಪ್ಪ ಉಪಸ್ಥಿತರಿದ್ದರು.

ಕಾರು ಮಾರಾಟ ಮಾಡುವುದಾಗಿ ನಂಬಿಸಿ ವ್ಯಾಪಾರಿಗೆ 9.80 ಲಕ್ಷ ರೂ. ವಂಚನೆ

ಮೈಸೂರು,ಸೆ.4–ಕಾರು ಮಾರಾಟ ಮಾಡುವುದಾಗಿ ಚಿನ್ನ, ಬೆಳ್ಳಿ ವ್ಯಾಪಾರಿಗೆ 9.80 ಲಕ್ಷರೂ. ವಂಚಿಸಲಾಗಿದೆ. ಮೈಸೂರಿನ ಜಯನಗರ ನಿವಾಸಿ ವಿ.ನಾಗರಾಜು (38) ವಂಚನೆಗೊಳಗಾದವರಾಗಿದ್ದು, ಇವರಿಗೆ ಪರಿಚಯವಿದ್ದ ತುಮಕೂರಿನ ಚೌಡಯ್ಯ(48) ಮತ್ತು ಬೆಂಗಳೂರಿನ ಟಿ.ಸೂರ್ಯ(29) ವಂಚನೆ ಆರೋಪಕ್ಕೆ ಗುರಿಯಾಗಿರುವವರು.

ಚೌಡಯ್ಯ ತನ್ನ ಫಾರ್ಚುನರ್ ಕಾರ್ (ಕೆಎ03 ಎಂಎ01539)ಅನ್ನು ನಾಗರಾಜು ಅವರಿಗೆ ಮಾರಾಟ ಮಾಡುವುದಾಗಿ ತಿಳಿಸಿ, 9.80 ಲಕ್ಷ ರೂ. ಪಡೆದಿದ್ದಾರೆ. ಈ ಕಾರಿನ ಮೇಲೆ ತುಮಕೂರಿನ ಟಿವಿಎಸ್ ಫೈನಾನ್ಸ್‌ನಲ್ಲಿ ಇದ್ದ 2 ಲಕ್ಷ ರೂ. ಸಾಲವನ್ನೂ ನಾಗರಾಜು ಅವರೇ ಪಾವತಿಸಿದ್ದಾರೆ. ಆದರೆ ಫೈನಾನ್ಸ್‌ನಿಂದ ಪಡೆದ ಸಾಲ ತೀರುವಳಿಯಾದ ಎನ್‌ಓಸಿಯನ್ನು ನಾಗರಾಜು ಅವರಿಗೆ ನೀಡದೇ ಕಾರನ್ನು ಸೂರ್ಯ ಅವರಿಗೆ ಮಾರಾಟ ಮಾಡಲಾಗಿದೆ. ಚೌಡಯ್ಯ ಮತ್ತು ಸೂರ್ಯ ಸಂಚು ನಡೆಸಿ ತನಗೆ ವಂಚಿಸಿದ್ದಾರೆ ಎಂದು ನಾಗರಾಜು ನೀಡಿದ್ದ ದೂರನ್ನು ಅಶೋಕಪುರಂ ಠಾಣೆ ಪೊಲೀಸರು ದಾಖಲಿಸಿಕೊಂಡಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

5.09.2022 ಸೋಮವಾರ, ಮಳೆ ನಕ್ಷತ್ರ: ಪುಬ್ಬ, 31.08.2022ರಿಂದ 13.09.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಶುಕ್ಲ ಪಕ್ಷ,
ತಿಥಿ:ದಶಮಿ, ನಕ್ಷತ್ರ: ಮೂಲ, ರಾಹುಕಾಲ: ಬೆಳಗ್ಗೆ 7.30 ರಿಂದ 9ರವರೆಗೆ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ 19ನೇ ಚಾತುರ್ಮಾಸ್ಯ ವ್ರತ ದೀಕ್ಷಾ ಮಹೋತ್ಸವ. ಶ್ರೀ ಚಕ್ರ ಪೂಜೆ, ಮಹಾಗಣಪತಿ ಹೋಮ, ಬೆಳಗ್ಗೆ 7 ಗಂಟೆಗೆ, ಎಸ್‌ಜಿಎಸ್ ವಿದ್ಯಾಸಂಸ್ಥೆ ಉಪಾಧ್ಯಾಯರಿಗೆ ಸನ್ಮಾನ, ಸಂಜೆ. ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ.

■ **ಮೈಸೂರು ವಿಶ್ವವಿದ್ಯಾನಿಲಯ:** ಶಿಕ್ಷಕರ ದಿನಾಚರಣೆ. ಮುಖ್ಯ ಅತಿಥಿ: ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರ ವಿಜ್ಞಾನ ಸಂಸ್ಥೆಯ ನಿರ್ದೇಶಕರಾದ ಡಾ. ಪ್ರತಿಮಾ ಮೂರ್ತಿ. ಉಪನ್ಯಾಸ: 'ಯಶಸ್ಸನ್ನು ಸಾಧಿಸುವುದು' ವಿಷಯ ಕುರಿತು ಶಿಕ್ಷಕರ ದಿನದ ಉಪನ್ಯಾಸ ನೀಡುವವರು ಮಂಡ್ಯ ಚಿನ್ಮಯ ಮಿಷನ್ ಆಚಾರ್ಯ ಶ್ರೀ ಸ್ವಾಮಿ ಆದಿತ್ಯಾನಂದಜೀ, ಅಧ್ಯಕ್ಷತೆ; ಮೈಸೂರು ವಿವಿ ಕುಲಪತಿ ಪ್ರೊ. ಜಿ.ಹೇಮಂತ ಕುಮಾರ್. ಸ್ಥಳ: ವಿಜ್ಞಾನ ಭವನ, ಮಾನಸ ಗಂಗೋತ್ರಿ, ಮೈಸೂರು ವಿವಿ. ಬೆಳಗ್ಗೆ 11 ಗಂಟೆಗೆ.

■ **ಶ್ರೀ ನಟರಾಜ ಪ್ರತಿಷ್ಠಾನ, ಶ್ರೀ ನಟರಾಜ ಶಿಕ್ಷಣ ಸಂಸ್ಥೆಗಳು:** ಶಿಕ್ಷಕರ ದಿನಾಚರಣೆ. ದಿವ್ಯ ಸಾನಿಧ್ಯ: ಶ್ರೀ ನಟರಾಜ ಪ್ರತಿಷ್ಠಾನದ ಅಧ್ಯಕ್ಷ ಶ್ರೀ ಚಿದಾನಂದ ಮಹಾಸ್ವಾಮಿಗಳು. ಉದ್ಘಾಟನೆ: ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ. ಸರ್ವಪಲ್ಲಿ ಡಾ.ರಾಧಾಕೃಷ್ಣ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ: ತುಮಕೂರು ವಿವಿ ವಿಶ್ರಾಂತ ಕುಲಪತಿ ಡಾ.ವೈ.ಎಸ್.ಸಿದ್ದೇಗೌಡ. ಸ್ಥಳ: ಶ್ರೀ ನಟರಾಜ ಸಭಾಭವನ ಬೆಳಗ್ಗೆ 10.30ಕ್ಕೆ.

■ **ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಾರ್ವಜನಿಕ ಶಿಕ್ಷಣ ಇಲಾಖೆ:** ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮ ದಿನಾಚರಣೆ ಅಂಗವಾಗಿ ಜಿಲ್ಲಾ ಮಟ್ಟದ ಶಿಕ್ಷಕರ ದಿನಾಚರಣೆ–2022. ಜಿಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕಾರ ಸಮಾರಂಭ. ಉದ್ಘಾಟನೆ: ಸಹಕಾರ ಮತ್ತು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್. ಅಧ್ಯಕ್ಷತೆ: ಶಾಸಕ ಎಲ್.ನಾಗೇಂದ್ರ. ಮುಖ್ಯ ಅತಿಥಿಗಳು: ಹಂಗಾಮಿ ಮೇಯರ್ ಶ್ರೀಮತಿ ಸುನಂದಾ ಪಾಲನೇತ್ರ, ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸಪ್ರಸಾದ್. ಶ್ರೀಮತಿ ಸುಮಲತಾ ಅಂಬರೀಷ್. ಸ್ಥಳ: ಕರ್ನಾಟಕ ಕಲಾಮಂದಿರ. ಬೆಳಗ್ಗೆ 10 ಗಂಟೆಗೆ.

■ **ವಿದ್ಯಾವರ್ಧಕ ಸಂಘ, ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು:** ಪ್ರಥಮ ವರ್ಷದ ಪದವಿ ವಿದ್ಯಾರ್ಥಿಗಳಿಗೆ ಪರಿಚಯ ಕಾರ್ಯಕ್ರಮ ಮತ್ತು ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನ. ಉದ್ಘಾಟನೆ: ಶ್ರೀರಾಮಕೃಷ್ಣ ಆಶ್ರಮದ ಶ್ರೀಮತ್ ಸ್ವಾಮಿ ಸರ್ವಜಯನಂದಜೀ ಮಹಾರಾಜ್. ಅಧ್ಯಕ್ಷತೆ: ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ. ಸ್ಥಳ: ಶ್ರೀ ಪಿ.ಎಂ. ಚಿಕ್ಕಬೋರಯ್ಯ ಹಾಲ್, ಕಾಲೇಜು ಆವರಣ. ಬೆಳಗ್ಗೆ 10 ಗಂಟೆಗೆ.

■ **ಶ್ರೀ 101 ಗಣಪತಿ ದೇವಸ್ಥಾನ ಟ್ರಸ್ಟ್:** ಶ್ರೀ ಗೌರಿ–ಗಣೇಶ ಹಬ್ಬ ಮತ್ತು ಶ್ರೀ 101 ಗಣಪತಿ ಪ್ರತಿಷ್ಠಾಂಗ 68ನೇ ವಾರ್ಷಿಕೋತ್ಸವದ ಪ್ರಯುಕ್ತ ವಿಶೇಷ ಪೂಜಾ ಕಾರ್ಯಕ್ರಮ. ಎಂ.ಬಿ.ನಾಗಶ್ರೀ ಮತ್ತು ತಂಡದವರಿಂದ ಭರತನಾಟ್ಯ ಕಾರ್ಯಕ್ರಮ. ಸ್ಥಳ: ಶ್ರೀ ಗಣಪತಿ ದೇವಸ್ಥಾನ, ಕೆ.ಆರ್.ಮೊಹಲ್ಲಾ. ಸಂಜೆ 7 ಗಂಟೆಯಿಂದ.

■ **ಗಾನ ಭಾರತೀ (ವೀಣೆ ಶೇಷಣ್ಣ ಭವನ):** ಸೆಪ್ಟೆಂಬರ್ ತಿಂಗಳ ಕಾರ್ಯಕ್ರಮ. ವೈ.ವಿ.ಸುಬ್ರಮಣ್ಯ ಸಂಸ್ಮರಣಾ ಸಂಗೀತ ಕಚೇರಿ. ಗಾಯನ: ವಿದುಷಿ ಅಮೃತ ಮುರಳಿ, ಪಿಟೀಲು: ವಿದ್ವಾನ್ ಆರ್.ಕೆ.ಶ್ರೀರಾಮಕುಮಾರ್, ಮೃದಂಗ: ವಿದ್ವಾನ್ ತುಮಕೂರು ಬಿ.ರವಿಶಂಕರ್, ಘಟ: ವಿದ್ವಾನ್ ಜಿ.ಎಸ್.ರಾಮಾನುಜನ್. ಸ್ಥಳ: ಗಾನಭಾರತಿ, ವೀಣೆಶೇಷಣ್ಣ ಭವನ. ಸಂಜೆ 6 ಗಂಟೆಗೆ.

■ **ರಾಷ್ಟ್ರೀಯ ಕ್ರೀಡಾ ದಿನಾಚರಣೆ ಸಮಿತಿ:** ಮೇಜರ್ ಧ್ಯಾನ್‌ಚಂದ್ ಸ್ಮಾರಕ ಜಿಲ್ಲಾ ಮಟ್ಟದ ಬಾಲಕ ಮತ್ತು ಬಾಲಕಿಯರ ಹಾಕಿ ಪಂದ್ಯಾವಳಿ ಸಮಾರೋಪ ಸಮಾರಂಭ. ಅಧ್ಯಕ್ಷತೆ: ಮುಕ್ತ ವಿವಿ ಸಿಂಡಿಕೇಟ್ ಸದಸ್ಯ ಲ। ಎನ್.ಕೃಷ್ಣೇಗೌಡ. ಮುಖ್ಯ ಅತಿಥಿ: ಮುಕ್ತ ವಿವಿ ಕುಲಪತಿ ಪ್ರೊ. ಎಸ್.ವಿದ್ಯಾಶಂಕರ್. ಸ್ಥಳ: ವಿಶ್ವವಿದ್ಯಾನಿಲಯ ಹಾಕಿ ಮೈದಾನ, ಮೈಸೂರು. ಮಧ್ಯಾಹ್ನ 3.30ಕ್ಕೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಮಹಿಳೆಯರಲ್ಲಿ ಋತು ಬಂಧದ ಸಮಸ್ಯೆ ಕುರಿತು ಚಿಕಿತ್ಸಾ ಶಿಬಿರ. ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9.30ರಿಂದ.

■ **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್:** ಆರೋಗ್ಯ ಶಿಬಿರ. ಸ್ಥಳ: ಶ್ರೀ ಗಣಪತಿ ದೇವಸ್ಥಾನ ಸಮಿತಿ, ಕೆಹೆಚ್‌ಬಿ ಕಾಲೋನಿ, 3ನೇ ಹಂತ, ಕುವೆಂಪುನಗರ. ಬೆಳಗ್ಗೆ 10.30ಕ್ಕೆ.

■ **ಎಸ್‌ಪಿವಿಜಿಎಂಸಿ ಟ್ರಸ್ಟ್:** 61ನೇ ಪಾರಂಪರಿಕ ಸಂಗೀತೋತ್ಸವ. ಸಂಜೆ 5.30 ರಿಂದ ಕಾವ್ಯವಾಚನ: 'ಭಿಕ್ಷಾಟನ ಲೀಲೆ'– ವಿದುಷಿ ಪದ್ಮಲತಾ ನಾಗೇಶ್, ಶ್ರೀ ಮೊರಬದ ಮಲ್ಲಿಕಾರ್ಜುನ. ಸಂಜೆ 6.45ಕ್ಕೆ ಗಾಯನ. ವೀಣೆ: ವಿದುಷಿ ಜಯಂತಿ ಕುಮರೇಶ್, ವಯೋಲಿನ್: ವಿದ್ವಾನ್ ಕುಮರೇಶ್, ಮೃದಂಗ: ವಿದ್ವಾನ್ ಅನಂತ ಆರ್. ಕೃಷ್ಣನ್, ಘಟ: ವಿದ್ವಾನ್ ಗಿರಿಧರ ಉಡುಪ. ಸ್ಥಳ: 8ನೇ ಕ್ರಾಸ್, ವಿವಿ ಮೊಹಲ್ಲಾ.

■ **ಗೋಲ್ಡನ್ ಕ್ರೀಪರ್ ಎಂಟರ್ ಪ್ರೈಸಸ್:** ಜುವೆಲರಿ ಶೋ. ಸ್ಥಳ: ರ್‍ಯಾಡಿಷನ್ ಬ್ಲೂ ಪ್ಲಾಜಾ. ಬೆಳಗ್ಗೆ 10ರಿಂದ.

ಸುತ್ತೂರು (ನಂಜನಗೂಡು ತಾಲೂಕು)

■ **ಜೆಎಸ್‌ಎಸ್ ಸಂಸ್ಥೆಗಳು, ಸುತ್ತೂರು:** ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ 107ನೇ ಜಯಂತಿ ಮಹೋತ್ಸವ ಹಾಗೂ ಶಿಕ್ಷಕರ ದಿನಾಚರಣೆ. ಸಮ್ಮುಖ; ಬರಡನಪುರದ ಶ್ರೀ ಮಹಂತೇಶ್ವರ ಪಟ್ಟದ ಮಠದ ಶ್ರೀ ಪರಶಿವಮೂರ್ತಿ ಸ್ವಾಮಿಗಳು. ಅಧ್ಯಕ್ಷತೆ: ಜೆಎಸ್‌ಎಸ್ ಸಂಸ್ಥೆಗಳ ಆಡಳಿತಾಧಿಕಾರಿ ಎಸ್.ಪಿ.ಉದಯ್ ಶಂಕರ್. ಸ್ಥಳ: ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಶಿಕ್ಷಣ ಸಮುಚ್ಚಯ, ಸುತ್ತೂರು. ಬೆಳಗ್ಗೆ 9 ಗಂಟೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ–ಹರಳೂರು ಶಿವಕುಮಾರ್, 6.20 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ: ಶತಮಾನದ ಸ್ಮರಣೆಗಳು, ಮಂಡ್ಯ ಜಿಲ್ಲೆಯ ಶತಮಾನದ ನೆನಪುಗಳು, ಲೇಖನ ಪ್ರಸ್ತುತಿ: ಡಿ.ಎನ್. ಶ್ರೀಪಾದ್, 6.40 ಭಾವಗೀತೆ, ಹೆಚ್.ಕೆ.ನಾರಾಯಣ, ಸುಲೋಚನ, 6.45 ರೈತರಿಗೆ ಸಲಹೆ, 6.50 ವನಮಹೋತ್ಸವ ಅರಣ್ಯ ಇಲಾಖೆಯ ಪ್ರಾಯೋಜಿತ ಕಾರ್ಯಕ್ರಮ, 7.45 ನಿತ್ಯ ವಿಜ್ಞಾನ, 9.05 ಸಂತೂರ್ ಸ್ಕಾಲರ್ ಶಿಪ್ –ವಿಪ್ರೋ ಫೌಂಡೇಶನ್ ಪ್ರಾಯೋಜಿತ ಕಾರ್ಯಕ್ರಮ, 9.20 "ಶಿಕ್ಷ ರಾಷ್ಟ್ರ ರಕ್ಷಕ" ರೂಪಕ, ರಚನೆ ಮತ್ತು ಪ್ರಸ್ತುತಿ: ಸುರೇಖಾ ಸುರೇಶ. 9.45 ದುಡ್ಡು ದೊಡ್ಡಪ್ಪನೆ ಮಾತನಾಡುತ್ತಾರೆ ಎಂ.ಡಿ.ಗೋರೇರಿ, 10.00 ಲಯಸಂಭ್ರಮ ತಾಳ, ಲಯ, ರಸಾಸ್ವಾದ, ಶಿಕ್ಷಕರ ದಿನಾಚರಣೆಯ ಸಂದರ್ಭದಲ್ಲಿ ವಿಶೇಷ ಲಯ ಸಂಭ್ರಮ "ತಸ್ಮೈ ಶ್ರೀ ಗುರವೇ ನಮ"– ರಚನೆ ಮತ್ತು ನಿರೂಪಣೆ: ಡಾ.ಜ್ಯೋತಿ ಶಂಕರ್, ಪರಿಕಲ್ಪನೆ ಮತ್ತು ಪ್ರಸ್ತುತಿ: ಹೆಚ್.ಎಲ್.ಶಿವಶಂಕರಸ್ವಾಮಿ ನಿರ್ಮಾಣ: ಎಸ್. ಸುಬ್ರಹ್ಮಣ್ಯ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ, 12.30 ಭಕ್ತಿಗೀತೆಗಳು – ಎಸ್.ಶಂಕರ್, ವೃಂದಗಾನ, 12.45 ನಮ್ಮ ಆರೋಗ್ಯ "ಕಣ್ಣಿನ ರಕ್ಷಣೆ ಕುರಿತು ಡಾ.ಶುಭ್ರತಾ ಎಸ್. ಹೆಗಡೆ ಅವರೊಂದಿಗೆ ಮಾತುಕತೆ, 1.20 ಭಾವಗೀತೆಗಳು–ಅಮೃತಾ ನಿತಿನ್ ಶಾಸ್ತ್ರಿ, 3.00 ವಿ.ವಂಶಿಧರ್ ವೇಣುವಾದನ, 4.30 ಝೇಂಕಾರ ಮಕ್ಕಳ ಗೀತ ಗಾಯನ ಕಲಿಕಾ ಕಾರ್ಯಕ್ರಮ, ಕವಿ: ದಿವಾಕರ ಹೆಗಡೆ, ಸಂಗೀತ: ನಿತಿನ್ ರಾಜಾರಾಂ ಶಾಸ್ತ್ರಿ, ಚಾಮರಾಜನಗರ ನಾದಾಮೃತ ಸಂಗೀತ ವಿದ್ಯಾಲಯದ ಮಕ್ಕಳು 6.50 ಕೃಷಿರಂಗ ಹೂವು ಹಾಗೂ ಸುಗಂಧ ಸಸ್ಯಗಳ ಕೃಷಿಯಲ್ಲಿನ ಅನುಭವ ಕುರಿತು ಬಿ.ಎನ್.ನಾಗೇಶ್ ಅವರೊಡನೆ ಸಂದರ್ಶನ, 9.30 "ನೆಲ ಮೂಲ" ? ಜನಪದ ಆಚರಣೆ ಮತ್ತು ಸಂಪ್ರದಾಯಗಳನ್ನು ಕುರಿತ ಸರಣಿ ಕಾರ್ಯಕ್ರಮ. ರಚನೆ: ಡಾ.ಪಿ.ಕೆ.ರಾಜಶೇಖರ್ ಪ್ರಸ್ತುತಿ: ಡಾ.ಮೈಸೂರು ಉಮೇಶ್, 10.00 ನಾಟಕ "ಬಾಪೂಜಿಯ ಆ ಮುರಿದ ಹಲ್ಲು" ನಿರ್ಮಾಣ: ಪ್ರಭುಸ್ವಾಮಿ ಮಳಿಮಠ

ಮೈಸೂರು ಮಿತ್ರ

ಮೈಸೂರು ದಸರಾ ಮಹೋತ್ಸವ-2022

ದಸರಾ ಕುಸ್ತಿ ಅಖಾಡಕ್ಕಿಳಿಯಲು ಮೈಸೂರು ಪೈಲ್ವಾನರು ಸಜ್ಜು



ಪೈ. ಆರ್. ಯಶವಂತ್



ಪೈ. ಬಸವರಾಜು



ಪೈ. ಭೈರಪ್ಪ ನಾಯಕ



ಸಾಹುಕಾರ್ ಚೆನ್ನಯ್ಯ ಕುಸ್ತಿ ಅಖಾಡದಲ್ಲಿ ಕೆ.ಶ್ರೀನಿವಾಸ್‌ಗೌಡ ನೇತೃತ್ವದಲ್ಲಿ ಕುಸ್ತಿ ತರಬೇತಿ ನೀಡುತ್ತಿರುವುದು

● ಮೋಹನ್ ಕಾಯಕ

ಮೈಸೂರು, ಸೆ.4– ವಿಶ್ವವಿಖ್ಯಾತ ಮೈಸೂರು ದಸರಾ ಕುಸ್ತಿ ಅಖಾಡಕ್ಕಿಳಿಯಲು ರೆಡಿಯಾಗುತ್ತಿರುವ ಪೈಲ್ವಾನರು, ಅಖಾಡದಲ್ಲಿ ಎದುರಾಳಿಗೆ ಮಣ್ಣು ಮುಕ್ಕಿಸುವುದಾಗಿ ಶಪಥ ಮಾಡುತ್ತಿದ್ದಾರೆ....

ಕೊರೊನಾ ಕರಿನೆರಳು ಸರಿದ ಬಳಿಕ ಅದ್ದೂರಿ ದಸರಾ ಆಚರಣೆಯ ಕಾತುರತೆ ಹೆಚ್ಚಾಗಿದ್ದು, ಕುಸ್ತಿ ಪೈಲ್ವಾನರು ತೊಡೆ ತಟ್ಟುವ ತವಕದಲ್ಲಿದ್ದಾರೆ. ದಸರಾ ಕಂಠೀರವ, ದಸರಾ ಕೇಸರಿ, ದಸರಾ ಕುಮಾರನಾಗಿ ವಿಜೃಂಭಿಸಲು ಕಠಿಣ ಕಸರತ್ತು ನಡೆಸುತ್ತಿದ್ದಾರೆ. ಏಟಿಗೆ ಎದುರೇಟು, ತಂತ್ರಕ್ಕೆ ಪ್ರತಿತಂತ್ರ ರೂಪಿಸುತ್ತಿದ್ದಾರೆ.

ಮೈಸೂರಿನಾದ್ಯಂತ ಇರುವ ಸುಮಾರು 35 ಗರಡಿ ಮನೆಗಳಲ್ಲಿ ಮಟ್ಟಿ(ಮಣ್ಣಿನ ಅಖಾಡ) ಹದಗೊಳಿಸಿ, ಹಿರಿಯ ಕುಸ್ತಿ ಪೈಲ್ವಾನರಿಂದ ಮಾರ್ಗದರ್ಶನ ಪಡೆಯುತ್ತಿರುವ ಪೈಲ್ವಾನರು ಮುಂಜಾನೆ 3 ಗಂಟೆಯಿಂದಲೇ ಗಂಟೆಗಟ್ಟಲೇ ವ್ಯಾಯಾಮದ ಮೂಲಕ ದೇಹವನ್ನು ಮತ್ತಷ್ಟು ಬಲಿಷ್ಠವನ್ನಾಗಿಸಿಕೊಳ್ಳುತ್ತಿದ್ದಾರೆ.

ವಿಶೇಷವೆಂದರೆ ದಸರಾ ಕುಸ್ತಿ ಅಖಾಡದಲ್ಲಿ ರೋಚಕ ಕ್ಷಣಗಳಿಗೆ ಸಾಕ್ಷಿಯಾಗುವ ನಾಡಕುಸ್ತಿಯಲ್ಲಿ ಭಾಗವಹಿಸುವ ಪೈಲ್ವಾನರನ್ನು ಕಾಯುವುದಕ್ಕಾಗಿಯೇ ಕೆಲ ಪೈಲ್ವಾನರನ್ನು ನೇಮಕಗೊಳಿಸಿ ತರಬೇತಿ ನೀಡಲಾಗುತ್ತಿದೆ. ಪೈಲ್ವಾನ್ ಇಡೀ ದಿನ ಏನೆಲ್ಲಾ ಕಸರತ್ತುಗಳನ್ನು ಮಾಡಬೇಕು. ಯಾವ ರೀತಿ ಆಹಾರ ಸೇವಿಸಬೇಕು. ಎಷ್ಟು ಸಮಯ ನಿದ್ರಿಸಬೇಕು ಎಂಬುದೆಲ್ಲವನ್ನು ಗಮನಿಸಲಾಗುತ್ತಿದೆ.

ಹಿರಿಯ ಕುಸ್ತಿ ತರಬೇತುದಾರರಾದ ಎಲ್.ಮಂಜಪ್ಪ ನೇತೃತ್ವದಲ್ಲಿ ಮೈಸೂರಿನ ಲಯನ್ಸ್ ಕ್ಲಬ್ ಆವರಣದಲ್ಲಿ ತರಬೇತಿ ನಡೆಯುತ್ತಿದ್ದರೆ, ನಿವೃತ್ತ ತರಬೇತುದಾರ ಕೆ.ಶ್ರೀನಿವಾಸ್‌ಗೌಡ ನೇತೃತ್ವದಲ್ಲಿ ಸಾಹುಕಾರ್ ಚೆನ್ನಯ್ಯ ಕುಸ್ತಿ ಅಖಾಡದಲ್ಲಿ ಜಯಚಾಮರಾಜ ಒಡೆಯರ್ ಗರಡಿ ಸಂಘದ ಸಹಕಾರರದೊಂದಿಗೆ ತರಬೇತಿ ನೀಡಲಾಗುತ್ತಿದೆ. ಹಾಗೆಯೇ ಪಡುವಾರಹಳ್ಳಿ ಹತ್ತೂ ಜನಗಳ ಗರಡಿ, ಸುಣ್ಣಕೇರಿ ಬೆಸ್ತರ ಕಾಳಣ್ಣನವರ ಗರಡಿ, ಭೂತಪ್ಪನ ಗರಡಿ, ಕ್ಯಾತಮಾರನಹಳ್ಳಿ ಹತ್ತೂ ಜನಗಳ ಗರಡಿ, ಇಸ್ಕಾನ್ ಗರಡಿ, ಇಟ್ಟಿಗೆಗೂಡು ಗರಡಿ, ಕೆ.ಜಿ.ಕೊಪ್ಪಲು ಗರಡಿ ಮನೆಗಳಲ್ಲಿ ಪೈಲ್ವಾನರು ಬೆವರು ಹರಿಸುತ್ತಿದ್ದಾರೆ.

ಬರೋಬ್ಬರಿ 200ಕ್ಕೂ ಹೆಚ್ಚು ಜೋಡಿ: ನಾಡಹಬ್ಬ ದಸರಾ ಮಹೋತ್ಸವದಲ್ಲಿ ಕುಸ್ತಿಗೆ ವಿಶೇಷ ಸ್ಥಾನ. ಇದಕ್ಕೆ ಕುಸ್ತಿಗಿಳಿಯುವ ಜೋಡಿಗಳ ಸಂಖ್ಯೆ ಮುಖ್ಯ ಕಾರಣವಾಗಿದೆ. 7 ದಿನಗಳು ನಡೆಯುವ (ನಾಡಕುಸ್ತಿ ಮತ್ತು ಪಾಯಿಂಟ್ ಕುಸ್ತಿ) ದಸರಾ ಕುಸ್ತಿ ಪಂದ್ಯಾವಳಿಯಲ್ಲಿ ಮೈಸೂರು ಸೇರಿದಂತೆ ರಾಜ್ಯದ ಬಹುತೇಕ ಎಲ್ಲಾ ಜಿಲ್ಲೆಗಳಿಂದ ಸುಮಾರು 200ಕ್ಕೂ ಜೋಡಿ(ಪ್ರತಿನಿತ್ಯ 30 ಜೋಡಿ) ಅಂದರೆ 400ಕ್ಕೂ ಹೆಚ್ಚು ಪೈಲ್ವಾನರು ಅಖಾಡದಲ್ಲಿ ಸೆಣಸಾಡಲಿದ್ದಾರೆ. ಅದರಲ್ಲೂ ಮುಖ್ಯವಾಗಿ ಬೆಂಗಳೂರು, ಚಾಮರಾಜನಗರ, ಬೆಳಗಾವಿ, ಧಾರಾವಾಡ, ಮುಧೋಳ್, ಜಮಖಂಡಿ, ಬಾಗಲಕೋಟೆ, ಚಿಕ್ಕೋಡಿ, ಕನಕಪುರ ಸೇರಿದಂತೆ ರಾಜ್ಯದ ಮೂಲೆ ಮೂಲೆಯಿಂದಲೂ ಪೈಲ್ವಾನರು ಆಗಮಿಸುತ್ತಾರೆ.

ನಾಡಕುಸ್ತಿಯಲ್ಲಿ ಭಾಗವಹಿಸುವವರೇ ಹೆಚ್ಚು: ಮೈಸೂರು ದಸರಾದಲ್ಲಿ ಮ್ಯಾಟ್ ಮೇಲೆ ನಡೆಯುವ ಕುಸ್ತಿಗಿಂತ ಮಟ್ಟಿ ಮೇಲೆ ನಡೆಯುವ ನಾಡಕುಸ್ತಿಯಲ್ಲಿ ಹೆಚ್ಚು ಪೈಲ್ವಾನರು ಭಾಗವಹಿಸುತ್ತಾರೆ. ಚಿಕ್ಕ ವಯಸ್ಸಿನ ಪೈಲ್ವಾನ್‌ನಿಂದ ಹಿಡಿದು 90 ಕೆಜಿಗೂ ಹೆಚ್ಚು ತೂಕದ ವಿಭಾಗದಲ್ಲಿ ಪೈಲ್ವಾನರು ಸೆಣಸಲಿದ್ದಾರೆ. ಮೈಸೂರಿನಲ್ಲಿಯೇ ಸುಮಾರು 100ಕ್ಕೂ ಹೆಚ್ಚು ಪೈಲ್ವಾನರು ನಾಡಕುಸ್ತಿಯಲ್ಲಿ ಭಾಗವಹಿಸಲಿದ್ದಾರೆ. ಒಂದೊಂದು ಗರಡಿ ಮನೆಯಲ್ಲೂ ಐದಾರು ಮಂದಿ ಪೈಲ್ವಾನರು ದಸರಾ ನಾಡಕುಸ್ತಿಗಾಗಿಯೇ ತರಬೇತಿ ನಡೆಸುತ್ತಿದ್ದಾರೆ. ಅಲ್ಲದೆ ಕೆಲ ಪೈಲ್ವಾನರು ಮಟ್ಟಿ ಹಾಗೂ ಮ್ಯಾಟ್‌ನಲ್ಲೂ ಕುಸ್ತಿ ಮಾಡಲಿದ್ದಾರೆ.

ಮರೆಯಾಗುತ್ತಿರುವ ಗರಡಿ ಮನೆಗಳು: ಮೈಸೂರು ಮಹಾರಾಜರ ಕಾಲದಲ್ಲಿ ಹಾಗೂ ನಂತರದ 20–30 ವರ್ಷಗಳಲ್ಲಿ ಇದ್ದಂತಹ ಗರಡಿ ಮನೆಗಳು ಇಂದಿಲ್ಲ. ಮೈಸೂರು ನಗರದಲ್ಲೇ ಇದ್ದ ಸುಮಾರು 74 ಗರಡಿ ಮನೆಗಳ ಸಂಖ್ಯೆ ಈಗ ಸುಮಾರು 30ಕ್ಕೆ ಇಳಿದಿದೆ ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಯಾದ್ಯಂತ ಇದ್ದ ಸುಮಾರು 240 ಗರಡಿ ಮನೆಗಳು ದಿನ ಕಳೆದಂತೆ ಕಣ್ಮರೆಯಾಗುತ್ತಿವೆ. ಇದಕ್ಕೆ ಗರಡಿ ಮನೆಗಳಿಗೆ ದೊರಕದ ಪ್ರೋತ್ಸಾಹ, ಮಟ್ಟಿಯಲ್ಲಿ ಕುಸ್ತಿಯಾಡುವ ಪೈಲ್ವಾನರಿಗೆ ನೀಡದ ಮನ್ನಣೆ ಮುಖ್ಯ ಕಾರಣವಾಗಿದೆ. ಹಲವು ಗರಡಿ ಮನೆಗಳ ನಿರ್ವಹಣೆಯನ್ನು ಆಯಾ ಗ್ರಾಮಸ್ಥರು, ಕೆಲ ಮುಖಂಡರು ನೋಡಿಕೊಂಡರೆ, ಕೆಲ ಹಿರಿಯ ಕುಸ್ತಿ ಪಟುಗಳು ಆಗಾಗ ತರಬೇತಿ ನೀಡುವ ಮೂಲಕ ಕುಸ್ತಿ ಕಲೆಯನ್ನು ಇನ್ನೂ ಜೀವಂತವಾಗಿರುವ ಪ್ರಯತ್ನ ನಡೆಸುತ್ತಿದ್ದಾರೆ.

ನಾಡಕುಸ್ತಿ ಎಂಬುದೇ ರಣರೋಚಕ...

ನಾಡಕುಸ್ತಿ ಪಂದ್ಯಗಳನ್ನು ನೋಡುವುದೇ ರೋಚಕ. ನಾಡಕುಸ್ತಿಯಲ್ಲಿ ಪೈಲ್ವಾನರು ಸವಾಲಿನ ಮೇಲೆ ಜೋಡಿ ಕಟ್ಟಲಾಗುವುದು. ಇದರಲ್ಲಿ ವಯಸ್ಸಿನ ಹಾಗೂ ತೂಕದ ಲೆಕ್ಕ ಇರುವುದಿಲ್ಲ. ಯಾರು ಯಾರಿಗೆ ಬೇಕಾದರೂ ಸವಾಲು ಹಾಕಿ ಸೆಣಸಾಡಬಹುದು ಎಂದು ಹಿರಿಯ ಕುಸ್ತಿಪಟು ಪೈಲ್ವಾನ್ ಮಹದೇವ್ 'ಮೈಸೂರು ಮಿತ್ರ'ನೊಂದಿಗೆ ನಾಡಕುಸ್ತಿಯ ರೋಚಕತೆ ಬಿಚ್ಚಿಟ್ಟರು.

ನಾಡಕುಸ್ತಿಯಲ್ಲಿ ನುರಿತ ಪೈಲ್ವಾನರಿಗೆ ಹೊಸಬರು ಸವಾಲು ಹಾಕುತ್ತಾರೆ. ಬೇರೆ ಬೇರೆ ರಾಜ್ಯಗಳ ಪೈಲ್ವಾನರ ಮೇಲೆ ಸ್ಥಳೀಯ ಪೈಲ್ವಾನರು ಸವಾಲು ಹಾಕಿದರೆ ಪಂದ್ಯದ ರೋಚಕತೆ ಇನ್ನಷ್ಟು ಹೆಚ್ಚಾಗುತ್ತದೆ. ಬೇರೆ ರಾಜ್ಯದ ಪೈಲ್ವಾನ್‌ನೊಂದಿಗೆ ಪಂದ್ಯ ನಿಗದಿಯಾಗುತ್ತಿದ್ದಂತೆ ಇಲ್ಲಿನ ಪೈಲ್ವಾನ್‌ಗೆ ವಿಶೇಷ ತರಬೇತಿ ನೀಡಲಾಗುವುದರ ಜೊತೆಗೆ ಕೆಲವರನ್ನು ಕಾವಲು ಇಡಲಾಗುವುದು. ಪ್ರತಿಸ್ಪರ್ಧಿ ಪೈಲ್ವಾನ್‌ನಷ್ಟೇ ತೂಕವಿರುವ ಬೇರೆ ಪೈಲ್ವಾನ್‌ರೊಂದಿಗೆ ತರಬೇತಿ ನೀಡಲಾಗುವುದು.

ಕುಸ್ತಿ ನಡೆಯುವ ದಿನ ಗರಡಿ ಮನೆಯಲ್ಲಿ ಗುರುವಿನ ಆಶೀರ್ವಾದ ಪಡೆದು ಹೊರಟರೇ ಪೈಲ್ವಾನ್‌ನ ಹಿಂದೆ ಅದೇ ಗರಡಿ ಮನೆಯ ಪೈಲ್ವಾನರು, ನೂರಾರು ಮಂದಿ ಮೊಹಲ್ಲಾ ನಿವಾಸಿಗಳು ಆಗಮಿಸುತ್ತಾರೆ. ಪಂದ್ಯದಲ್ಲಿ ಗೆದ್ದರೆ ಕುಸ್ತಿ ಅಖಾಡದಿಂದ ಗರಡಿ ಮನೆಯವರೆಗೂ ಮೆರವಣಿಗೆ ಮೂಲಕ ಕರೆದುಕೊಂಡು ಹೋಗಲಾಗುವುದು. ಪಾಯಿಂಟ್ ಕುಸ್ತಿಗಿಂತ ನಾಡಕುಸ್ತಿ ವಿಶೇಷವಾಗಿದ್ದು, ಪ್ರತಿ ಕ್ಷಣವೂ ನೋಡುಗರಿಗೆ ರೋಚಕತೆ ನೀಡಲಿದೆ. ಅದರಲ್ಲೂ ಹೆಚ್ಚು ಪೈಲ್ವಾನರು ಭಾಗವಹಿಸುವುದೇ ನಾಡಕುಸ್ತಿಯಲ್ಲಿ. ಗಂಟೆಗಟ್ಟಲೇ ನಡೆಯುವ ಮಾರ್ಫಿಟ್ ಕುಸ್ತಿಯಂತೂ ಪ್ರತಿ ಕ್ಷಣವೂ ಕುತೂಹಲ ಎಚ್ಚಿಸುತ್ತದೆ.

ದಸರಾದಲ್ಲಿ ಗೆದ್ದರೆ ಗೌರವ...

ವಿಶ್ವ ಪ್ರಸಿದ್ಧ ಮೈಸೂರು ದಸರಾ ಕುಸ್ತಿ ಪಂದ್ಯಾವಳಿಯಲ್ಲಿ ಗೆದ್ದರೆ ಪೈಲ್ವಾನರಿಗೆ ಹೆಚ್ಚಿನ ಗೌರವ ದೊರೆಯುತ್ತದೆ. ದಸರಾ ಕುಸ್ತಿಯಲ್ಲಿ ಭಾಗವಹಿಸುವುದೇ ಒಂದು ವಿಶೇಷ. ಅದರಲ್ಲೂ ಗೆದ್ದರೆ ದೊರಕುವ ಗೌರವವೇ ಬೇರೆಯಾಗಿರುತ್ತದೆ. ಕೆಲ ಪಂದ್ಯಗಳು ನಡೆಯುವ ವೇಳೆ ಕುಸ್ತಿ ಪ್ರೋತ್ಸಾಹಕರು ಬಹುಮಾನಗಳನ್ನು ಘೋಷಣೆ ಮಾಡುವುದುಂಟು. ದಸರಾ ಪಾರಂಪರಿಕ ಕುಸ್ತಿ ಅಖಾಡ ಎರಡು ವರ್ಷದ ಬಳಿಕ ಮತ್ತೆ ಸಿದ್ಧವಾಗುತ್ತಿದ್ದು, ಪೈಲ್ವಾನರು ಕಾತುರದಿಂದ ಕಾಯುತ್ತಿದ್ದಾರೆ.

- ಕೆ.ಶ್ರೀನಿವಾಸ್ ಗೌಡ, ಕುಸ್ತಿ ತರಬೇತುದಾರರು

ಪ್ರಮುಖ ಆಕರ್ಷಣೆ ಎನಿಸಿರುವ ಪೈಲ್ವಾನರು...


ಮೈಸೂರು ದಸರಾ ಕುಸ್ತಿಯ ವಿಭಾಗ ಮಟ್ಟದಲ್ಲಿ ಸತತ ಮೂರು (2017,18 ಹಾಗೂ 2019) ವರ್ಷ ಪ್ರಥಮ ಸ್ಥಾನ ಪಡೆದಿರುವ ಪೈಲ್ವಾನ್ ಆರ್.ಯಶವಂತ್ ಪ್ರಮುಖ ಆಕರ್ಷಣೆಯಾಗಿದ್ದಾರೆ. ಸುಣ್ಣದಕೇರಿ ಭೂತಪ್ಪನ ಗರಡಿ ಮನೆಯ ಪೈಲ್ವಾನ್ ಯಶವಂತ್ ಓಪನ್ ವೈಟ್‌ನಲ್ಲಿ ಕುಸ್ತಿಗಿಳಿಯಲಿದ್ದು, ಈಗಾಗಲೇ ಹಲವು ಬಾರಿ ರಾಜ್ಯಮಟ್ಟದಲ್ಲಿ ಪದಕ ಜಯಿಸಿದ್ದಾರಲ್ಲದೆ, ರಾಜ್ಯದ ಬೇರೆ ಬೇರೆ ಕಡೆಗಳಲ್ಲಿ ನಡೆಯುವ ಕುಸ್ತಿ ಪಂದ್ಯಾವಳಿಗಳಲ್ಲಿ ಭಾಗವಹಿಸಿ ಗಮನ ಸೆಳೆದಿದ್ದಾರೆ.

ಹಾಗೆಯೇ 5 ಬಾರೀ ದಸರಾ ನಾಡಕುಸ್ತಿಯಲ್ಲಿ ಭಾಗವಹಿಸಿ ಗೆದ್ದಿರುವ ಕ್ಯಾತಮಾರನಹಳ್ಳಿ ಹತ್ತೂ ಜನಗಳ ಗರಡಿ ಮನೆಯ ಪೈಲ್ವಾನ್ ಬಸವರಾಜು, ಪಡುವಾರಹಳ್ಳಿ ಹತ್ತೂ ಜನಗಳ ಗರಡಿ ಮನೆಯ ಪೈಲ್ವಾನ್ ಮುಖೇಶ್ ಹಾಗೂ ಪೈಲ್ವಾನ್ ಚಂದ್ರು, ಸುಣ್ಣದಕೇರಿ ಬೆಸ್ತರ ಕಾಳಣ್ಣನವರ ಗರಡಿ ಮನೆಯ ಪೈಲ್ವಾನ್ ಭೈರಪ್ಪ ನಾಯಕ, ಪೈಲ್ವಾನ್ ಠಾಕೂರ್, ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ತರಬೇತಿ ಪಡೆಯುತ್ತಿರುವ ಪೈಲ್ವಾನ್ ಚೇತನ್‌ಗೌಡ, ಪೈಲ್ವಾನ್ ಯೋಗೇಶ್ ಉದ್ಬೂರು, ಶಕ್ತಿ ರಮೇಶ್, ರಾಜೇಂದ್ರ ಹಿರಿಯ ಕುಸ್ತಿ ತರಬೇತುದಾರ ಎಲ್.ಮಂಜಪ್ಪ ಅವರ ಮಾರ್ಗದರ್ಶನದಲ್ಲಿ ತರಬೇತಿ ಪಡೆಯುತ್ತಿರುವ 13 ವರ್ಷದ ಮಹಿಳಾ ಪೈಲ್ವಾನ್ ರಿತೂ, ನಿವೃತ್ತ ತರಬೇತುದಾರ ಕೆ.ಶ್ರೀನಿವಾಸ್ ಗೌಡ ಅವರ ಮಾರ್ಗದರ್ಶನದ ಸಿಂಚನ, ಯಶಸ್ವಿನಿ ಮೈಸೂರಿನ ಪ್ರಮುಖ ಆಕರ್ಷಣೆಯ ಪೈಲ್ವಾನರಾಗಿದ್ದಾರೆ.

ಮ್ಯಾಟ್ ಕುಸ್ತಿಯಲ್ಲಿ ಭವಿಷ್ಯವಿದೆ...

ಮಟ್ಟಿ ಕುಸ್ತಿಗಿಂತ ಮ್ಯಾಟ್ ಕುಸ್ತಿಯಲ್ಲಿ ಉತ್ತಮ ಭವಿಷ್ಯವಿದೆ. ಮಟ್ಟಿಯಲ್ಲಿ ಕುಸ್ತಿ ಮಾಡುವ ಪೈಲ್ವಾನರು ಒಂದಷ್ಟು ವರ್ಷಗಳು ಸ್ಪರ್ಧಿಸಿ ನಂತರ ಬಿಟ್ಟು ಬಿಡುತ್ತಾರೆ. ಇದರಿಂದ ಅವರ ಆರೋಗ್ಯ ಉತ್ತಮವಾಗಿರುತ್ತದೆಯೇ ಹೊರತು ವೈಯುಕ್ತಿಕ ಪ್ರಯೋಜನವಿಲ್ಲ. ಕುಸ್ತಿ ಅಖಾಡದಲ್ಲಿ ಜಯಿಸಿ ಹೆಸರು ಗಳಿಸಿದ್ದರೂ ಸರ್ಕಾರದಿಂದ ಅವರಿಗೆ ಯಾವುದೇ ರೀತಿಯ ಸೌಲಭ್ಯಗಳು ದೊರಕುವುದಿಲ್ಲ. ಆದರೆ ಮ್ಯಾಟ್ ಕುಸ್ತಿ ವಿಭಿನ್ನ. ತಾಲೂಕು, ಜಿಲ್ಲೆ, ರಾಜ್ಯ, ರಾಷ್ಟ್ರ ಮತ್ತು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಲು ಪಾಯಿಂಟ್ ಕುಸ್ತಿ ಅನುಕೂಲವಾಗಿದೆ. ಒಮ್ಮೆ ರಾಜ್ಯ, ರಾಷ್ಟ್ರಮಟ್ಟದಲ್ಲಿ ಮಿಂಚಿದರೆ ಕ್ರೀಡಾ ಕೋಟಾದಡಿ ಸರ್ಕಾರಿ ನೌಕರಿ ಪಡೆಯಲು ಅನುಕೂಲವಾಗುತ್ತದೆ. ಸರ್ಕಾರ ಈ ಅವಕಾಶವನ್ನು ಮಟ್ಟಿಯಲ್ಲಿ ಕುಸ್ತಿ ಮಾಡುವ ಪೈಲ್ವಾನರಿಗೂ ನೀಡಿದರೆ ಸಾಕಷ್ಟು ಪೈಲ್ವಾನರಿಗೆ ಅನುಕೂಲವಾಗುತ್ತದೆ.

- ಎಲ್.ಮಂಜಪ್ಪ, ಹಿರಿಯ ಕುಸ್ತಿ ತರಬೇತುದಾರರು



ಅರಮನೆ ಆವರಣದಲ್ಲಿ ಬೀಡು ಬಿಟ್ಟಿರುವ ದಸರಾ ಗಜಪಡೆಯ ಭವಿಷ್ಯದ ಅಂಬಾರಿ ಆನೆ ಎಂದು ಭರವಸೆ ಮೂಡಿಸಿರುವ ಭೀಮ ಮಜ್ಜನ ಮುಗಿಸಿ ಮೇಲೇಳುತ್ತಿರುವುದು. ಚಿತ್ರ: ಎಂ.ಎಸ್. ಲಕ್ಷ್ಮೀನಾರಾಯಣ ಯಾದವ್

ಕುಶಾಲತೋಪು ಒಣ ತಾಲೀಮು ಆರಂಭ



ಮೈಸೂರು, ಸೆ4 (ಎಂಟಿವೈ)– ನಾಡಹಬ್ಬ ದಸರಾ ಹಬ್ಬ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಜಂಬೂ ಸವಾರಿಯ ದಿನ ಅಂಬಾರಿಗೆ ಪುಷ್ಪಾರ್ಚನೆ ಮಾಡುವಾಗ ಕುಶಾಲತೋಪು ಸಿಡಿಸುವ ಫಿರಂಗಿ ದಳದ ಸಿಬ್ಬಂದಿಗಳ ತಂಡ ಇಂದಿನಿಂದ ಒಣ ತಾಲೀಮು ಆರಂಭಿಸಿದೆ.

ಮೈಸೂರು ಅರಮನೆ ಮುಂಭಾಗದ ಪ್ರಾಂಗಣದಲ್ಲಿ ಫಿರಂಗಿ ದಳದ ಸಿಬ್ಬಂದಿ ಕುಶಾಲತೋಪು ಸಿಡಿಸಲು ಬಳಸುವ 7 ಫಿರಂಗಿಗಳೊಂದಿಗೆ ಒಣ ತಾಲೀಮು ನಡೆಸಿದರು. ಒಂದೊಂದು ಫಿರಂಗಿಗೂ ಐವರು ಸಿಬ್ಬಂದಿಗಳನ್ನು ನಿಯೋಜಿಸಲಾಗಿದ್ದು, ಒಂದು ನಿಮಿಷದ ಅವಧಿಯಲ್ಲಿ 21 ಬಾರಿ ಕುಶಾಲತೋಪು ಸಿಡಿಸುವ ತಾಲೀಮನ್ನು ನಡೆಸಲಾಯಿತು.

ಜಂಬೂ ಸವಾರಿ ದಿನ ಚಿನ್ನದ ಅಂಬಾರಿಯಲ್ಲಿ ವಿರಾಜಮಾನವಾಗಿರುವ ನಾಡದೇವಿ ಚಾಮುಂಡೇಶ್ವರಿ ದೇವಿಯ ಉತ್ಸವ ಮೂರ್ತಿಗೆ ಗಣ್ಯರು ಪುಷ್ಪಾರ್ಚನೆ ಮಾಡುವ ಸಂದರ್ಭದಲ್ಲಿ ಪೊಲೀಸ್ ಬ್ಯಾಂಡ್ ವಾದನದ ತಂಡ ರಾಷ್ಟ್ರಗೀತೆಯನ್ನು ನುಡಿಸಲಿದೆ ಈ ವೇಳೆ ಫಿರಂಗಿ ದಳದ ಸಿಬ್ಬಂದಿ ರಾಷ್ಟ್ರಗೀತೆ ಮುಗಿಯುವ ವೇಳೆಗೆ 7 ಫಿರಂಗಿಯನ್ನು ಬಳಸಿ 21 ಸುತ್ತು ಕುಶಾಲತೋಪನ್ನು ಸಿಡಿಸಬೇಕಾಗಿದೆ. ಹಾಗಾಗಿ ಇಂದಿನಿಂದ ಸಿಡಿಮದ್ದು ಬಳಸದೇ 21 ಬಾರಿ ಕುಶಾಲತೋಪನ್ನು ಹಾರಿಸುವ ಬಗೆ ಕುರಿತಂತೆ ತಾಲೀಮನ್ನು ಆರಂಭಿಸಲಾಗಿದೆ.

ಇಂದಿನಿಂದ ಅಭಿಮನ್ಯುಗೆ ಮರದ ಅಂಬಾರಿ ಹೊರುವ ತಾಲೀಮು

ಮೈಸೂರು,ಸೆ.4(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲಿರುವ ದಸರಾ ಗಜಪಡೆಯ ನಾಯಕ ಅಭಿಮನ್ಯುಗೆ ನಾಳೆ(ಸೆ.5)ಯಿಂದ ಮರದ ಅಂಬಾರಿ ಹೊರಿಸುವ ತಾಲೀಮು ಆರಂಭಿಸಲಾಗುತ್ತದೆ. ಅರಮನೆಯಲ್ಲಿನ ರಾಜವಂಶಸ್ಥರ ಮನೆ ಬಳಿಯಿರುವ ಕ್ರೇನ್‌ಗೆ ನಾಳೆ ಸಂಜೆ 4 ಗಂಟೆಗೆ ಪೂಜೆ ಸಲ್ಲಿಸಿ ಅಭಿಮನ್ಯುವಿನ ಮೇಲೆ ಮರದ ಅಂಬಾರಿಯನ್ನು ಕಟ್ಟಲಾಗುತ್ತದೆ. ಬಳಿಕ ಅದರ ಮೇಲೆ ಮರಳಿನ ಮೂಟೆ ಇಡಲಾಗುತ್ತದೆ. ಒಟ್ಟು 1100 ಕೆಜಿಯನ್ನು ಅಭಿಮನ್ಯುವಿನ ಮೇಲಿಟ್ಟು ತಾಲೀಮಿಗೆ ಕರೆದೊಯ್ಯಲಾಗುತ್ತದೆ. ನಾಳೆಯಿಂದ ಆರಂಭಿಸುವ ತಾಲೀಮು ಮಹತ್ವದ್ದಾಗಿರುತ್ತದೆ.

ಮೂರನೇ ಹಂತದ ಭಾರ ಹೊರುವ ತಾಲೀಮು ಸೆ.4ರಂದು ಪೂರ್ಣಗೊಳ್ಳಲಿದ್ದು, ಸೆ.5ರಿಂದ 5ನೇ ಹಂತದ ತಾಲೀಮಿನಲ್ಲಿ ಮರದ ಅಂಬಾರಿ ಹೊರಿಸಿ ತಾಲೀಮಿಗೆ ಕರೆದೊಯ್ಯಲಾಗುತ್ತದೆ. ಮೊದಲ ತಂಡದಲ್ಲಿ ಆಗಮಿಸಿರುವ ಗಂಡಾನೆಗಳಾದ ಅಭಿಮನ್ಯು, ಗೋಪಾಲಸ್ವಾಮಿ, ಧನಂಜಯ, ಭೀಮ ಹಾಗೂ ಮಹೇಂದ್ರ ಆನೆಗಳಿಗೂ ಮರದ ಅಂಬಾರಿ ಹೊರಿಸುವ ತಾಲೀಮು ನಡೆಸಲಾಗುತ್ತದೆ.

ಈ ಸಂಬಂಧ ಡಿಸಿಎಫ್ ಡಾ.ವಿ.ಕರಿಕಾಳನ್ ಮಾತನಾಡಿ, ದಸರಾ ಗಜಪಡೆಗೆ ಮೂರನೇ ಹಂತದ ತಾಲೀಮನ್ನು ಯಶಸ್ವಿಯಾಗಿ ನಡೆಸಲಾಗಿದೆ. ಜಂಬೂಸವಾರಿಗೆ ಇನ್ನು ಕೇವಲ ಒಂದು ತಿಂಗಳಷ್ಟೇ ಇರುವುದರಿಂದ ಮರದ ಅಂಬಾರಿ ತಾಲೀಮು ನಡೆಸಿ, ಆನೆಗಳನ್ನು ಜಂಬೂಸವಾರಿಗೆ ಸಜ್ಜುಗೊಳಿಸಬೇಕಾಗಿದೆ. ಆ ನಿಟ್ಟಿನಲ್ಲಿ ಮರದ ಅಂಬಾರಿ ತಾಲೀಮು ಆರಂಭಿಸಲಾಗುತ್ತಿದೆ ಎಂದರು.

ಸೆ.7ರಂದು ಎರಡನೇ ಹಂತದ ಗಜಪಡೆ ಆಗಮನ: ಸೆ.7ರಂದು ಎರಡನೇ ಹಂತದಲ್ಲಿ 5 ಆನೆಗಳನ್ನು ಕರೆತರಲಾಗುತ್ತಿದೆ. ಎರಡನೇ ತಂಡದಲ್ಲಿ ದುಬಾರೆ ಕ್ಯಾಂಪ್‌ನಿಂದ ಗೋಪಿ(41), ಶ್ರೀರಾಮ(40) ವಿಜಯ (63) ಮತ್ತು ರಾಂಪುರ ಕ್ಯಾಂಪ್‌ನಿಂದ ಪಾರ್ಥಸಾರಥಿ(18), ಕುಂತಿ(36)ಯನ್ನು ಕರೆತರಲಾಗುತ್ತದೆ ಎಂದು ತಿಳಿಸಿದರು.

ಸೆ.8ರಂದು ತೂಕ ಮಾಡಲಾಗುತ್ತದೆ: ಸೆ.8ರಂದು ಮೊದಲ ತಂಡದ ಆನೆಗಳೂ ಸೇರಿದಂತೆ ಎಲ್ಲಾ 14 ಆನೆಗಳಿಗೂ ತೂಕ ಹಾಕಿಸಲಾಗುತ್ತದೆ. ಮೊದಲ ತಂಡದ ಆನೆಗಳು ಅರಮನೆಗೆ ಬಂದು 25 ದಿನ ಕಳೆದಿದೆ. ಈ ವೇಳೆ ಪೌಷ್ಟಿಕ ಆಹಾರ ನೀಡಿರುವುದರಿಂದ ಈಗಾಗಲೇ ಒಂದೊಂದು ಆನೆಯೂ 200 ಕೆಜಿಯಷ್ಟು ತೂಕ ಹೆಚ್ಚಿಸಿಕೊಂಡಿವೆ. ಸೆ.8ರಿಂದ ತಾಲೀಮಿನಲ್ಲಿ ಎಲ್ಲಾ 14 ಆನೆಗಳು ಪಾಲ್ಗೊಳ್ಳಲಿವೆ. ಸೆ.10ರಿಂದ ಆನೆಗಳ ತಾಲೀಮಿಗೆ ಹೆಚ್ಚಿನ ಆಧ್ಯತೆ ನೀಡುತ್ತೇವೆ. ಜಂಬೂಸವಾರಿ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ತಾಲೀಮಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ ಎಂದರು.

ಅಪ್ಪು, ಪ್ರಧಾನಿ ಮೋದಿ, ಸ್ವಾತಂತ್ರ್ಯ ಹೋರಾಟಗಾರರ ಮರಳಿನ ಕಲಾಕೃತಿಗಳ ನಿರ್ಮಾಣಕ್ಕೆ ತಯಾರಿ

● ಸೆ.20 ರೊಳಗೆ ಕಲಾಕೃತಿಗಳು ಪೂರ್ಣಗೊಳ್ಳುವ ಸಾಧ್ಯತೆ ● ಅಗತ್ಯವಿರುವ ಪರಿಕರಗಳ ಸಂಗ್ರಹ

● ಎ. ಗಣೇಶ್

ಮೈಸೂರು, ಸೆ.4– ನಟ ಪುನೀತ್ ರಾಜ್‌ಕುಮಾರ್, ಪ್ರಧಾನಿ ನರೇಂದ್ರ ಮೋದಿ, ಸ್ವಾತಂತ್ರ್ಯ ಹೋರಾಟಗಾರರ ಮರಳಿನ ಕಲಾಕೃತಿ ನಿರ್ಮಾಣ ಕೆಲಸ ಆರಂಭವಾಗಿದ್ದು, ಸೆ.20ರೊಳಗೆ ಪೂರ್ಣಗೊಳ್ಳುವ ಸಾಧ್ಯತೆ ಇದೆ.

ಕೊರೊನಾ ಹಿನ್ನೆಲೆಯಲ್ಲಿ ಎರಡು ವರ್ಷಗಳಿಂದ ಸ್ಥಗಿತಗೊಂಡಿದ್ದ ದಸರಾ ವಸ್ತು ಪ್ರದರ್ಶನವನ್ನು ಈ ಬಾರಿ ವಿಭಿನ್ನ ಹಾಗೂ ವಿಶಿಷ್ಟವಾಗಿ ಆಯೋಜಿಸಲು ನಿರ್ಧರಿಸಲಾಗಿದೆ. ಅದರ ಪ್ರಮುಖ ಆಕರ್ಷಣೆಯಾಗಿ ಮರಳಿನ ಕಲಾಕೃತಿ ಮೂಲಕ ಪ್ರವಾಸಿಗರನ್ನು ಸೆಳೆಯಲು ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ ಮುಂದಾಗಿದ್ದು, ವಸ್ತು ಪ್ರದರ್ಶನದ ಆವರಣದಲ್ಲಿ ಕಾರ್ಯಗಳು ಭರದಿಂದ ಸಾಗಿವೆ.

ವಸ್ತು ಪ್ರದರ್ಶನದ ಆವರಣದಲ್ಲಿ ಯಾವ ಸ್ಥಳದಲ್ಲಿ ಹೆಚ್ಚು ಜನರು ಸೇರುತ್ತಾರೋ ಆ ಸ್ಥಳದಲ್ಲಿ ಮರಳಿನ ಆಕೃತಿಗಳನ್ನು ನಿರ್ಮಿಸುತ್ತಿದ್ದು, ಈಗಾಗಲೇ ಕಬ್ಬಿಣದ ಪಿಲ್ಲರ್ ಹಾಗೂ ಶೀಟ್‌ಗಳನ್ನು ಬಳಸಿ 20x50 ಅಡಿಯ ಎರಡು ಪ್ರತ್ಯೇಕ ಶೆಡ್‌ಗಳನ್ನು ನಿರ್ಮಾಣ ಮಾಡಿದ್ದು, ಮಳೆ ಗಾಳಿಯಿಂದ ತೊಂದರೆಯಾಗದಂತೆ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಗಾರೆ ಕೆಲಸಗಾರರು ಸುತ್ತಲೂ ಮಳೆ ನೀರು ನಿಲ್ಲದಂತೆ ವೇದಿಕೆ ನಿರ್ಮಾಣ ಮಾಡುತ್ತಿದ್ದಾರೆ. ಮೈಸೂರಿನ ಹೆಸರಾಂತ ಮರಳು ಕಲಾವಿದೆ ಎಂ.ಎನ್. ಗೌರಿ ಎಲ್ಲಾ ತಯಾರಿ ಮಾಡಿಕೊಳ್ಳುತ್ತಿದ್ದಾರೆ.

ಎಂ ಸ್ಯಾಂಡ್ ಮತ್ತು ಬಣ್ಣ ಬಳಕೆ: ಇಲ್ಲಿ ನಿರ್ಮಾಣವಾಗುತ್ತಿರುವ ಕಲಾಕೃತಿಗಳಿಗೆ ಬೇಕಿರುವಷ್ಟು ಮರಳು ಸಿಗದ ಹಿನ್ನೆಲೆಯಲ್ಲಿ ಎಂ ಸ್ಯಾಂಡ್ ಬಳಸಲು ಮುಂದಾಗಿದ್ದು, ಇಂದು 10 ಲೋಡ್ ಎಂ ಸ್ಯಾಂಡ್ ಪೂರೈಕೆಯಾಗಿದೆ. ಆಕೃತಿ ನಿರ್ಮಾಣಕ್ಕೂ ಮೊದಲು ನೀರಿನಲ್ಲಿ ಸಂಪೂರ್ಣ ನೆನೆಸಿ ನಂತರ ಹಂತ ಹಂತವಾಗಿ ಅದನ್ನು ಬಳಸಲಾಗುತ್ತಿದೆ. ಮರಳಿನಲ್ಲಿ ಕಲಾಕೃತಿ ನಿರ್ಮಾಣವಾಗಿದ್ದರೆ, ಅದಕ್ಕೆ ಬಣ್ಣ ಬಳಸುವ ಅಗತ್ಯವಿರಲಿಲ್ಲ. ಆದರೆ, ಎಂ ಸ್ಯಾಂಡ್‌ನಲ್ಲಿರುವ ನೀರು ಒಣಗಿದ ನಂತರ ಕಲಾಕೃತಿಗಳು ಬಿಳಿಯಾಗಿ ಕಾಣುವ ಸಾಧ್ಯತೆ ಇರುವುದರಿಂದ ಅದು ಅಷ್ಟು ಆಕರ್ಷಕವಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಸ್ಪ್ರೇ ಪೇಂಟ್ ಬಳಸುವ ಮೂಲಕ ಮತ್ತಷ್ಟು ಆಕರ್ಷಣೆ ನೀಡಲು ಮುಂದಾಗಿದ್ದಾರೆ.

ಅಪ್ಪು ಬಾಲ್ಯದ ಆಕೃತಿ : ನಟ ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರ ನೆನಪಿಗಾಗಿ ಒಂದು ಶೆಡ್‌ನಲ್ಲಿ 4 ರಿಂದ 5 ಕಲಾಕೃತಿಯನ್ನು ನೋಡಬಹುದಾಗಿದ್ದು, ಅದರಲ್ಲಿ ಡಾ.ರಾಜ್‌ಕುಮಾರ್, ಪಾರ್ವತಮ್ಮ ರಾಜ್‌ಕುಮಾರ್ ಜೊತೆಗಿರುವ ಅಪ್ಪು ಬಾಲ್ಯದ ನೆನಪಿನ ಆಕೃತಿ, ತಮ್ಮ ಕಡೆಯ ಚಿತ್ರದಲ್ಲಿ ಯೋಧನ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ಯೋಧನ ಭಂಗಿಯ ಆಕೃತಿ, ಪುನೀತ್ ಹೆಗಲ ಮೇಲೆ ಪಾರಿವಾಳ ಕುಳಿತಿರುವ ಭಂಗಿಯಲ್ಲಿರುವ ಆಕೃತಿಗಳನ್ನು ಕಾಣಬಹುದಾಗಿದೆ. ಇದರೊಟ್ಟಿಗೆ ಮತ್ತೊಂದು ಶೆಡ್‌ನಲ್ಲಿ ಯೋಗದ ಭಂಗಿಯಲ್ಲಿರುವ ಪ್ರಧಾನ ನರೇಂದ್ರ ಮೋದಿ, ಆಜಾದಿ ಕಾ ಅಮೃತ ಮಹೋತ್ಸವದ ಅಂಗವಾಗಿ ಸ್ವಾತಂತ್ರ್ಯ ಹೋರಾಟಗಾರರ ಆಕೃತಿಯನ್ನು ಆಕರ್ಷಿಸಲಿದೆ.

ಸೆ.20ಕ್ಕೆ ಪೂರ್ಣ: ಕೆಲ ದಿನಗಳ ಹಿಂದೆ ಆರಂಭವಾಗಿದ್ದ ಶೆಡ್‌ಗಳ ನಿರ್ಮಾಣ ಕಾರ್ಯವು ಬಹಳಷ್ಟು ಪೂರ್ಣಗೊಂಡಿದ್ದು, ಕಲಾಕೃತಿಗೆ ಬೇಕಿರುವ ಎಂ ಸ್ಯಾಂಡ್ ವಸ್ತು ಪ್ರದರ್ಶನದ ಆವರಣ ತಲುಪಿದೆ. ನಾಳೆಯಿಂದ ಗೌರಿ ಅವರು ಎಂ ಸ್ಯಾಂಡ್ ಅನ್ನು ಕಲಾಕೃತಿಗೆ ಬೇಕಿರುವ ಹಾಗೇ ಸಿದ್ಧಪಡಿಸಿಕೊಳ್ಳುವ ಕಾರ್ಯವನ್ನು ಆರಂಭಿಸಲಿದ್ದು, ಸೆ.5 ರಿಂದ ಕಲಾಕೃತಿ ನಿರ್ಮಾಣ ಮಾಡಲು ಚಿಂತಿಸಲಾಗಿದೆ. ಅವರೊಂದಿಗೆ 3 ಜನ ಸಹಾಯಕರು ಇರಲಿದ್ದಾರೆ. ಸೆ.20 ರೊಳಗೆ ಎಲ್ಲಾ ಕಲಾಕೃತಿಗಳನ್ನು ಪೂರ್ಣಗೊಳಿಸುವ ಉದ್ದೇಶವನ್ನು ಹೊಂದಿದ್ದಾರೆ.



ವಸ್ತು ಪ್ರದರ್ಶನದ ಆವರಣದಲ್ಲಿ ನಿರ್ಮಾಣವಾಗುತ್ತಿರುವ ಮರಳಿನ ಕಲಾಕೃತಿಯ ಬಗ್ಗೆ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ, ಕಲಾವಿದೆ ಗೌರಿ ಅವರೊಂದಿಗೆ ಚರ್ಚಿಸುತ್ತಿರುವುದು.

5 ರಿಂದ 6 ಲಕ್ಷ ರೂ. ವೆಚ್ಚದಲ್ಲಿ ಮರಳಿನ ಆಕೃತಿಗಳು ನಿರ್ಮಾಣವಾಗುತ್ತಿದ್ದು, ಒಂದೊಂದು ಕಲಾಕೃತಿಯೂ 10 ಅಡಿ ಉದ್ದ ಮತ್ತು 20 ಅಡಿ ಅಗಲ ಇರಲಿದೆ. ಮಳೆಯಾದರೇ ಯಾವುದೇ ರೀತಿ ತೊಂದರೆಯಾಗದಂತೆ ಎಲ್ಲಾ ವ್ಯವಸ್ಥೆಗಳನ್ನು ಮಾಡಲಾಗಿದೆ. ದಸರಾ ಮಹೋತ್ಸವದಲ್ಲಿ ಪುನೀತ್ ರಾಜ್‌ಕುಮಾರ್ ಅವರ ಕುಟುಂಬದ ಸದಸ್ಯರು ಭಾಗಿಯಾಗಲಿದ್ದು, ಅವರನ್ನು ಇಲ್ಲಿಗೆ ಕರೆಸುವ ಚಿಂತನೆ ಇದೆ.

–ರುದ್ರೇಶ್, ಸಿಇಓ, ವಸ್ತು ಪ್ರದರ್ಶನ ಪ್ರಾಧಿಕಾರ

ಈ ಬಾರಿಯ ದಸರಾ ಮಹೋತ್ಸವದಲ್ಲಿ ನನ್ನ ಕಲೆಯನ್ನು ಪ್ರದರ್ಶಿಸಲು ಅವಕಾಶ ದೊರೆತಿರುವುದು ಸಂತಸವಾಗಿದ್ದು, ಕಲಾಕೃತಿಗಳ ನಿರ್ಮಾಣದ ಕೆಲಸಗಳು ಚುರುಕಿನಿಂದ ನಡೆಯುತ್ತಿವೆ. ಕಲಾಕೃತಿಗೆ ಅವಶ್ಯವಿರುವ ಎಲ್ಲಾ ವ್ಯವಸ್ಥೆಯನ್ನು ಪ್ರಾಧಿಕಾರದಿಂದ ನೀಡುತ್ತಿದ್ದು, 15 ದಿನಗಳೊಳಗೆ ಆಕೃತಿಯನ್ನು ಪೂರ್ಣಗೊಳಿಸುವ ವಿಶ್ವಾಸವಿದೆ.

–ಎಂ.ಎನ್.ಗೌರಿ, ಮರಳು ಕಲಾವಿದೆ

ನಕ್ಕರೆ ಅದೇ ಸ್ವರ್ಗ

ಸುನಾಮಿಯಲ್ಲಿ ಹೆಂಡತಿಯನ್ನು ಕಳೆದುಕೊಂಡ ವ್ಯಕ್ತಿಯೊಬ್ಬ ಒಂದು ರಾತ್ರಿ ಕುಡಿದು ಬಂದು ಸಮುದ್ರದ ಮುಂದೆ ನಿಂತ. ಅಲೆಗಳು ಅವನ ಪಾದಗಳನ್ನು ಸ್ಪರ್ಶಿಸುತ್ತಿತ್ತು.
ಆಗ ಸಮುದ್ರದ ಕಡೆ ತಿರುಗಿ ಹೇಳಿದ: ನೀ ಎಷ್ಟೇ ಸಲ ಪಾದ ಮುಟ್ಟಿದರೂ ಅವಳನ್ನು ಮಾತ್ರ ವಾಪಾಸ್ ಕರಕೊಳ್ಳಲ್ಲ.

ಮೈಸೂರು ಮಿತ್ರ

ಸೋಮವಾರ, 5 ಸೆಪ್ಟೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಧೈರ್ಯ ಎನ್ನುವುದು ನಿಮ್ಮೊಳಗಿದ್ದರೆ ಅದೇ ನಿಮ್ಮ ವ್ಯಕ್ತಿತ್ವದ ಆಸ್ತಿ.
–ಬಾಲಗಂಗಾಧರ ತಿಲಕ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಶರಣರ ಬದುಕು ಅವರ ಮರಣದಲ್ಲಿ ನೋಡು.

ನಿಮ್ಮ ಪತ್ರಗಳು

ಆಧ್ಯಾತ್ಮ ಮತ್ತು ಸಂಸಾರ

ಮಾನ್ಯರೆ,



ಸೃಷ್ಟಿಗೆ ಕಾರಣಕರ್ತನಾದ ಸೃಷ್ಟಿಕರ್ತನನ್ನು ಆರಾಧಿಸಿ ಅವನೊಡನೆ ಅನುಸಂಧಾನ ಮಾಡುವುದು ಆಧ್ಯಾತ್ಮ. ಇದೊಂದು ನಿರಂತರ ಕ್ರಿಯೆಯಾಗಿದ್ದು ಸಾಂಸಾರಿಕ ಜಗತ್ತಿನಲ್ಲಿ ಸಿಲುಕಿಕೊಂಡವರಿಗೆ ಇದು ಅಸಾಧ್ಯ. ಈ ಕಾರಣಕ್ಕಾಗಿ ಆಧ್ಯಾತ್ಮಿಕ ಸಾಧನೆ ಬಯಸುವವರು ಬ್ರಹ್ಮಚಾರಿಗಳಾಗಬೇಕೆಂಬ ಉದ್ದೇಶ. ಲೈಂಗಿಕ, ಸಂತಾನ ಮತ್ತು ಬೌದ್ಧಿಕ ಸುಖಗಳೆಲ್ಲವನ್ನೂ ತ್ಯಾಗ ಮಾಡಿ, ನಿರಂತರವಾಗಿ ಆಧ್ಯಾತ್ಮಿಕ ಚಿಂತನೆಗಳಲ್ಲಿ ತೊಡಗಿಸಿಕೊಳ್ಳುವುದರಿಂದ ಮಾತ್ರ ಆಧ್ಯಾತ್ಮ ಸಾಧ್ಯ. ಮಠ, ಶಿಕ್ಷಣ ಸಂಸ್ಥೆಗಳು, ಮತ್ತಿತರ ವ್ಯವಹಾರಿಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವ ಬ್ರಹ್ಮಚಾರಿಗಳು ಸಮಾಜ ಸೇವಕ ಸಂತರಾಗುತ್ತಾರೆಯೇ ವಿನಃ ಆಧ್ಯಾತ್ಮಿಕ ಸಾಧಕರಾಗುವುದಿಲ್ಲ. ಇಂಥವರು ಸಂಸಾರ ಕಟ್ಟಿಕೊಂಡು ಸಹಜ ಲೈಂಗಿಕ ಸಂತೋಷವನ್ನು ಅನುಭವಿಸಿ ಕಳಂಕರಹಿತರಾಗಿ ಸಮಾಜ ಸೇವೆ ಮಾಡಬಹುದು. ಇಂದಿನ ಬಹುಪಾಲು ಮಠಮಾನ್ಯಗಳು ಮತ್ತು ಮಠಾಧೀಶರು ಏಕಾಂತವನ್ನು ಬಿಟ್ಟು ಆಕರ್ಷಣೀಯ ಲೌಕಿಕ ವ್ಯವಹಾರಗಳಲ್ಲಿ ತೊಡಗಿರುವುದರಿಂದ ನೈಜ ಆಧ್ಯಾತ್ಮಿಕ ಸಾಧನೆ ಇವರುಗಳಿಂದ ಸಾಧ್ಯವಿಲ್ಲ. ಲೈಂಗಿಕ ಆಸಕ್ತಿಯಿಂದ ಹೊರಬರಲು ಸಹ ಇವರಿಂದ ಸಾಧ್ಯವಿಲ್ಲ

– ಡಾ. ಎಸ್.ಪಿ.ಯೋಗಣ್ಣ, ವೈದ್ಯ ಸಾಹಿತಿ, ಮೈಸೂರು.

ಶ್ರೀಗಳಿಂದ ಮನುಕುಲ ತಲೆ ತಗ್ಗಿಸುವ ಕೃತ್ಯ

ಮಾನ್ಯರೆ,



ಚಿತ್ರದುರ್ಗದ ಮುರುಘಾ ಮಠದ ಶ್ರೀ ಶಿವಮೂರ್ತಿ ಮುರುಘಾ ಶರಣರು ಅಪ್ರಾಪ್ತ ಬಾಲಕಿಯರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಎದುರಿಸುತ್ತಿದ್ದು, ಇಡೀ ಮನುಕುಲವೇ ತಲೆ ತಗ್ಗಿಸುವಂತಾಗಿದೆ. ಇದೀಗ ಮುರುಘಾ ಶ್ರೀಗಳು ನಡೆಸಿದರೆನ್ನಲಾದ ಕರ್ಮಕಾಂಡಗಳು ಒಂದೊಂದಾಗಿ ಮಾಧ್ಯಮಗಳಲ್ಲಿ ಪ್ರಕಟವಾಗುತ್ತಿದ್ದರೆ, ಶ್ರೀಮಠ ಮತ್ತು ಪೊಲೀಸ್ ಕಸ್ಟಡಿಯಲ್ಲಿರುವ ಶ್ರೀಗಳು ಮೌನ ವಹಿಸಿರುವುದು ಹಲವು ಸಂಶಯಗಳಿಗೆ ಎಡೆ ಮಾಡಿಕೊಟ್ಟಿದೆ.

ಕಾವಿ ಧರಿಸಿ ಮುರುಘಾ ಶ್ರೀಗಳು ಇಂತಹ ಹೇಯ ಕೃತ್ಯವೆಸಗಿರುವುದರಿಂದ ಇತರ ಸ್ವಾಮೀಜಿಗಳನ್ನು ಇಡೀ ಸಮಾಜ ಸಂಶಯದಿಂದ ನೋಡುವಂತೆ ಮಾಡಿರುವುದು ನಾಚಿಕೆಗೇಡಿನ ಸಂಗತಿ. ಸ್ವಾಮೀಜಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಸರ್ಕಾರ ಮತ್ತು ಪೊಲೀಸರು ತಡವಾಗಿ ಬಂಧಿಸಿದ್ದಾರೆ. ಇದರಿಂದ ಹಲವು ಸಾಕ್ಷ್ಯಗಳು ನಾಶವಾಗಿವೆ ಎಂದು ಮಾಧ್ಯಮಗಳು ವರದಿ ಮಾಡುತ್ತಿವೆ.

ತಮ್ಮ ಆಸೆ–ಆಕಾಂಕ್ಷೆಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲಾಗದ ಶ್ರೀಗಳು ತಮ್ಮ ಕಾವಿಯನ್ನು ಕಳಚಿ ಯಾರನ್ನಾದರೂ ವಿವಾಹವಾಗಿ ಸಂಸಾರಿಯಾಗಬಹುದಿತ್ತು. ಅದನ್ನು ಬಿಟ್ಟು ಮಠದ ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿನಿಗಳ ಮೇಲೆ ಕಣ್ಣಾಕಿರುವುದು ಹೇಯ ಮತ್ತು ಘೋರ ಕೃತ್ಯ. ಭಕ್ತರು ಈಗ ಮಠಕ್ಕೆ ಬರಲು ಹಿಂದೇಟು ಹಾಕುತ್ತಿರುವುದೂ ಸಹ ಗುಟ್ಟಾಗಿ ಉಳಿದಿಲ್ಲ.

ಸರ್ಕಾರ ಮತ್ತು ಪೊಲೀಸರು ಮುರುಘಾ ಶ್ರೀಗಳ ಪ್ರಕರಣವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ, ನಿಷ್ಪಕ್ಷಪಾತವಾಗಿ ತನಿಖೆ ನಡೆಸಿ, ತಪ್ಪು ಮಾಡಿದ ಶ್ರೀಗಳಿಗೆ ಮತ್ತು ಇದಕ್ಕೆ ಸಹಕರಿಸಿದವರಿಗೆ ಕಠಿಣ ಶಿಕ್ಷೆ ಕೊಡಿಸುವ ಮೂಲಕ ನೊಂದ ಬಾಲಕಿಯರಿಗೆ ನ್ಯಾಯ ಕೊಡಿಸುವ ಕೆಲಸ ಮಾಡಬೇಕು ಎಂದು ಈ ಮೂಲಕ ಕೋರುತ್ತೇನೆ.

– ಶ್ರೀಮತಿ ಮಂಜುಳಾ, ಜೆ.ಪಿ.ನಗರ, ಮೈಸೂರು. ತಾ. 4–9–2022

ವ್ಯವಸಾಯ ಶಾಸ್ತ್ರ ಒಂದು ವಿಷಯವಾಗಲಿ

ಮಾನ್ಯರೆ,

ಇನ್ನು ಮುಂದೆ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ಗಣಿತ, ವಿಜ್ಞಾನ, ಸಮಾಜಶಾಸ್ತ್ರ ಇರುವಂತೆ 'ವ್ಯವಸಾಯ ಶಾಸ್ತ್ರ'ವನ್ನು ಒಂದು ವಿಷಯವನ್ನಾಗಿ ಸೇರಿಸಿದರೆ ಅನುಕೂಲವಾಗಲಿದೆ. ಇದರಿಂದ ಮಕ್ಕಳಲ್ಲಿ ವ್ಯವಸಾಯ (ಕೃಷಿ)ದ ಬಗ್ಗೆ ತಿಳಿವಳಿಕೆ ಮತ್ತು ಆಸಕ್ತಿ ಮೂಡಿಸಿದಂತಾಗುತ್ತದೆ. ವಿದ್ಯಾಭ್ಯಾಸ ಮುಗಿದ ಮೇಲೆ ವಿದ್ಯಾರ್ಥಿಗಳು ಒಂದು ವೇಳೆ ನಿರುದ್ಯೋಗಿಗಳಾದರೆ ಆಸಕ್ತಿ ಇದ್ದವರು ವ್ಯವಸಾಯದ ಕಡೆ ಕಾಲಿಡಬಹುದು. ಇದರಿಂದ ವ್ಯವಸಾಯ ಎಷ್ಟು ಮುಖ್ಯ ಅನ್ನುವುದು ತಿಳಿಯುತ್ತದೆ. ವ್ಯವಸಾಯ ಮಾಡುವ ಯುವಕರ ಸಂಖ್ಯೆ ಕಡಿಮೆಯಾಗುತ್ತಿದೆ ಅನ್ನುವ ನೋವಿನಲ್ಲಿ ಈ ಮನವಿ ಮಾಡುತ್ತಿದ್ದು, ಸರ್ಕಾರ ಈ ಬಗ್ಗೆ ಗಮನ ಹರಿಸಬೇಕಾಗಿ ಈ ಮೂಲಕ ಕೋರುತ್ತೇನೆ.

– ರೈತನ ಮಗ, ಮೈಸೂರು.

ಹಸುಗಳ ಉಪಟಳ ತಪ್ಪಿಸಿ

ಮಾನ್ಯರೆ,

ಮೈಸೂರಿನ ವಿವಿ ಮೊಹಲ್ಲಾ 2ನೇ ಮುಖ್ಯ ರಸ್ತೆ ನಿರ್ಮಲಾ ಕಾನ್ವೆಂಟ್ ಬಳಿ ಹಸುಗಳ ಉಪಟಳ ಹೆಚ್ಚಾಗಿದೆ. ಈ ಹಸುಗಳು ಅನೇಕ ಬಾರಿ ಮಕ್ಕಳ ಮೇಲೆ ಎಗರಿ ಬೀಳುತ್ತವೆ. ಇದರಿಂದ ಮಕ್ಕಳು ಬಿದ್ದು ಗಾಯಗೊಂಡಿರುವುದೂ ಉಂಟು. ಹಸುಗಳು ಒಟ್ಟಿಗೆ ರಸ್ತೆಗೆ ಬರುವುದರಿಂದ ಮೊದಲೇ ಗುಂಡಿ ಬಿದ್ದ ರಸ್ತೆಯಲ್ಲಿ ವಾಹನ ಓಡಿಸುವಾಗ ಹಸುಗಳಿಗೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಹೋಗಿ ಅಪಘಾತಗಳಾಗುವ ಸಾಧ್ಯತೆಯೂ ಹೆಚ್ಚಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಕ್ರಮ ಕೈಗೊಂಡು ಸಮಸ್ಯೆಯನ್ನು ಬಗೆಹರಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇವೆ.

– ಶಾಲಾ ವ್ಯಾನ್ ಚಾಲಕರು, ಮೈಸೂರು.

ಪೊಲೀಸ್ ಬಡಾವಣೆಯಲ್ಲಿ ಹಂದಿಗಳ ಕಾಟ

ಮಾನ್ಯರೆ,

ಮೈಸೂರಿನ ಎಸ್‌ವಿಪಿ ಪೊಲೀಸ್ ಬಡಾವಣೆ ಎರಡನೇ ಹಂತದಲ್ಲಿ ಹಂದಿ ಕಾಟ ಜಾಸ್ತಿಯಾಗಿದೆ. ಇದರಿಂದ ಕಾರು ಮತ್ತು ದ್ವಿಚಕ್ರ ಸವಾರರು ಸಂಚರಿಸಲು ಹಾಗೂ ಚಿಕ್ಕ–ಪುಟ್ಟ ಮಕ್ಕಳು ರಸ್ತೆಯಲ್ಲಿ ಓಡಾಡುವುದೇ ತುಂಬಾ ಕಷ್ಟಕರವಾಗಿದೆ. ಇದರ ಬಗ್ಗೆ ಸಂಬಂಧಪಟ್ಟವರು ಕೂಡಲೇ ಗಮನ ಹರಿಸಿ ಹಂದಿಗಳ ಹಾವಳಿ ತಪ್ಪಿಸುವಂತೆ ಮನವಿ.

– ಲೋಕೇಶ್ ಮೂರ್ತಿ, ಮೈಸೂರು.



ಪ್ರೊ. ಆರ್. ಇಂದಿರಾ
ಸಮಾಜ ಶಾಸ್ತ್ರಜ್ಞೆ
ramaraoindira@gmail.com

ಸಮಾಜಮುಖಿ

ದಿನೇ ದಿನೇ ಹೆಚ್ಚುತ್ತಿರುವ ಮಕ್ಕಳ ಸಾಗಾಣಿಕೆ: ಎತ್ತ ಸಾಗುತ್ತಿದೆ ಈ ಸಮಾಜ?



ಅಮಾಯಕ–ಅಸಹಾಯಕ–ಆಶ್ರಯಹೀನ ಮಕ್ಕಳು ಈ ಜಾಲದಲ್ಲಿ ಸಿಲುಕಿ ಹಾಕಿಕೊಳ್ಳುತ್ತಿರುವ ರೀತಿಯನ್ನು ನೋಡಿದಾಗ. ಸಾಗಾಣಿಕೆಯಲ್ಲಿ ತೊಡಗಿರುವ ಅಪರಾಧ ಕೂಟಗಳ ಬಂಧನಕ್ಕೆ ಬಹು ಸುಲಭವಾಗಿ ಸಿಲುಕುವವರು ಮಕ್ಕಳು. ತಮ್ಮನ್ನು ತಾವು ರಕ್ಷಿಸಿಕೊಳ್ಳಲಾಗದ ಸ್ಥಿತಿ ಒಂದೆಡೆಯಾದರೆ, ದಾರಿದ್ರ್ಯ, ಹಸಿವು, ಕುಟುಂಬಗಳ ಅಲಕ್ಷ್ಯ ಅಥವಾ ಪೋಷಕರ ಗೈರುಹಾಜರಿ ಮುಂತಾದ ಕಾರಣಗಳಿಂದ ಅನೇಕ ಮಕ್ಕಳು ಸಾಗಾಣಿಕೆದಾರರ ಜಾಲಗಳಿಗೆ ಬಲಿಯಾಗುತ್ತಾರೆ. ಮಕ್ಕಳನ್ನು ಸ್ವತಃ ಪೋಷಕರೇ ಮಾರಾಟ ಮಾಡಿರುವಂತ ಪ್ರಕರಣಗಳೂ ವರದಿಯಾಗಿವೆ.

ಇತ್ತೀಚೆಗಷ್ಟೇ ರಾಷ್ಟ್ರೀಯ ಅಪರಾಧ ದಾಖಲಾತಿ ಪ್ರಾಧಿಕಾರ ಬಿಡುಗಡೆ ಮಾಡಿದ ಅಂಕಿ–ಅಂಶಗಳ ಪ್ರಕಾರ ಭಾರತದಲ್ಲಿ ಪ್ರತಿ 8 ನಿಮಿಷಗಳಿಗೊಮ್ಮೆ ಒಂದು ಮಗು ಸಾಗಾಣಿಕೆಯ ಜಾಲಕ್ಕೆ ಬಲಿಯಾಗುತ್ತಿದೆ. ಏನಿದು ಸಾಗಾಣಿಕೆ? ವಿಶ್ವ ಸಂಸ್ಥೆಯ ಮಾದಕ ದ್ರವ್ಯಗಳು ಮತ್ತು ಅಪರಾಧ ಕಚೇರಿಯ ಪ್ರಕಾರ 'ಎಲ್ಲ ವಯಸ್ಸಿನ ಪುರುಷರು, ಮಹಿಳೆಯರು ಹಾಗೂ ಮಕ್ಕಳನ್ನು ಅಪಹರಣ, ಬಲಾತ್ಕಾರ ಅಥವಾ ಹುಸಿ ಉದ್ಯೋಗ ಭರವಸೆಗಳನ್ನು ನೀಡಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ನ್ಯಾಯಬಾಹಿರವಾದ ಮಾರ್ಗಗಳ ಮೂಲಕ ಕರೆದೊಯ್ಯುವುದೇ ಮಾನವ ಸಾಗಾಣಿಕೆ'. ಹೀಗೆ ಸಾಗಣೆಯಾದ ವ್ಯಕ್ತಿಗಳನ್ನು ಅವರ ವಯಸ್ಸು ಹಾಗೂ ಲಿಂಗದ ಆಧಾರದ ಮೇಲೆ ಅಪರಾಧ ಚಟುವಟಿಕೆಗಳು, ಭಿಕ್ಷಾಟನೆ, ಲೈಂಗಿಕ ಚಟುವಟಿಕೆಗಳು, ಜೀತ ಮಾದರಿಯ ದುಡಿಮೆ, ಕೆಂಪು ದೀಪ ಪ್ರದೇಶಗಳಲ್ಲಿ ವೇಶ್ಯಾವಾಟಿಕೆಯಲ್ಲಿ ತೊಡಗಿಸುವುದು, ಇವೇ ಮೊದಲಾದ ಕೆಲಸಗಳಿಗಾಗಿ ಬಳಸಲಾಗುತ್ತದೆ. ಪ್ರತಿ ವರ್ಷವೂ 25 ಲಕ್ಷ ಜನರು ಜಗತ್ತಿನಾದ್ಯಂತ ಮಾನವ ಸಾಗಾಣಿಕೆಗೆ ಬಲಿಯಾಗುತ್ತಾರೆ, ಎಂದರೆ ಈ ಸಮಸ್ಯೆಯ ಆಳ ಎಷ್ಟಿದೆ ಎಂಬುದರ ಒಂದು ಅಂದಾಜು ನಮಗೆ ದೊರೆಯುತ್ತದೆ. ಮಾನವ ಸಾಗಾಣಿಕೆ ಇಂದು ಒಂದು ಬೃಹತ್ ಉದ್ಯಮವಾಗಿ ಬೆಳೆಯುತ್ತಿದ್ದು ಅದರಿಂದ ಬರುವ ವಾರ್ಷಿಕ ಲಾಭ 15,000 ಕೋಟಿ ರೂ.ಗಳು ಎಂದು ಅಂದಾಜು ಮಾಡಲಾಗಿದೆ.

ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವೇ ನೀಡಿರುವ ಒಂದು ಮಾಹಿತಿಯ ಪ್ರಕಾರ ಪ್ರತಿ ವರ್ಷವೂ 40,000 ಮಕ್ಕಳನ್ನು ಅಪಹರಣ ಮಾಡಲಾಗುತ್ತಿದ್ದು, ಅವರಲ್ಲಿ ಸುಮಾರು 11,000 ಮಕ್ಕಳ ಸುಳಿವೂ ಸಿಗುವುದಿಲ್ಲ. ಇದೇ ಅವಧಿಯಲ್ಲಿ 12,000 ದಿಂದ 50,000 ಮಹಿಳೆಯರು ಮತ್ತು ಹೆಣ್ಣು ಮಕ್ಕಳು ನೆರೆ ದೇಶಗಳಿಂದ ಲೈಂಗಿಕ ವ್ಯಾಪಾರಕ್ಕಾಗಿ ಸಾಗಾಣಿಕೆ ಮಾಡಲ್ಪಡುತ್ತಾರೆ ಎಂದು ಸ್ವಯಂಸೇವಾ ಸಂಸ್ಥೆಗಳು ಅಂದಾಜು ಮಾಡಿವೆ.

ಹೀಗೂ ಉಂಟೆ ಎಂದು ದಿಗ್ಭ್ರಮೆಗೊಳಿಸುವ ರೀತಿಯಲ್ಲಿ ಹರಡುತ್ತಿರುವ ಮಾನವ ಸಾಗಾಣಿಕೆಯ ಜಾಲದ ಅತ್ಯಂತ ಕರಾಳ ಮುಖದರ್ಶನವಾಗುವುದು ಅಮಾಯಕ–ಅಸಹಾಯಕ–ಆಶ್ರಯಹೀನ ಮಕ್ಕಳು ಈ ಜಾಲದಲ್ಲಿ ಸಿಲುಕಿ ಹಾಕಿಕೊಳ್ಳುತ್ತಿರುವ ರೀತಿಯನ್ನು ನೋಡಿದಾಗ. ಸಾಗಾಣಿಕೆಯಲ್ಲಿ ತೊಡಗಿರುವ ಅಪರಾಧ ಕೂಟಗಳ ಬಂಧನಕ್ಕೆ ಬಹು ಸುಲಭವಾಗಿ ಸಿಲುಕುವವರು ಮಕ್ಕಳು. ತಮ್ಮನ್ನು ತಾವು ರಕ್ಷಿಸಿಕೊಳ್ಳಲಾಗದ ಸ್ಥಿತಿ ಒಂದೆಡೆಯಾದರೆ, ದಾರಿದ್ರ್ಯ, ಹಸಿವು, ಕುಟುಂಬಗಳ ಅಲಕ್ಷ್ಯ ಅಥವಾ ಪೋಷಕರ ಗೈರು ಹಾಜರಿ ಮುಂತಾದ ಕಾರಣಗಳಿಂದ ಅನೇಕ ಮಕ್ಕಳು ಸಾಗಾಣಿಕೆದಾರರ ಜಾಲಗಳಿಗೆ ಬಲಿಯಾಗುತ್ತಾರೆ. ಮಕ್ಕಳನ್ನು ಸ್ವತಃ ಪೋಷಕರೇ ಮಾರಾಟ ಮಾಡಿರುವಂತ ಪ್ರಕರಣಗಳೂ ವರದಿಯಾಗಿವೆ.

ಜಾಗತಿಕ ಮಟ್ಟದಲ್ಲಿ ಮಾನವ ಸಾಗಾಣಿಕೆಗೆ ಬಲಿಯಾದ ಪ್ರತಿ ಮೂವರಲ್ಲಿ ಒಂದು ಮಗು ಇರುತ್ತದೆ. ಕಡಿಮೆ ಆದಾಯ ಹೊಂದಿರುವ ದೇಶಗಳಲ್ಲಿ ಸಾಗಾಣಿಕೆಯಾಗುವವರಲ್ಲಿ ಮಕ್ಕಳು ಅರ್ಧಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿರುತ್ತಾರೆ. ಗಂಡು ಮತ್ತು ಹೆಣ್ಣು ಮಕ್ಕಳಿಬ್ಬರೂ ಸಾಗಾಣಿಕೆಗೆ ಬಲಿಯಾದರೂ ಹೆಣ್ಣು ಮಕ್ಕಳು ತಮ್ಮ ಜೈವಿಕತೆಯ ಕಾರಣದಿಂದಾಗಿ ಲೈಂಗಿಕ ಅತ್ಯಾಚಾರಗಳಿಗೆ ಒಳಗಾಗುತ್ತಾರೆ. ಮನೆಗಳಲ್ಲಿ, ಹೆದ್ದಾರಿಗಳಲ್ಲಿರುವ ಡಾಬಾಗಳಲ್ಲಿ, ಮಸಾಜ್ ಪಾರ್ಲರ್‌ಗಳಲ್ಲಿ ಅಥವಾ ಹೋಟೆಲ್‌ಗಳಲ್ಲಿ ಕೆಲಸ ಕೊಡಿಸುವ ಆಮಿಷವನ್ನು ಅವರ ಪೋಷಕರಿಗೊಡ್ಡಿ, ಅವರಿಗೆ ಹಣವನ್ನೂ ನೀಡಿ ಹೆಣ್ಣು ಮಕ್ಕಳನ್ನು ಪರ ಸ್ಥಳಗಳಿಗೆ ಕರೆದೊಯ್ದು ಅವರ ಮೇಲೆ ಲೈಂಗಿಕ ದೌರ್ಜನ್ಯವನ್ನು ಎಸಗಲಾಗುತ್ತದೆ. ಈ ಮಕ್ಕಳಲ್ಲಿ ಅನೇಕರು ಕೆಂಪು ಪ್ರದೇಶಗಳಲ್ಲಿರುವ ವೇಶ್ಯಾಗೃಹಗಳಿಗೂ ಮಾರಲ್ಪಡುತ್ತಾರೆ. ಸಾಗಾಣಿಕೆಗೆ ಬಲಿಯಾದ ಗಂಡು ಮಕ್ಕಳನ್ನು ಹೆಚ್ಚಾಗಿ ಕೈಗಾರಿಕೆಗಳಲ್ಲಿ ದುಡಿಯಲು, ಭಿಕ್ಷಾಟನೆಗಾಗಿ, ಅಂಗಾಂಗ ಕಸಿ ಮಾಡಲು ಬಳಸಿಕೊಳ್ಳಲಾಗುತ್ತದೆ.

ಮಕ್ಕಳ ಸಾಗಾಣಿಕೆಯ ಪ್ರಕರಣಗಳು ಇಷ್ಟೊಂದು ಗಂಭೀರ ಪ್ರಮಾಣದಲ್ಲಿ ಏರಿಕೆಯಾಗುತ್ತಿರಲು ಎರಡು ಪ್ರಮುಖ ಕಾರಣಗಳೆಂದರೆ, ಒಂದೆಡೆ ಹೆಚ್ಚುತ್ತಿರುವ ಸಾಮಾಜಿಕ–ಆರ್ಥಿಕ ಅಂತರ, ಮತ್ತು ಇನ್ನೊಂದೆಡೆ ಅನಿಯಂತ್ರಿತವಾಗಿ ಬೆಳೆಯುತ್ತಿರುವ ಗ್ರಾಹಕ ಸಂಸ್ಕೃತಿ. ಮೊದಲೇ ಹೆಚ್ಚುತ್ತಿದ್ದ ಗ್ರಾಮ–ನಗರ ಮತ್ತು ಶ್ರೀಮಂತ–ಬಡವರ ನಡುವಿನ ಅಂತರಗಳನ್ನು ಕೋವಿಡ್ ಮತ್ತಷ್ಟು ಆಳವಾಗಿಸಿತು. ಕೋವಿಡ್ ಹಾಗೂ ನಂತರದ ಕಾಲದಲ್ಲಿ ಉದ್ಯೋಗವನ್ನು ಕಳೆದುಕೊಂಡವರು, ಶಾಲೆಗಳಿಂದ ಹೊರಗುಳಿದ ಹಾಗೂ ಪೋಷಕರು ಪಿಡುಗಿಗೆ ಬಲಿಯಾದಾಗ ಅನಾಥರಾದ ಮಕ್ಕಳ ಸಂಖ್ಯೆ ಎರಡೂ ಹೆಚ್ಚಾಗಿದ್ದು, ವಲಸಿ ಸಮುದಾಯಗಳ ಜೀವನಾಧಾರಗಳಿಗೆ ಕೊಡಲಿ ಪೆಟ್ಟು ಬಿದ್ದದ್ದು, ಈ ಪರಿಸ್ಥಿತಿಗಳ ದುರುಪಯೋಗ ಮಾಡಿಕೊಂಡ ಸಾಗಾಣಿಕೆಯ ಜಾಲ ಉದ್ಯೋಗ ಮತ್ತು ಆಸರೆಗಳ ಹುಸಿ ಭರವಸೆಗಳನ್ನು ನೀಡಿ ಅನೇಕ ಬಡ ಕುಟುಂಬಗಳ ಅಸಹಾಯಕತೆಯನ್ನೇ ಬಂಡವಾಳವಾಗಿರಿಸಿಕೊಂಡು ಆ ಕುಟುಂಬಗಳ ಎಳೆ ಜೀವಗಳನ್ನು ಬಲಿಪಶುಗಳನ್ನಾಗಿಸಿದ್ದು ಒಂದು ಸಾಮಾಜಿಕ ವ್ಯವಸ್ಥೆ ಎಷ್ಟು ಲಜ್ಜಾಹೀನ ಮಟ್ಟಕ್ಕೆ ಹೋಗಬಹುದು ಎಂಬುದಕ್ಕೆ ಒಂದು ನಿದರ್ಶನವಷ್ಟೇ.

ಭಾರತದಲ್ಲೇ ಅಲ್ಲದೆ ಅನೇಕ ಮಧ್ಯ ಪ್ರಾಚ್ಯ ದೇಶಗಳಲ್ಲಿ ಆರ್ಥಿಕ ಉದಾರೀಕರಣದ ಪರಿಣಾಮವಾಗಿ ಶರವೇಗದಲ್ಲಿ ಬೆಳೆದ ನವ ಶ್ರೀಮಂತ ವರ್ಗದ ಐಷಾರಾಮಿ ಹಾಗೂ ಸ್ವೇಚ್ಛಾಚಾರಿ ಬದುಕಿನ ವ್ಯಾಮೋಹ ಲೈಂಗಿಕ ಪ್ರವಾಸೋದ್ಯಮವೆಂಬ ಬೃಹತ್ ಅಂತರ–ರಾಜ್ಯ, ಅಂತರ–ದೇಶ ಜಾಲಗಳ ಉಗಮಕ್ಕೆ ದಾರಿ ಮಾಡಿಕೊಟ್ಟಿದ್ದು ಕಳೆದ 10–20 ವರ್ಷಗಳಲ್ಲಿ ಈ ಜಗತ್ತು ಕಂಡ ಒಂದು ಆಘಾತಕಾರಿ ಬೆಳವಣಿಗೆ. ನಮ್ಮ ದೇಶದ ಈಶಾನ್ಯ ಭಾಗಗಳು, ನೇಪಾಳ ಮತ್ತು ಬಾಂಗ್ಲಾದೇಶಗಳಿಂದ ಹೆಣ್ಣು ಮಕ್ಕಳನ್ನು ಸಾಗಾಣಿಕೆ ಮಾಡಲು ಪ್ರಚೋದನೆ ನೀಡಿದ್ದೇ ಈ ಲೈಂಗಿಕ ಪ್ರವಾಸೋದ್ಯಮ.

ಸಂವಿಧಾನದ 23ನೇ ವಿಧಿ ಎಲ್ಲ ಬಗೆಯ ಮಾನವ ಸಾಗಾಣಿಕೆಯನ್ನು ಮೂಲಭೂತ ಹಕ್ಕುಗಳ ಉಲ್ಲಂಘನೆಯೆಂದು ಪರಿಗಣಿಸಿ, ಅದನ್ನು ಅಪರಾಧವೆಂದು ಘೋಷಿಸಿದ್ದರೂ ಕಳೆದ 75 ವರ್ಷಗಳಲ್ಲಿ ಈ ಪಿಡುಗನ್ನು ತಡೆಗಟ್ಟಬಹುದಾದ ಅನೇಕ ಕಾಯಿದೆಗಳು ಜಾರಿಗೆ ಬಂದಿದ್ದರೂ ಮಕ್ಕಳ ಸಾಗಾಣಿಕೆ ಇಷ್ಟೊಂದು ಗಂಭೀರ ಪ್ರಮಾಣದಲ್ಲಿ ಹೆಚ್ಚುತ್ತಾ ಹೋಗುತ್ತಿರುವುದು ಮಾನವ ಸಾಗಾಣಿಕೆಯ ಜಾಲ ಎಷ್ಟು ಆಳವಾಗಿ ಬೇರೂರಿದೆ ಎಂಬುದಕ್ಕೆ ಸಾಕ್ಷಿಯಾಗಿದೆ. ಈಗಾಗಲೇ ಜಾರಿಯಲ್ಲಿರುವ ಕಾಯಿದೆಗಳಲ್ಲಿ ಪ್ರಮುಖವಾಗಿ ಹೆಸರಿಸಬಹುದಾದಂತವು ಮಹಿಳೆಯರ ಮತ್ತು ಹೆಣ್ಣು ಮಕ್ಕಳ ಅನೈತಿಕ ಸಾಗಾಣಿಕೆಯನ್ನು ತಡೆಗಟ್ಟುವ ಕಾಯಿದೆ, ಬಾಲ ನ್ಯಾಯ ಕಾಯಿದೆ, ಅಪರಾಧ ಕಾಯಿದೆಗೆ 2013ರಲ್ಲಿ ತಂದಿರುವ ತಿದ್ದುಪಡಿ, ಮಕ್ಕಳನ್ನು ಲೈಂಗಿಕ ಅಪರಾಧಗಳಿಂದ ರಕ್ಷಿಸಲು 2012ರಲ್ಲಿ ಜಾರಿಯಾದ ಪೋಕ್ಸೋ ಕಾಯಿದೆ, ಜೀತ ಪದ್ಧತಿಯ ನಿರ್ಮೂಲನ ಕಾಯಿದೆ, ಬಾಲ್ಯವಿವಾಹ ರದ್ದತಿ ಕಾಯಿದೆ, ಬಾಲಕಾರ್ಮಿಕ ಪದ್ಧತಿಯನ್ನು ತಡೆಗಟ್ಟುವ ಕಾಯಿದೆ ಮತ್ತು ಮಾನವ ಅಂಗಗಳನ್ನು ಕಸಿ ಮಾಡುವುದನ್ನು ನಿಯಂತ್ರಿಸುವ ಕಾಯಿದೆ. ಈ ಕಾಯಿದೆಗಳನ್ನು ಆಧಾರವಾಗಿಟ್ಟುಕೊಂಡು ಮಕ್ಕಳ ಸಾಗಾಣಿಕೆ ಹಾಗೂ ಅದರಿಂದ ಅವರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳನ್ನು ತಡೆಗಟ್ಟಲು ಅವಕಾಶವಿದೆ. ಆದರೂ ಸಾಗಾಣಿಕೆಯ ಪ್ರಮಾಣ ಹೆಚ್ಚುತ್ತಿರುವುದೇಕೆ?

ಮಾನವ ಸಾಗಾಣಿಕೆಯನ್ನು ಗಂಭೀರವಾದ ಅಪರಾಧವೆಂದು ಪರಿಗಣಿಸಿ ಅದಕ್ಕೆ ಕಠಿಣ ಶಿಕ್ಷೆಯನ್ನು ವಿಧಿಸುವುದೇ ಅಲ್ಲದೆ, ಸಾಗಾಣಿಕೆಗೆ ಗುರಿಯಾಗುತ್ತಿರುವವರನ್ನು ಗುರುತಿಸಿ, ಈ ಜಾಲದಿಂದ ಅವರನ್ನು ರಕ್ಷಿಸಿ, ಸುರಕ್ಷಿತ–ಸುಸ್ಥಿರ ಬದುಕನ್ನು ನೀಡಲು ಅನುವು ಮಾಡಿಕೊಡುವ ಉದ್ದೇಶದಿಂದ ರೂಪಿತವಾಗಿರುವ ಮಾನವ ಸಾಗಾಣಿಕೆ (ತಡೆಕಟ್ಟುವಿಕೆ, ರಕ್ಷಣೆ ಮತ್ತು ಪುನಶ್ಚೇತನ) ವಿಧೇಯಕ 2018ರಲ್ಲಿ ಲೋಕಸಭೆಯಲ್ಲಿ ಮಂಡನೆಯಾಗಿ ಅಂಗೀಕೃತವಾದರೂ ರಾಜ್ಯಸಭೆಯ ಮುಂದೆ ಬರಲಿಲ್ಲ ಎಂಬ ಕಾರಣದಿಂದಾಗಿ ರದ್ದಾಯಿತು. ಈ ವಿಧೇಯಕ ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ತನಿಖೆ ಮತ್ತು ಸುಧಾರಣಾ ಅಧಿಕಾರಿಗಳ ನೇಮಕ, ಸಾಗಾಣಿಕೆಯ ಜಾಲದಲ್ಲಿ ಸಿಲುಕಿದವರನ್ನು ರಕ್ಷಿಸಲು ಸಾಗಾಣಿಕೆ ವಿರೋಧಿ ಕೇಂದ್ರಗಳ ಸ್ಥಾಪನೆ ಹಾಗೂ ಹಾಗೆ ರಕ್ಷಿಸಲಾದವರ ಆರೈಕೆ ಹಾಗೂ ಸುಧಾರಣೆಗಾಗಿ ಸಮಿತಿಗಳ ರಚನೆಯನ್ನು ಶಿಫಾರಸ್ಸು ಮಾಡಿದೆ. ವಿಧೇಯಕ ಕಾನೂನಿನ ರೂಪವನ್ನು ತಳೆದಾಗ ಸಾಗಾಣಿಕೆಯ ಕೆಲ ಪ್ರಕರಣಗಳು ಗಂಭೀರ ಅಪರಾಧಗಳೆಂದು ಪರಿಗಣಿಸಲ್ಪಟ್ಟು ಅವುಗಳಿಗೆ ಕಠಿಣ ಶಿಕ್ಷೆಯನ್ನು ವಿಧಿಸಬಹುದು. ಅವುಗಳೆಂದರೆ ಬಲಾತ್ಕಾರದ ದುಡಿಮೆ, ಭಿಕ್ಷಾಟನೆ, ಅಪ್ರಾಪ್ತ ವಯಸ್ಸಿನಲ್ಲಿ ಲೈಂಗಿಕ ಚಟುವಟಿಕೆಗಳಲ್ಲಿ ತೊಡಗಲು ಬಲಾತ್ಕಾರವೆಸಗುವುದು.

ಮಾನವ ಸಾಗಾಣಿಕೆ (ತಡೆಗಟ್ಟುವಿಕೆ, ರಕ್ಷಣೆ ಮತ್ತು ಪುನಶ್ಚೇತನ) ವಿಧೇಯಕ 2021 ಎಂಬ ಹೆಸರಿನಲ್ಲಿ ಮತ್ತಷ್ಟು ಬಿಗಿ ಕ್ರಮಗಳನ್ನು ಒಳಗೊಂಡಂತೆ ಮಳೆಗಾಲದ ಸಂಸತ್ ಅಧಿವೇಶನದಲ್ಲಿ ಮಂಡನೆಯಾಗಿ ಕಾಯಿದೆಯ ರೂಪವನ್ನು ಪಡೆಯುತ್ತದೆ ಎಂಬ ಆಶಾಭಾವನೆ ಇತ್ತು ಆದರೆ ಅದಿನ್ನೂ ಸಾಕಾರವಾಗಿಲ್ಲ. ಇದರಲ್ಲಿ ತೃತೀಯ ಲಿಂಗಿಗಳ ಸೇರ್ಪಡೆ, 20 ವರ್ಷಗಳವರೆಗೂ ಕಠಿಣ ಶಿಕ್ಷೆ, ಅಪರಾಧ ತೀರಾ ಗಂಭೀರ ಸ್ವರೂಪದ್ದಾಗಿದ್ದರೆ ಮರಣದಂಡನೆ ಮುಂತಾದ ಪ್ರಸ್ತಾವನೆಗಳಿದ್ದು, ವಿಧೇಯಕದ ಬಗ್ಗೆ ಕೆಲ ವಲಯಗಳಿಂದ ಅಸಮಾಧಾನವೂ ವ್ಯಕ್ತವಾಗಿದೆ. ಒಟ್ಟಿನಲ್ಲಿ ಮಕ್ಕಳ ಸಾಗಾಣಿಕೆ ಅವ್ಯಾಹತವಾಗಿ ನಡೆಯುತ್ತಿದ್ದು ದಿನೇ ದಿನೇ ಸಾಗಾಣಿಕೆಯ ಕಬಂಧಬಾಹುಗಳು ದೇಶದೆಲ್ಲೆಡೆ ಚಾಚುತ್ತಿರುವುದಂತೂ ನಿಜ.

ಬಹು ಕಾಲದಿಂದಲೂ ಮಕ್ಕಳು ನಾನಾ ಪ್ರಕಾರದ ದೌರ್ಜನ್ಯಗಳಿಗೆ ಬಲಿಯಾಗುತ್ತಿದ್ದು ಅದನ್ನು ಅಲಕ್ಷಿಸುತ್ತಲೇ ಬಂದಿರುವ ಸಮಾಜ ಹಾಗೂ ರಾಜ್ಯ ವ್ಯವಸ್ಥೆ ಇನ್ನೂ ಮುಂದಾದರೂ ಎಚ್ಚೆತ್ತುಕೊಂಡು ಕಠಿಣ ಕ್ರಮಗಳನ್ನು ತೆಗೆದುಕೊಂಡು ಮಕ್ಕಳ ಬದುಕು ಕಳೆದು ಹೋಗದಂತೆ ಕಾರ್ಯಪ್ರವೃತ್ತವಾಗಲಿ ಎಂದು ಆಶಿಸೋಣವೇ?

ಮುರುಘಾ ಶ್ರೀಗಳ ವಿರುದ್ಧ ಅಪ್ರಾಪ್ತರ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣ

ಸಾಕ್ಷ್ಯಗಳ ನಾಶವಾಗಿದೆ, ಸರ್ಕಾರ ಪ್ರಕರಣವನ್ನು ಲಘುವಾಗಿ ಪರಿಗಣಿಸಿದ್ದು ಯಾರ ರಕ್ಷಣೆಗೆ?

ಎಂಎಲ್‌ಸಿ ಎ.ಹೆಚ್.ವಿಶ್ವನಾಥ್ ಕಟು ಪ್ರಶ್ನೆ

- ಬ್ರಹ್ಮಚರ್ಯದ ವೇಷದಲ್ಲಿರುವ ಸ್ವಾಮೀಜಿಗಳಿಂದ ದೌರ್ಜನ್ಯ
- ಸಂಸಾರಿಗಳೇ ಮಠಾಧಿಪತಿಗಳಾಗುವುದು ಒಳ್ಳೆಯದು


ಮೈಸೂರು, ಸೆ.4 (ಪಿಎಂ)– ಅಪ್ರಾಪ್ತ ಹೆಣ್ಣು ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದಡಿ ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಾಗಿದ್ದರೂ ಚಿತ್ರದುರ್ಗದ ಮುರುಘಾ ಮಠದ ಶ್ರೀ ಡಾ.ಶಿವಮೂರ್ತಿ ಮುರುಘಾ ಶರಣರು ಸೇರಿದಂತೆ ಆರೋಪಿಗಳು ಧೈರ್ಯವಾಗಿ ಮಠದಲ್ಲಿ ಓಡಾಡಿಕೊಂಡಿದ್ದರಿಂದ ಸಾಕ್ಷ್ಯಗಳ ನಾಶವಾಯಿತು. ಪ್ರಕರಣವನ್ನು ಸರ್ಕಾರ ಬಹಳ ಲಘುವಾಗಿ ಪರಿಗಣಿಸಿತು. ಹೀಗೆ ಮಾಡಿದ್ದು ಯಾರ ರಕ್ಷಣೆಗೆ? ಎಂದು ವಿಧಾನಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಕಟುವಾಗಿ ಪ್ರಶ್ನಿಸಿದರು.

ಮೈಸೂರಿನ ಕಾಡಾ ಕಚೇರಿ ಸಂಕೀರ್ಣದಲ್ಲಿರುವ ತಮ್ಮ ಕಚೇರಿಯಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬಲಿಷ್ಠವಾದ ಪೋಕ್ಸೋ ಕಾಯ್ದೆಯನ್ನೇ ಪೊಲೀಸರು ದುರ್ಬಲಗೊಳಿಸಿದರು. ಯಾರ ಪ್ರಭಾವಕ್ಕೆ ಒಳಗಾಗಿ ಹೀಗೆ ಮಾಡಿದರು. ಪೋಕ್ಸೋ, ಅಟ್ರಾಸಿಟಿ ಅಡಿ ಪ್ರಕರಣ ದಾಖಲಾದರೂ ಚಿತ್ರದುರ್ಗದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಕಾನೂನಿನಂತೆ ತುರ್ತು ಕ್ರಮ ಕೈಗೊಳ್ಳಲಿಲ್ಲ. ಹಾಗಾಗಿ ಇವರನ್ನು ಅಮಾನತು ಮಾಡಬೇಕು. ಇದನ್ನು ಈಗಾಗಲೇ ಹೇಳಿದ್ದೆ. ಕೋರ್ಟ್ ಚಳಿ ಬಿಡಿಸಿದ ಮೇಲೆ ಪೊಲೀಸರು ಎಚ್ಚೆತ್ತುಕೊಂಡರು. ಅಲ್ಲಿಯವರೆಗೆ ಪೋಕ್ಸೋ ಕಾಯ್ದೆಯಡಿ ಆರೋಪಿಗಳು ಧೈರ್ಯವಾಗಿ ಮಠದಲ್ಲಿ ಓಡಾಡಿಕೊಂಡಿದ್ದರು. ಇದರಿಂದ ಸಾಕ್ಷ್ಯ ನಾಶವಾಯಿತು ಎಂದು ಕಿಡಿಕಾರಿದರು.

ಪ್ರಕರಣವನ್ನು ಸರ್ಕಾರ ಬಹಳ ಲಘುವಾಗಿ ಪರಿಗಣಿಸಿತು. ಯಾರ ರಕ್ಷಣೆಗಾಗಿ ಇಷ್ಟು ಲಘುವಾಗಿ ತೆಗೆದುಕೊಂಡರು. ಶ್ರೀಸಾಮಾನ್ಯರು, ದಲಿತರಿಗಾಗಿಯೇ? ಸಂತ್ರಸ್ತ ಬಾಲಕಿಯರು ದಲಿತ ಮತ್ತು ಹಿಂದುಳಿದ ವರ್ಗಕ್ಕೆ ಸೇರಿದವರು. ಇವರ ಪರವಾಗಿ ನಿಲ್ಲಬೇಕಾದ ಅಹಿಂದ ನಾಯಕರು, ಅಹಿಂದ ಸ್ವಾಮಿಗಳು ಏನು ಮಾಡುತ್ತಿದ್ದಾರೆ ಎಂದು ವಿಶ್ವನಾಥ್ ಪ್ರಶ್ನಿಸಿದರು.

ಪೊಲೀಸರ ನಿರ್ಲಕ್ಷ್ಯವನ್ನು ಗೃಹ ಇಲಾಖೆ ಗಂಭೀರವಾಗಿ ಪರಿಗಣಿಸಬೇಕು. ನ್ಯಾಯಾಧೀಶರು ಇವರನ್ನು ಎಚ್ಚರಿಸುವವರೆಗೂ ಓಡಾಡಿಕೊಂಡು ಇದ್ದರು. ಈಗ ಎಲ್ಲಾ ಸಾಕ್ಷ್ಯ ನಾಶ ಆಗಿ ಹೋಗಿದೆ. ಹಾಸ್ಟೆಲ್‌ನಲ್ಲಿದ್ದ ಬೆಡ್ ಶೀಟ್ ಸೇರಿದಂತೆ ಇನ್ನಿತರ ವಸ್ತುಗಳು ಸೇರಿದಂತೆ ಎಲ್ಲದರಲ್ಲೂ ಇದ್ದ ಸಾಕ್ಷ್ಯಗಳು ನಾಶವಾಗಿವೆ. ಆ ಮೂಲಕ ಸತ್ಯ ನಾಶ ಮಾಡಲಾಗಿದೆ. ಇದೀಗ ಇತರ ಆರೋಪಿಗಳನ್ನು ಬಂಧಿಸಲು ಪೊಲೀಸರು ಓಡಾಡುತ್ತಿದ್ದಾರೆ ಎಂದರು.

ಪೋಕ್ಸೋ ಕೋರ್ಟ್ ಹಾಗೂ ಅಲ್ಲಿನ ನ್ಯಾಯಾಧೀಶರು ನೆಲದ ಕಾನೂನು ಎತ್ತಿಹಿಡಿಯುವ ಮೂಲಕ ನಾಡಿನ ಜನತೆಗೆ ಕಾನೂನು, ಕೋರ್ಟ್ ಬಗೆಗಿನ ನಂಬಿಕೆಯನ್ನು ಹೆಚ್ಚಿಸಿದ್ದಾರೆ. ಅದಕ್ಕಾಗಿ ನ್ಯಾಯಾಧೀಶರಿಗೆ ನಾಡಿನ ನ್ಯಾಯಯುತ ಪ್ರಜೆಗಳ ಪರವಾಗಿ ಅಭಿನಂದನೆ ಸಲ್ಲಿಸುತ್ತೇನೆ ಎಂದರು.



ರಕ್ಷಣೆ ನೀಡಬೇಕು: ಸಂತ್ರಸ್ತ ಬಾಲಕಿಯರ ಪರವಾಗಿ ನಿಂತಿರುವ ಒಡನಾಡಿ ಸೇವಾ ಸಂಸ್ಥೆ ಸ್ಟ್ಯಾನ್ಲಿ ಮತ್ತು ಪರಶು ಅವರಿಗೆ ಪೊಲೀಸರು ಸೂಕ್ತ ರಕ್ಷಣೆ ನೀಡಬೇಕು. ಹೆಸರಾಂತ ಮಠದ ಶ್ರೀಗಳ ಎದುರು ಧೈರ್ಯವಾಗಿ ನಿಂತ ಸ್ಟ್ಯಾನ್ಲಿ ಮತ್ತು ಪರಶು ಅಭಿನಂದಿತರು. ಅವರ ಮೇಲೆ ಈಗಾಗಲೇ ಬೆದರಿಕೆ ಒಡ್ಡುವುದು ಶುರುವಾಗಿದೆ. ಹಾಗಾಗಿ ಅವರಿಗೆ ರಕ್ಷಣೆ ನೀಡಬೇಕು ಎಂದು ಆಗ್ರಹಿಸಿದರು.

ಮಾಜಿ ಶ್ರೀಗಳು ಎಂದು ಸಂಬೋಧಿಸಿದ ಹಳ್ಳಿಹಕ್ಕಿ: ಸಂತ್ರಸ್ತ ಮಕ್ಕಳ ಪರವಾಗಿ ಮಾತನಾಡುವವರೇ ಇಲ್ಲ. ಕೆಲ ಮಂತ್ರಿಗಳು, ಮಾಜಿ ಮಂತ್ರಿಗಳು ಶ್ರೀಗಳ ಪರವಾಗಿ ಮಾತನಾಡುತ್ತಿದ್ದಾರೆ. ಪೋಕ್ಸೋ ಕಾಯ್ದೆಯನ್ನೇ ಇವರು ಅರ್ಥ ಮಾಡಿಕೊಂಡಿಲ್ಲ. ಮತ್ತೆ ಶ್ರೀಗಳು ಗೆದ್ದು ಬರುತ್ತಾರೆ ಎಂಬಂತಹ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಇವರು ಮಾಜಿ ಶ್ರೀಗಳ ಪರವಾಗಿ ಮಾತನಾಡುವುದನ್ನು ಮೊದಲು ನಿಲ್ಲಿಸಬೇಕು. ಈಗಾಗಲೇ ಕೇಂದ್ರ ಗೃಹ ಸಚಿವ ಅಮಿತ್ ಶಾ ಕೂಡ ಆ ರೀತಿಯಲ್ಲಿ ಮಾತನಾಡದಂತೆ ಹೇಳಿದ್ದಾರೆ ಎಂದು ಹೇಳಿದರು.

ಬ್ರಹ್ಮಚರ್ಯದ ವೇಷದಲ್ಲಿ ಸಾಕಷ್ಟು ಮಠಾಧೀಶರು: ಮುರುಘಾ ಮಠ ಪ್ರಸಿದ್ಧವಾದದ್ದು. ಆದರೆ ಈ ಶ್ರೀಗಳಿಂದ ಇಡೀ ಸ್ವಾಮೀಜಿಗಳ ಕುಲಕ್ಕೆ ಅವಮಾನ ಮಾಡಿದಂತಾಗಿದೆ. ಇನ್ನು ಮುಂದೆ ಸಂಸಾರಿಗಳೇ ಮಠಾಧಿಪತಿಗಳಾಗುವುದು ಒಳ್ಳೆಯದು. ಬ್ರಹ್ಮಚಾರಿಗಳು ಎಂದು ಬಂದವರಿಂದ ಇಂತಹ ದೌರ್ಜನ್ಯ ನಡೆಯುತ್ತಿದೆ. ನಮ್ಮಲ್ಲಿ ಸಂಸಾರಿಗಳಾಗಿಯೂ ಮಠಮಾನ್ಯದ ನೇತೃತ್ವ ವಹಿಸಿದವರು ಈಗಾಗಲೇ ಇದ್ದಾರೆ ಎಂದು ಎಂಎಲ್‌ಸಿ ವಿಶ್ವನಾಥ್ ಪ್ರತಿಪಾದಿಸಿದರು.

ಸಂತ್ರಸ್ತರ ಹೇಳಿಕೆ ಗಂಭೀರವಾಗಿ ಪರಿಗಣಿಸಬೇಕು: ಸರ್ಕಾರ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಬೇಕು. ಈ ಪ್ರಕರಣ ಸಂಬಂಧ ಇನ್ನು ಯಾರ್‍ಯಾರು ಇದ್ದರೋ ಅವರೆಲ್ಲರನ್ನು ಹೊರತರಬೇಕು. ಕರ್ನಾಟಕಕ್ಕೆ ಈ ಮಾಜಿ ಸ್ವಾಮೀಜಿಯಿಂದ ಅಂಟಿರುವ ಕಳಂಕವನ್ನು ಕಾನೂನು ಮೂಲಕ ಸರ್ಕಾರ ತೊಳೆದುಕೊಳ್ಳಬೇಕು. ಅಲ್ಲದೆ, ಸಮಾಜಘಾತುಕರ ಸದೆಬಡಿಯುವ ಮೂಲಕ ಸಮಾಜವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಅಪ್ರಾಪ್ತ ಮಕ್ಕಳು ಸುಳ್ಳು ಹೇಳುವುದಿಲ್ಲ. ಹಾಗಾಗಿ ಅವರು ಮುಗ್ಧರು. ಅವರ ಹೇಳಿಕೆಗಳನ್ನು ಗಂಭೀರವಾಗಿ ಪರಿಗಣಿಸಿ ರಾಜ್ಯದಲ್ಲಿ ಒಳ್ಳೆಯ ವಾತಾವರಣ ನಿರ್ಮಿಸಲು ಸರ್ಕಾರ ಮುಂದಾಗಬೇಕು ಎಂದು ಒತ್ತಾಯಿಸಿದರು.

ಗೃಹ ಸಚಿವರು ಪ್ರಾರಂಭದಲ್ಲಿ ಶ್ರೀಗಳ ಬಗ್ಗೆ ಮೃದು ಧೋರಣೆಯಲ್ಲಿ ಮಾತನಾಡಿದ್ದ ಕುರಿತು ಪ್ರತಿಕ್ರಿಯಿಸಿ, ಮಂತ್ರಿಗಳು, ಮಾಜಿ ಮಂತ್ರಿಗಳು ರಾಜಕಾರಣಿಗಳಿಗೆ ಏನಾಗಿದೆಯೋ ಗೊತ್ತಿಲ್ಲ. ಇವರ ಪ್ರಕಾರ ಸ್ವಾಮೀಜಿಗೆ ಏನೋ ಆಗಿ ಹೋಗಿದೆ. ಆದರೆ ಆಗಿರುವುದು ಸ್ವಾಮೀಜಿಯವರಿಗಲ್ಲ. ಅವರಿಂದ ನಾಡಿಗೆ ಕಳಂಕ ಬಂದಿದೆ ಎಂದರಲ್ಲದೆ, ನ್ಯಾಯಾಂಗ ಬಂಧನಕ್ಕೆ ಸ್ವಾಮೀಜಿಗಳು ಕಾವಿಯಲ್ಲಿ ಹೋಗುತ್ತಾರೆ. ಇದಕ್ಕೆ ಕಾನೂನು ಅವಕಾಶವಿದೆಯೇ? ಎಂದು ಕಿಡಿಕಾರಿದರು.

ಅನ್ಯಾಯಕ್ಕೆ ಒಳಗಾಗಿರುವವರು ಇನ್ನು ಇದ್ದಾರೆ ಎನ್ನಲಾಗುತ್ತಿರುವ ಬಗ್ಗೆ ಪ್ರತಿಕ್ರಿಯಿಸಿ, ಸರ್ಕಾರ ಅವರಿಗೆ ರಕ್ಷಣೆ ಕೊಟ್ಟು ಇನ್ನೂ ಏನಾದರೂ ಇದ್ದರೆ ಬಯಲಿಗೆಳೆಯಬೇಕು. ಗೃಹ ಇಲಾಖೆ ಈ ಪ್ರಕರಣದಲ್ಲಿ ಚಾಕಚಕ್ಯತೆಯಿಂದ ಕೆಲಸ ಮಾಡಬೇಕು ಎಂದರಲ್ಲದೆ, ಶ್ರೀಗಳ ವಿರುದ್ಧ ಷಡ್ಯಂತರ ಎಂಬುದೆಲ್ಲಾ ಸುಮ್ಮನೆ ಶುರು ಮಾಡುತ್ತಾರೆ. ಇವುಗಳಿಗೆ ಯಾರೂ ಕಿವಿಗೊಡಬಾರದು. ಏನಾದರೂ ಇದ್ದರೆ ಅವರು ಕೋರ್ಟ್‌ನಲ್ಲಿ ಪ್ರತಿಪಾದಿಸಲಿ ಎಂದು ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದರು.

ಸ್ವಾಮೀಜಿಯವರು ಮಾತನಾಡುತ್ತಿಲ್ಲ. ಬೇರೆ ಆರೋಪಿಗಳು ಮೌನವಾಗಿದ್ದರೆ ಸುಮ್ಮನೆ ಬಿಡುತ್ತಿದ್ದಾರೇ? ಇನ್ನಾದರೂ ಪೊಲೀಸರು, ಸ್ವಾಮೀಜಿಯವರು ಎಂಬ ಮೃದು ಧೋರಣೆ ಅನುಸರಿಸಬಾರದು. ಬಹುತೇಕರು ಜಗದ್ಗುರುಗಳಲ್ಲ, ಎಲ್ಲಾ ಜಾತಿ ಗುರುಗಳಾಗಿದ್ದಾರೆ. ತಮ್ಮ ಜಾತಿ ರಾಜಕಾರಣಿಗಳು ಕಾಪಾಡುತ್ತಾರೆ ಎಂಬ ಹುಸಿ ನಂಬಿಕೆ ಹೊಂದಿದ್ದಾರೆ. ಅದರಿಂದ ಏನೂ ಆಗಲ್ಲ. ಎಲ್ಲಕ್ಕಿಂತ ಕಾನೂನು ದೊಡ್ಡದು. ಜಾತಿ–ಧರ್ಮ ದೊಡ್ಡಲ್ಲ ಎಂದು ಪ್ರಶ್ನೆಗಳಿಗೆ ಎ.ಎಚ್.ವಿಶ್ವನಾಥ್ ಉತ್ತರಿಸಿದರು.

'ಸರ್ವೋತ್ತಮ ಸೇವಾ ಪ್ರಶಸ್ತಿ' ಪ್ರದಾನ ನಾಳೆ

ಬೆಂಗಳೂರು,ಸೆ.4–ರಾಜ್ಯ ಸರ್ಕಾರವು ತನ್ನ 30 ಅತ್ಯುತ್ತಮ ಉದ್ಯೋಗಿಗಳಿಗೆ ಸರ್ವೋತ್ತಮ ಸೇವಾ ಪ್ರಶಸ್ತಿಯನ್ನು ನೀಡಲಿದೆ. ಸೆ.6ರಂದು ವಿಧಾನಸೌಧದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಶಸ್ತಿ ಪ್ರದಾನ ಮಾಡಲಿದ್ದು, ಈ ಪ್ರಶಸ್ತಿ ತಲಾ 50 ಸಾವಿರ ನಗದು ಬಹುಮಾನ ಹೊಂದಿದೆ. ಸಾಂಕ್ರಾಮಿಕ ರೋಗದಿಂದಾಗಿ 2020–21ರಲ್ಲಿ ಸಮಾರಂಭವನ್ನು ಸ್ಥಗಿತಗೊಳಿಸಲಾಗಿತ್ತು. ನಂತರ ಆಯ್ಕೆಯಾದ 10 ಉದ್ಯೋಗಿಗಳಿಗೆ 25,000 ನಗದು ಬಹುಮಾನ ಮತ್ತು ಸ್ಮರಣಿಕೆ ಸೇರಿದಂತೆ ಪ್ರಶಸ್ತಿಗಳನ್ನು ನೀಡಲಾಗುವುದು. ಈ ವರ್ಷ ಬಹುಮಾನದ ಮೊತ್ತವನ್ನು ಹೆಚ್ಚಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಕ್ಷರಿ ಈ ಕುರಿತು ಮಾತನಾಡಿ, ಪ್ರತಿ ಜಿಲ್ಲೆಯಿಂದ ಡಿಸಿಗಳು ಶಿಫಾರಸು ಮಾಡಿದ ನೌಕರರ ಪಟ್ಟಿಯನ್ನು ಕಳುಹಿಸಿದ್ದಾರೆ ಮತ್ತು ನೌಕರರು ಸಹ ಅರ್ಜಿ ಸಲ್ಲಿಸಬಹುದು. ಸರ್ಕಾರಕ್ಕೆ 300ಕ್ಕೂ ಹೆಚ್ಚು ಅರ್ಜಿಗಳು ಬಂದಿವೆ. ಮುಖ್ಯ ಕಾರ್ಯದರ್ಶಿ, ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು ಮತ್ತು ಡಿಪಿಎಆರ್ ಕಾರ್ಯದರ್ಶಿಗಳನ್ನು ಒಳಗೊಂಡ ಸಮಿತಿ ಪಟ್ಟಿಯನ್ನು 30ಕ್ಕೆ ಶಾರ್ಟ್ ಲಿಸ್ಟ್ ಮಾಡಲಿದೆ ಎಂದರು.

ನಾಳೆ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷರ ಜಿಲ್ಲಾ ಪ್ರವಾಸ

ಮೈಸೂರು, ಸೆ.4– ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷ ಎಂ.ಶಿವಣ್ಣ (ಕೋಟೆ) ಸೆ.6ರಂದು ಮೈಸೂರು ಜಿಲ್ಲಾ ಪ್ರವಾಸ ಹಮ್ಮಿಕೊಂಡಿದ್ದಾರೆ. ಅಂದು ಬೆಳಗ್ಗೆ 10.30 ಗಂಟೆಗೆ ಹೂಟಗಳ್ಳಿ ನಗರಸಭೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸ್ವಚ್ಛತಾ ಕಾರ್ಮಿಕರು ಹಾಗೂ ಮುಖಂಡರೊಂದಿಗೆ ಚರ್ಚೆ ನಡೆಸುವರು. ಬೆಳಗ್ಗೆ 11.30ಕ್ಕೆ ಪೌರಕಾರ್ಮಿಕರ ಸಮಸ್ಯೆಗಳ ಬಗ್ಗೆ ಹೂಟಗಳ್ಳಿ ನಗರಸಭೆ ಅಧಿಕಾರಿಗಳೊಡನೆ ಸಭೆ ನಡೆಸುವರು.



Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಒಂದನೇ ಪುಟದಿಂದ

ಆರೋಗ್ಯ ಮೇಳ

ಹೃದ್ರೋಗ ತಪಾಸಣೆಗೆ ಹೆಚ್ಚು ಆದ್ಯತೆ: ಜಿಲ್ಲಾಡಳಿತ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ನಡೆಸಲು ನಿರ್ಧರಿಸಿರುವ ಆರೋಗ್ಯ ಮೇಳದಲ್ಲಿ ಹೃದ್ರೋಗಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಇತ್ತೀಚಿನ ದಿನಗಳಲ್ಲಿ 25 ವರ್ಷ ಮೇಲ್ಪಟ್ಟವರಿಗೆ ಹೃದಯಾಘಾತ ಉಂಟಾಗಿ ಮೃತ ಪಡುತ್ತಿರುವ ಹಿನ್ನೆಲೆಯಲ್ಲಿ ಆರೋಗ್ಯ ಮೇಳದಲ್ಲಿ ಹೃದ್ರೋಗ ತಪಾಸಣೆಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. 7 ತಾಲೂಕುಗಳ ಪೈಕಿ 6 ತಾಲೂಕುಗಳಲ್ಲೂ ಹೃದ್ರೋಗ ತಪಾಸಣೆ ಮಾಡಲು ನಿರ್ಧರಿಸಲಾಗಿದೆ. ಇದರೊಂದಿಗೆ ಕ್ಯಾನ್ಸರ್ ಸೇರಿದಂತೆ ಇನ್ನಿತರ ಆರೋಗ್ಯ ಸಮಸ್ಯೆಗಳ ಬಗ್ಗೆಯೂ ತಪಾಸಣೆ ಮಾಡುವ ಮೂಲಕ ದಸರಾ ಮಹೋತ್ಸವದಲ್ಲಿ ಜನರು ನಿರ್ಭಯವಾಗಿ ಪಾಲ್ಗೊಳ್ಳುವ ಸಂದೇಶ ನೀಡಲು ಜಿಲ್ಲಾಡಳಿತ ಮುಂದಾಗಿದೆ.

ಎಲ್ಲೆಲ್ಲಿ ಶಿಬಿರ: ಮೈಸೂರು ನಗರ ಸೇರಿದಂತೆ ಜಿಲ್ಲೆಯ 7 ತಾಲೂಕುಗಳಲ್ಲೂ ನಡೆಸುತ್ತಿರುವ ಆರೋಗ್ಯ ಮೇಳಕ್ಕೆ ಮೈಸೂರು ನಗರ ಹೊರತುಪಡಿಸಿ ಉಳಿದ ತಾಲೂಕುಗಳಲ್ಲಿ ಸ್ಥಳ ಗುರುತಿಸಲಾಗಿದೆ. ಮೈಸೂರು ನಗರದಲ್ಲಿ ಇನ್ನು 2–3 ದಿನಗಳಲ್ಲಿ ಸ್ಥಳ ನಿಗಧಿ ಮಾಡಲಾಗುತ್ತದೆ. ಅದಕ್ಕಾಗಿ ಖಾಸಗಿ ಆಸ್ಪತ್ರೆಗಳ ಸಹಕಾರ ಕೋರಲಾಗಿದೆ. ಇದಕ್ಕಾಗಿ ಖಾಸಗಿ ಆಸ್ಪತ್ರೆಗಳು ಸಮ್ಮತಿಸಿದೆ. ಮೈಸೂರು ತಾಲೂಕಿನ ಜನರಿಗಾಗಿ ಇಲವಾಲ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕಾವೇರಿ ಆಸ್ಪತ್ರೆಯ ಸಹಯೋಗದಲ್ಲಿ ಹೃದಯ ಖಾಯಿಲೆ ತಪಾಸಣಾ ಶಿಬಿರ, ಹುಣಸೂರು ಸಾರ್ವಜನಿಕ ಆಸ್ಪತ್ರೆಯಲ್ಲಿ ಅಪೋಲೋ ಆಸ್ಪತ್ರೆ ನೆರವಿನಲ್ಲಿ ಹೃದಯದ ಆರೋಗ್ಯ ತಪಾಸಣೆ, ಟಿ.ನರಸೀಪುರ ತಾಲೂಕಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಸ್ಪಂದನ ಆಸ್ಪತ್ರೆ ನೆರವಿನೊಂದಿಗೆ ಹೃದಯ ತಪಾಸಣಾ ಮೇಳ, ಕೆ.ಆರ್.ನಗರ ತಾಲೂಕಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಮಣಿಪಾಲ್ ಆಸ್ಪತ್ರೆಯ ನೆರವಿನೊಂದಿಗೆ ಹೃದಯ ತಪಾಸಣಾ ಮೇಳ, ಪಿರಿಯಾಪಟ್ಟಣ ತಾಲೂಕಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಕ್ಲಿಯರ್‌ಮೆಡಿ ಆಸ್ಪತ್ರೆಯ ಸಹಕಾರದಿಂದ ಕ್ಯಾನ್ಸರ್ ಖಾಯಿಲೆ ತಪಾಸಣಾ ಶಿಬಿರ, ನಂಜನಗೂಡು ತಾಲೂಕು ಸಾರ್ವಜನಿಕ ಆಸ್ಪತ್ರೆಯಲ್ಲಿ ನಾರಾಯಣ ಹೃದಯಾಲಯದ ನೆರವಿನೊಂದಿಗೆ ಹೃದಯ ಸಂಬಂಧಿ ಖಾಯಿಲೆ ತಪಾಸಣಾ ಶಿಬಿರ, ಹೆಚ್.ಡಿ.ಕೋಟೆ ತಾಲೂಕಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಬೃಂದಾವನ ಆಸ್ಪತ್ರೆಯ ನೆರವಿನೊಂದಿಗೆ ಹೃದ್ರೋಗ ತಪಾಸಣಾ ಶಿಬಿರ ನಡೆಸಲು ಕ್ರಮ ಕೈಗೊಳ್ಳಲಾಗಿದೆ.

ಜನರ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ಆರೋಗ್ಯ ಮೇಳ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಪ್ರಸಾದ್ ಮಾತನಾಡಿ, ದಸರಾ ಮಹೋತ್ಸವದಲ್ಲಿ ಇದೇ ಮೊದಲ ಬಾರಿಗೆ ಜಿಲ್ಲೆಯ ಎಲ್ಲಾ ತಾಲೂಕು ಕೇಂದ್ರಗಳಲ್ಲೂ ಆರೋಗ್ಯ ಮೇಳ ನಡೆಸಲಾಗುತ್ತಿದೆ. ಜಿಲ್ಲಾಡಳಿತದ ಸೂಚನೆ ಮೇರೆಗೆ ಖಾಸಗಿ ಆಸ್ಪತ್ರೆಗಳ ಸಹಕಾರ ಪಡೆದು ಆರೋಗ್ಯ ಮೇಳ ಆಯೋಜಿಸಲಾಗಿದೆ. ಯಾರಿಗಾದರೂ ತೀವ್ರತರನಾದ ಆರೋಗ್ಯ ಸಮಸ್ಯೆ ಕಂಡು ಬಂದರೆ, ಆರೋಗ್ಯ ಕರ್ನಾಟಕ ಸೇರಿದಂತೆ ಸರ್ಕಾರದ ಯಾವುದಾದರೂ ಕಾರ್ಯಕ್ರಮದೊಂದಿಗೆ ಚಿಕಿತ್ಸೆ ನೀಡುವುದಕ್ಕೆ ಕ್ರಮ ಕೈಗೊಳ್ಳಲಾಗಿದೆ. ಆರೋಗ್ಯ ಮೇಳದಲ್ಲಿ ಪ್ರಮುಖವಾಗಿ ಹೃದ್ರೋಗ ತಪಾಸಣೆಗೆ ಹೆಚ್ಚಿನ ಗಮನ ಹರಿಸಲಾಗುತ್ತದೆ. ಜನರ ಬೇಡಿಕೆಗೆ ಅನುಗುಣವಾಗಿ ಹೃದ್ರೋಗ ತಪಾಸಣೆಗೆ ಮೇಳ ನಡೆಸಲಾಗುತ್ತಿದೆ. ಇದರೊಂದಿಗೆ ಇನಿತರ ಆರೋಗ್ಯ ಸಮಸ್ಯೆಯ ಬಗ್ಗೆಯೂ ತಪಾಸಣೆ ಮಾಡಿ ಚಿಕಿತ್ಸೆ ನೀಡಲಾಗುತ್ತದೆ. ಜನರು ಆರೋಗ್ಯ ಮೇಳದ ಸದುಪಯೋಗಪಡೆದುಕೊಳ್ಳಬೇಕು ಎಂದರು.

ಸೈರಸ್ ಮಿಸ್ತ್ರಿ ಅಪಘಾತದಲ್ಲಿ ನಿಧನ

ಆಗುತ್ತಿಲ್ಲ. ಆತ್ಮಕ್ಕೆ ಶಾಂತಿ ಸಿಗಲಿ ಎಂದು ಸುಪ್ರಿಯಾ ಸುಳೆ ಟ್ವೀಟ್ ಮಾಡಿದ್ದಾರೆ. ಟಾಟಾ ಸನ್ಸ್‌ನ ಅಧ್ಯಕ್ಷ ಸೈರಸ್ ಮಿಸ್ತ್ರಿ ಅಪಘಾತ ಪ್ರಕರಣಕ್ಕೆ ಸಂಬಂಧಿಸಿದಂತೆ ಮಹಾರಾಷ್ಟ್ರ ಉಪಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ತನಿಖೆಗೆ ಆದೇಶಿಸಿದ್ದಾರೆ.



ಪಾಲ್ಘರ್‌ನಲ್ಲಿ ನಡೆದ ಅಪಘಾತದಲ್ಲಿ ಸೈರಸ್ ಮಿಸ್ತ್ರಿ ಸಾವಿನ ಬಗ್ಗೆ ತಿಳಿದು ಅಘಾತ, ನೋವು ಉಂಟಾಗಿದೆ ಎಂದು ದೇವೇಂದ್ರ ಫಡ್ನವೀಸ್ ಹೇಳಿದ್ದಾರೆ. ಡಿಜಿಪಿ ಜೊತೆ ಮಾತನಾಡಿದ್ದು, ಪ್ರಕರಣದ ಬಗ್ಗೆ ವಿಸ್ತೃತ ತನಿಖೆ ನಡೆಸುವಂತೆ ಸೂಚಿಸಿದ್ದೇನೆ ಎಂದು ಗೃಹ ಸಚಿವರೂ ಆಗಿರುವ ಫಡ್ನವೀಸ್ ಟ್ವೀಟ್ ನಲ್ಲಿ ತಿಳಿಸಿದ್ದಾರೆ. ಸೈರಸ್ ಮಿಸ್ತ್ರಿ ಕುಟುಂಬಕ್ಕೆ ದೇವೇಂದ್ರ ಫಡ್ನವೀಸ್ ಸಂತಾಪ ಸೂಚಿಸಿದ್ದಾರೆ. ಸೈರಸ್ ಮಿಸ್ತ್ರಿ ಇದ್ದ ಕಾರಿನ ಚಾಲಕ ಅತಿ ವೇಗವಾಗಿ ಚಾಲನೆ ಮಾಡುತ್ತಿದ್ದ ಎಂದು ಪಾಲ್ಘರ್ ಪೊಲೀಸರು ಹೇಳಿದ್ದಾರೆ. ಚಾಲಕ ಅತಿ ವೇಗವಾಗಿದ್ದರ ಪರಿಣಾಮವಾಗಿ ನಿಯಂತ್ರಣ ಕಳೆದುಕೊಂಡಿದ್ದರಿಂದ ಅಪಘಾತ ಸಂಭವಿಸಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಜನಪರ ಕೆಲಸ ಮಾಡಲು ಜೆಡಿಎಸ್ ಅಧಿಕಾರಕ್ಕೆ ತನ್ನಿ: ಹೆಚ್‌ಡಿಕೆ



ನಾಗಮಂಗಲ, ಸೆ.4– ಜನಪರ ಕೆಲಸ ಮಾಡಲು ರಾಜ್ಯದಲ್ಲಿ ಜೆಡಿಎಸ್ ಅಧಿಕಾರಕ್ಕೆ ತನ್ನಿ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಮನವಿ ಮಾಡಿದರು.


ತಾಲೂಕಿನ ದೊಡ್ಡಚಿಕ್ಕನಹಳ್ಳಿ ಗ್ರಾಮದಲ್ಲಿ ಖಾಸಗಿ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿ ಬಳಿಕ ಮಾತನಾಡಿದ ಅವರು, ನಾಗಮಂಗಲದ ಜನತೆ ಜೆಡಿಎಸ್ ಪಕ್ಷವನ್ನು ಬೆಳೆಸಿದ್ದಾರೆ. ಮುಂದೆಯೂ ಈ ಪಕ್ಷದ ಮೇಲೆ ನಿಮ್ಮ ಆಶೀರ್ವಾದ ಹೀಗೆ ಇರಬೇಕು. ಮುಂದಿನ ದಿನಗಳಲ್ಲೂ ಶಾಸಕ ಕೆ.ಸುರೇಶ್‌ಗೌಡ ಅವರನ್ನು ಆಯ್ಕೆ ಮಾಡಿ ವಿಧಾನಸಭೆಗೆ ಕಳುಹಿಸಬೇಕೆಂದ ಅವರು, ಮತ್ತೆ ಜೆಡಿಎಸ್ ಅನ್ನು ಅಧಿಕಾರಕ್ಕೆ ತನ್ನಿ. ನಾನು ಪಂಚರತ್ನ ಕಾರ್ಯಕ್ರಮದ ಮೂಲಕ ನಿಮ್ಮ ಮುಂದೆ ಮತ್ತೆ ಬರುತ್ತೇನೆ ಎಂದರು.

ಮುರುಘಾಶ್ರೀ ಬಗ್ಗೆ ಸಾರ್ವಜನಿಕ ಚರ್ಚೆ ಅನವಶ್ಯಕ: ಚಿತ್ರದುರ್ಗದ ಮುರುಘಾ ಶರಣರ ಬಂಧನ ತಡವಾದ ಬಗ್ಗೆ ಪ್ರತಿಕ್ರಿಯೆ ನೀಡಿದ ಹೆಚ್‌ಡಿಕೆ, ಈ ಬಗ್ಗೆ ತೀರ್ಮಾನ ಮಾಡಬೇಕಿರುವುದು ಸರ್ಕಾರ. ಈ ವಿಚಾರದಲ್ಲಿ ಸಾರ್ವಜನಿಕವಾಗಿ ಚರ್ಚೆ ಅನವಶ್ಯಕ. ಕಾನೂನು ವ್ಯಾಪ್ತಿಯಲ್ಲಿ ನಡೆದು ಘಟನೆಯ ಸತ್ಯಾಂಶವನ್ನು ಹೊರತೆಗೆಯಬೇಕು. ಜನರಲ್ಲಿ ಅಪನಂಬಿಕೆ ಬಾರದಂತೆ ತೀರ್ಮಾನ ತೆಗೆದುಕೊಳ್ಳಬೇಕು ಎಂದರು.

ಬೆಂ–ಮೈ ಹೆದ್ದಾರಿ ಅವೈಜ್ಞಾನಿಕ: ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚರಿಸದೇ ಬದಲಿ ರಸ್ತೆಯಿಂದ ಸಂಚರಿಸುವಂತೆ ರಾಮನಗರ ಎಸ್‌ಪಿ ಹೇಳಿದ್ದಾರೆ ಅಲ್ಲಿಗೆ ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ ಅವೈಜ್ಞಾನಿಕ ಎಂಬುದು ಸಾಬೀತಾಗಿದೆ. ರಸ್ತೆ ಅವೈಜ್ಞಾನಿಕವಾಗಿದ್ದರೂ ರಸ್ತೆಯ ಗುಣಮಟ್ಟದ ಬಗ್ಗೆ ಸಂಸದ ಪ್ರತಾಪ್ ಸಿಂಹ ಏಕೆ ವಕಾಲತ್ತು ವಹಿಸುತ್ತಿದ್ದಾರೋ ಗೊತ್ತಿಲ್ಲ ಎಂದು ಹೇಳಿದರು.

ದೇವೇಗೌಡರ ಆರೋಗ್ಯದಲ್ಲಿ ಚೇತರಿಕೆ: ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಆರೋಗ್ಯ ದಿನೇ–ದಿನೇ ಸುಧಾರಿಸುತ್ತಿದೆ. ಗಣೇಶ ಹಬ್ಬದಂದು ಅವರೇ ಖುದ್ದು ಮಾತನಾಡಿದ್ದು, ಶೀಘ್ರವೇ ಬಂದು ಜನರಿಂದ ಆಶೀರ್ವಾದ ಪಡೆಯಲಿದ್ದಾರೆ. ಪಕ್ಷ ಸಂಘಟನೆಯ ಕೆಲಸದಲ್ಲೂ ಅವರು ಮುಂದಾಗಲಿದ್ದಾರೆ ಎಂದರು. ಈ ಸಂದರ್ಭದಲ್ಲಿ ಶಾಸಕ ಕೆ.ಸುರೇಶ್‌ಗೌಡ, ಮುಖಂಡ ಮುದ್ದನಘಟ್ಟ ಮಹಾಲಿಂಗು, ಡೈಮಂಡ್ ಮೂರ್ತಿ, ಕೋಟಿ ರವಿ, ರಮೇಶ್, ರಾಮು, ಗಿರೀಶ್ ಸೇರಿದಂತೆ ಹಲವರಿದ್ದರು.

ಗ್ರಾಮೀಣರ ಅಭಿವ್ಯಕ್ತಿಗೆ ಪೌರಾಣಿಕ ನಾಟಕ ದಾರಿದೀಪ



ಕೆ.ಆರ್.ಪೇಟೆ, ಸೆ.4– ನ್ಯಾಯ, ನೀತಿ, ಧರ್ಮ ಹಾಗೂ ಸತ್ಯದ ದಾರಿಯಲ್ಲಿಯೇ ಮುನ್ನಡೆಯುವಂತೆ ಪ್ರೇರೇಪಿಸುವ, ಸತ್ಯಕ್ಕೆ ಎಂದೆಂದಿಗೂ ಜಯವೆಂದು ಸಾರುವ ಪೌರಾಣಿಕ ನಾಟಕಗಳು ಗ್ರಾಮೀಣ ಪ್ರದೇಶದ ಜನರ ಅಭಿವ್ಯಕ್ತಿಗೆ ದಾರಿದೀಪವಾಗಿವೆ ಎಂದು ಬೂಕನಕೆರೆ ಮಿತ್ರ ಫೌಂಡೇಷನ್‌ನ ಸಂಸ್ಥಾಪಕ ಅಧ್ಯಕ್ಷ ವಿಜಯ್ ರಾಮೇಗೌಡ ಹೇಳಿದರು.

ತಾಲೂಕಿನ ಅಕ್ಕಿಹೆಬ್ಬಾಳು ಹೋಬಳಿಯ ಪುರ ಗ್ರಾಮದಲ್ಲಿ ಶ್ರೀಸಂಗಮೇಶ್ವರ ಕೃಪಾ ಪೋಷಿತ ನಾಟಕ ಮಂಡಳಿಯವರು ಅಭಿನಯಿಸಿದ ಸಂಕ್ಷಿಪ್ತ ಮಹಾಭಾರತ ಅಥವಾ ಧರ್ಮರಾಜ್ಯ ಸ್ಥಾಪನೆ ಎಂಬ ಪೌರಾಣಿಕ ನಾಟಕ ಪ್ರದರ್ಶನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಇಂದಿಗೂ ಗ್ರಾಮೀಣ ಪ್ರದೇಶದಲ್ಲಿ ಜೀವಂತವಾಗಿರುವ ರಾಮಾಯಣ, ಮಹಾಭಾರತ, ಕುರುಕ್ಷೇತ್ರ, ಶನಿ ಪ್ರಭಾವ ನಾಟಕಗಳು ಸೇರಿದಂತೆ ಎಲ್ಲಾ ಪೌರಾಣಿಕ ನಾಟಕಗಳು ನೀಡುವ ಸಂದೇಶದಂತೆ ಅಧರ್ಮ ಅನ್ಯಾಯಕ್ಕೆ ಎಂದಿಗೂ ಉಳಿಗಾಲವಿಲ್ಲ. ಸತ್ಯಕ್ಕೆ, ನ್ಯಾಯ ನೀತಿ, ಧರ್ಮಕ್ಕೆ ಎಂದೆಂದಿಗೂ ಸೋಲಿಲ್ಲ ಎಂಬ ಸತ್ಯ ಸಂದೇಶವನ್ನು ನೀಡುತ್ತಿರುವುದರಿಂದ ಸಮಾಜದಲ್ಲಿ ಇಂದಿಗೂ ಮೌಲ್ಯಗಳು ಜೀವಂತವಾಗಿವೆ ಎಂದು ಹೇಳಿದರು.

ಪುರ ಗ್ರಾಮದ ಮಾಜಿ ಛೇರ್ಮನ್ ಮಲ್ಲೇಗೌಡ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಮನ್‌ಮುಲ್ ನಿರ್ದೇಶಕ ಹೆಚ್.ಟಿ.ಮಂಜು, ಡಾಲು ರವಿ, ಟಿಎಪಿಸಿಎಂಎಸ್ ನಿರ್ದೇಶಕ ಮೋಹನ್, ಸಂಗಾಪುರ ಪುಟ್ಟಸ್ವಾಮೀಗೌಡ, ತಾಲೂಕು ಸರ್ಕಾರಿ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಪಿ.ಜೆ.ಕುಮಾರ್, ತಾಪಂ ಮಾಜಿ ಸದಸ್ಯ ಮಾಧವಪ್ರಸಾದ್, ತಾಲೂಕು ಭೂ ನ್ಯಾಯ ಮಂಡಳಿ ಮಾಜಿ ಸದಸ್ಯ ಅಗ್ರಹಾರಬಾಚಹಳ್ಳಿ ಎ.ಬಿ.ಕುಮಾರ್, ಸಮಾಜ ಸೇವಕ ಕೇಶವ್, ಗ್ರಾಪಂ ಸದಸ್ಯರಾದ ವಸಂತಕುಮಾರ್, ಮಂಜುಳಾ ಮಹೇಶ್, ಆರತಿ ಸಚಿನ್, ವಿನೋದ್, ಪ್ರಕಾಶ್, ಯಜಮಾನ್ ಶಶಿಕುಮಾರ್, ಸೋಮನಹಳ್ಳಿ ಗ್ರಾಪಂ ಪಿಡಿಓ ಶಿವಸ್ವಾಮಿ ಇದ್ದರು.

ಬೈಕ್‌ಗೆ ಕಾರು ಡಿಕ್ಕಿ; ಸವಾರ ಸಾವು

ಮೇಲುಕೋಟೆ ಆಸ್ಪತ್ರೆ ಮುಂಭಾಗ ಗ್ರಾಮಸ್ಥರ ಪ್ರತಿಭಟನೆ



ಮೇಲುಕೋಟೆ, ಸೆ.4– ಬೈಕ್‌ಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಸವಾರ ಸಾವನ್ನಪ್ಪಿರುವ ಘಟನೆ ಸಮೀಪದ ಹೊಸಕೆರೆ ಬಳಿ ಭಾನುವಾರ ನಡೆದಿದೆ. ಸಮೀಪದ ಕನಗೋನಹಳ್ಳಿ ಗ್ರಾಮದ ಕೃಷ್ಣ(35) ಮೃತಪಟ್ಟ ಸವಾರ.

ಘಟನೆ ವಿವರ: ಕೃಷ್ಣ ಅವರು ಸ್ವಗ್ರಾಮದಿಂದ ಮೇಲುಕೋಟೆ ಕಡೆಗೆ ಬೈಕ್‌ನಲ್ಲಿ ಬರುತ್ತಿದ್ದಾಗ ಹೊಸಕೆರೆ ಬಳಿ ಎದುರಿನಿಂದ ಬಂದ ಕಾರೊಂದು ಡಿಕ್ಕಿ ಹೊಡೆದಿದೆ. ಪರಿಣಾಮ ಕೃಷ್ಣ ಅವರು ತೀವ್ರ ಗಾಯಗೊಂಡಿದ್ದಾರೆ. ಕೂಡಲೇ ಅವರನ್ನು ಮೇಲುಕೋಟೆ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿದರೂ, ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾರೆ.

ಈ ಸಂಬಂಧ ಮೇಲುಕೋಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗ್ರಾಮಸ್ಥರಿಂದ ಪ್ರತಿಭಟನೆ: ಗಾಯಗೊಂಡಿದ್ದ ಕೃಷ್ಣ ಅವರಿಗೆ ಸೂಕ್ತ ಸಮಯದಲ್ಲಿ ವೈದ್ಯರು ಚಿಕಿತ್ಸೆ ನೀಡಲಿಲ್ಲ ಎಂದು ಆರೋಪಿಸಿ ಗ್ರಾಮಸ್ಥರು ಹಾಗೂ ಸಂಬಂಧಿಕರು ಮೇಲುಕೋಟೆ ಆಸ್ಪತ್ರೆ ಮುಂಭಾಗ ಪ್ರತಿಭಟನೆ ನಡೆಸಿದರು.

ಚಿಕಿತ್ಸೆಗಾಗಿ ಮೇಲುಕೋಟೆ ಸರ್ಕಾರಿ ಆಸ್ಪತ್ರೆಗೆ ರವಾನಿಸಿದ ವೇಳೆ ಆಸ್ಪತ್ರೆಯಲ್ಲಿ ವೈದ್ಯರಿರಲಿಲ್ಲ ಹಾಗೂ ಚಿಕಿತ್ಸೆಗಾಗಿ ಪಟ್ಟಣಕ್ಕೆ ರವಾನಿಸಲು ಅಂಬುಲೆನ್ಸ್ ಸೇವೆಯೂ ದೊರೆಯಲಿಲ್ಲ. ಆಸ್ಪತ್ರೆಯಲ್ಲಿ ಕನಿಷ್ಠ ಪ್ರಾಥಮಿಕ ಚಿಕಿತ್ಸೆ ನೀಡುವಷ್ಟು ವ್ಯವಸ್ಥೆಯಿರಲಿಲ್ಲ. ತಮಿಳುನಾಡಿನ ಭಕ್ತರೊಬ್ಬರು ಖಾಸಗಿ ವಾಹನದಲ್ಲಿ ಗಾಯಾಳುವಿನ ಸ್ಥಿತಿ ಕಂಡು ಆಸ್ಪತ್ರೆಗೆ ಕರೊದೊಯ್ಯುವ ವೇಳೆ ದಾರಿ ಮಧ್ಯೆ ಮೃತಪಟ್ಟಿದ್ದಾರೆ ಎಂದು ಗ್ರಾಮಸ್ಥರು ದೂರಿದರು.

ಮೇಲುಕೋಟೆ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರ ಸೇವೆಯಿಲ್ಲ, ಆಂಬುಲೆನ್ಸ್ ಸೇವೆಯಿಲ್ಲ ಹೆಸರಿಗಷ್ಟೇ ಸರ್ಕಾರಿ ಆಸ್ಪತ್ರೆಯಾಗಿದೆ ಎಂದು ಆರೋಪಿಸಿ ಆಸ್ಪತ್ರೆಯ ಮುಂದೆ ಪ್ರತಿಭಟನೆ ಮಾಡಿದ ಗ್ರಾಮಸ್ಥರು ಸ್ಥಳಕ್ಕೆ ಶಾಸಕರು ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಬರುವಂತೆ ಆಗ್ರಹಿಸಿದರು. ಸ್ಥಳಕ್ಕೆ ಆಗಮಿಸಿದ ಡಾ.ಚೇತನ್ ಅವರನ್ನು ಗ್ರಾಮಸ್ಥರು ತರಾಟೆ ತೆಗೆದುಕೊಂಡರು. ನಂತರ ಡಿಹೆಚ್‌ಓ ಧನಂಜಯ್ ಬಳಿಯೂ ದೂರವಾಣಿ ಮೂಲಕ ಮಾತನಾಡಿ, ಸರ್ಕಾರಿ ಆಸ್ಪತ್ರೆಯಲ್ಲಿ ಯಾವುದೇ ಸೌಲಭ್ಯವಿಲ್ಲ. ಇದರಿಂದ ವ್ಯಕ್ತಿ ಮೃತಪಟ್ಟಿದಾರೆ. ಸಂತ್ರಸ್ತ ಕುಟುಂಬಕ್ಕೆ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು.

ಉಚಿತ ಆರೋಗ್ಯ ತಪಾಸಣಾ ಶಿಬಿರ

ನಾಗಮಂಗಲ, ಸೆ.4– ಪಟ್ಟಣದ ಸರ್ಕಾರಿ ಪಿಯು ಕಾಲೇಜಿನ ಆವರಣದಲ್ಲಿ ಭಾನುವಾರ ಆದಿಚುಂಚನಗಿರಿ ಆಸ್ಪತ್ರೆ ಮತ್ತು ಸಂಶೋಧನ ಕೇಂದ್ರ, ರಾಜ್ಯ ಒಕ್ಕಲಿಗರ ಸಂಘದ ದಂತ ಕಾಲೇಜು ಹಾಗೂ ಸಮಾಜ ಸೇವಕ ಫೈಟರ್ ರವಿ ಅವರ ಸಹಯೋಗದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಿತು.

ಆದಿಚುಂಚನಗಿರಿ ಆಸ್ಪತ್ರೆಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಧರ್ಮೇಂದ್ರ ಮಾತನಾಡಿ, ಆರೋಗ್ಯ ತಪಾಸಣಾ ಶಿಬಿರದಲ್ಲಿ ಪಾಲ್ಗೊಂಡು ಹೆಚ್ಚಿನ ಚಿಕಿತ್ಸೆ ಅವಶ್ಯಕತೆ ಇರುವವರಿಗೆ ಆದಿಚುಂಚನಗಿರಿ ಆಸ್ಪತ್ರೆಯಲ್ಲಿ ಉಚಿತವಾಗಿ ಚಿಕಿತ್ಸೆ ನೀಡಲಾಗುತ್ತದೆ. ಅದಕ್ಕಾಗಿ ಗುರುತಿನ ಚೀಟಿಯನ್ನು ನೀಡಲಾಗಿದೆ ಎಂದರು.

ಸಮಾಜ ಸೇವಕ ಫೈಟರ್ ರವಿ ಮಾತನಾಡಿ, ನಾನು ತಾಲೂಕಿನ ಕುಗ್ರಾಮ ಮಲ್ಲನಕೊಪ್ಪಲಿನವನು. ನಾನು ಹುಟ್ಟಿದ ಊರು ಮತ್ತು ತಾಲೂಕಿಗೆ ಏನನ್ನಾದರೂ ಮಾಡಬೇಕು ಎಂಬ ತವಕದಿಂದ ಈ ಸೇವೆ ಮಾಡುತ್ತಿದ್ದೇನೆ. ಸೆ.18ರಂದು ಹೊಣಕೆರೆ ಹೋಬಳಿಯಲ್ಲಿ ಆರೋಗ್ಯ ಮೇಳ ಏರ್ಪಡಿಸಲಾಗಿದೆ ಇದರ ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಆದಿಚುಂಚನಗಿರಿ ಮಠದ ಕೀರ್ತಿನಾಥ ಸ್ವಾಮೀಜಿ ಮಾತನಾಡಿ, ಸಮಾಜ ಸೇವಕ ಫೈಟರ್ ರವಿ ಆಯೋಜಿಸಿರುವ ಆರೋಗ್ಯ ಮೇಳ ಯಶಸ್ವಿಯಾಗಲಿ, ಇದರಿಂದ ತಾಲೂಕಿನ ಜನರ ಆರೋಗ್ಯ ಸುಧಾರಿಸಲಿ ಎಂದರು.

ಶಿಬಿರದಲ್ಲಿ ಹೃದಯ, ನರರೋಗ, ಮೂತ್ರಪಿಂಡ, ಮಧುಮೇಹ, ಪಿತ್ತ ಜನಕಾಂಗ, ಕ್ಯಾನ್ಸರ್, ವೈದ್ಯಕೀಯ, ಶಸ್ತ್ರಚಿಕಿತ್ಸೆ, ಗರ್ಭಿಣಿ ಮತ್ತು ಸ್ತ್ರೀ ರೋಗ, ಕೀಲು ಮತ್ತು ಮೂಳೆ ತಜ್ಞರು, ದಂತ, ಕಿವಿ, ಮೂಗು, ಗಂಟಲು, ಮಕ್ಕಳ ತಜ್ಞರು, ಚರ್ಮ ರೋಗ, ಮಾನಸಿಕ ರೋಗ ಮತ್ತು ಸಮುದಾಯ ಆರೋಗ್ಯ ಪರೀಕ್ಷೆ ನಡೆಸಲಾಯಿತು.

ಮೇಳಕ್ಕೆ ಬಂದ ಎಲ್ಲರಿಗೂ ತಿಂಡಿ ಮತ್ತು ಊಟದ ವ್ಯವಸ್ಥೆ ಮಾಡಲಾಗಿತ್ತು. ಒಂದೂವರೆ ಸಾವಿರಕ್ಕೂ ಹೆಚ್ಚಿನ ಮಂದಿ ಭಾಗವಹಿಸಿ ತಮ್ಮ ಆರೋಗ್ಯ ಪರೀಕ್ಷಿಸಿಕೊಂಡರು. ಇದೇ ವೇಳೆ ದ್ವಿತೀಯ ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.



ವೇದಿಕೆಯಲ್ಲಿ ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಜೆ.ಕುಮಾರ್, ಆದಿಚುಂಚನಗಿರಿ ಆಸ್ಪತ್ರೆಯ ಸಾರ್ವಜನಿಕ ಸಂಪರ್ಕಾಧಿಕಾರಿ ವೈ.ಎಸ್.ಶಿವಕುಮಾರ್, ಮುಖಂಡರಾದ ಅರ್ಜುನ್, ಪವನ್, ಸೋಮು ಸೇರಿದಂತೆ ಹಲವರಿದ್ದರು.

ಮನೆ ಬೀಗ ಮುರಿದು ನಗ–ನಾಣ್ಯ ಕಳವು



ಪಾಂಡವಪುರ, ಸೆ.4– ಮನೆ ಬೀಗ ಮುರಿದು ಒಳ ನುಗ್ಗಿದ ಖದೀಮರು ಬೀರುವಿನಲ್ಲಿದ್ದ ನಗದು, ಬೆಳ್ಳಿ ಪದಾರ್ಥ ಹಾಗೂ ಕೆಲವು ದಿನಸಿ ಸಾಮಗ್ರಿಗಳನ್ನು ಕಳವು ಮಾಡಿರುವ ಘಟನೆ ಪಟ್ಟಣದ ಕೃಷ್ಣ ನಗರದಲ್ಲಿ ಶನಿವಾರ ರಾತ್ರಿ ನಡೆದಿದೆ.

ಕೃಷ್ಣ ನಗರದ ನಿವಾಸಿ ರತ್ನಮ್ಮ ಅವರ ಮನೆಯಲ್ಲಿ ಕಳ್ಳತನವಾಗಿದೆ. ಶನಿವಾರ ಸಂಬಂಧಿಕರೊಬ್ಬರ ಕಾರ್ಯಕ್ರಮಕ್ಕೆ ರತ್ನಮ್ಮ ಅವರು ತೆರಳಿದ್ದು, ಮನೆಯಲ್ಲಿ ಯಾರೂ ಇಲ್ಲದನ್ನು ಗಮನಿಸಿದ ಖದೀಮರು ಮನೆ ಬೀಗ ಮುರಿದು ಒಳ ನುಗ್ಗಿ ಬೀರುವಿನಲ್ಲಿದ್ದ 1.50 ಲಕ್ಷ ರೂ. ನಗದು, ಒಂದು ಜೊತೆ ಬೆಳ್ಳಿ ದೀಪಾಲೆಕಂಬ ಸೇರಿದಂತೆ ಕೆಲವು ದಿನಸಿ ಸಾಮಗ್ರಿಗಳನ್ನು ಕಳವು ಮಾಡಿದ್ದಾರೆ.


ಸ್ಕೂಟರ್ ಕಳವು: ಇದೇ ವೇಳೆ ಖದೀಮರು ಮನ್‌ಮುಲ್ ಮಾಜಿ ಉಪಾಧ್ಯಕ್ಷ ಜಿ.ಇ.ರವಿಕುಮಾರ್ ಅವರಿಗೆ ಸೇರಿದ ನೆರೆ ಮನೆಯ ಮುಂಭಾಗ ನಿಲ್ಲಿಸಿದ್ದ ಹೋಂಡಾ ಆಕ್ಟೀವ್ ಸ್ಕೂಟರ್ ಅನ್ನು ಕಳವು ಮಾಡಿ ಪರಾರಿಯಾಗಿದ್ದಾರೆ.

ಭಾನುವಾರ ಬೆಳಗ್ಗೆ ಘಟನೆ ಬೆಳಕಿಗೆ ಬಂದಿದೆ. ವಿಷಯ ತಿಳಿದು ಸ್ಥಳಕ್ಕೆ ಬಂದ ಸಬ್ ಇನ್ಸ್‌ಪೆಕ್ಟರ್ ಮಂಜುನಾಥ್ ನೇತೃತ್ವದ ತನಿಖಾ ತಂಡ ಹಾಗೂ ಬೆರಳಚ್ಚು ತಜ್ಞರು, ಶ್ವಾನದಳ ಸಿಬ್ಬಂದಿ ಪರಿಶೀಲಿಸಿದರು. ಘಟನೆ ಸಂಬಂಧ ಪಾಂಡವಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಲೆ ಮಹದೇಶ್ವರ ಬೆಟ್ಟಕ್ಕೆ ಬಸ್ ವ್ಯವಸ್ಥೆ

ಮಂಡ್ಯ, ಸೆ.4– ಮಲೆ ಮಹದೇಶ್ವರಸ್ವಾಮಿ ಬೆಟ್ಟದ ಭಕ್ತರಿಗಾಗಿ ಕ.ರಾ.ರ.ಸಾ.ನಿಗಮ ಮಂಡ್ಯ ವಿಭಾಗದ ಪಾಂಡವಪುರ ಘಟಕದಿಂದ ಪ್ರತಿದಿನ ಬೆಟ್ಟಕ್ಕೆ ಹೋಗಿ ಬರಲು ಸಾರಿಗೆ ವ್ಯವಸ್ಥೆ ಕಲ್ಪಿಸಲಾಗಿದೆ. ಬೆಳಗ್ಗೆ 8ಗಂಟೆಗೆ ಪಾಂಡವಪುರದಿಂದ ಹೊರಡುವ ಬಸ್ ಚಿಕ್ಕ ಬ್ಯಾಡರಹಳ್ಳಿ, ಮಂಡ್ಯ, ಕೊತ್ತತ್ತಿ, ಗಾಮನಹಳ್ಳಿ, ಸಂತೇಮಾಳ, ಯಾಚನಹಳ್ಳಿ, ತುರುಗನೂರು, ಬನ್ನೂರು, ಟಿ.ನರಸೀಪುರ ಹಾಗೂ ಕೊಳ್ಳೇಗಾಲ ಮಾರ್ಗವಾಗಿ ಸಂಚರಿಸಿ ಮಹದೇಶ್ವರ ಬೆಟ್ಟಕ್ಕೆ ಮಧ್ಯಾಹ್ನ 1ಗಂಟೆಗೆ ತಲುಪಲಿದೆ. ಇದೇ ಬಸ್ ಬೆಟ್ಟದಿಂದ ಮಧ್ಯಾಹ್ನ 1–45ಕ್ಕೆ ಹೊರಟು ಮಂಡ್ಯಕ್ಕೆ 5.30ಕ್ಕೆ ತಲುಪಲಿದೆ. ಈ ಸೇವೆಯನ್ನು ಭಕ್ತರು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಕರಾರಸಾ ನಿಗಮದವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಂ.ನಂಜಪ್ಪ ನಿಧನ



ಮಂಡ್ಯ, ಸೆ.4– ಜಿಲ್ಲೆಯ ಕೆ.ಆರ್.ಪೇಟೆ ತಾಲೂಕಿನ ಸಂತೆಬಾಚಹಳ್ಳಿ ಹೋಬಳಿ, ಮಾರೇನಹಳ್ಳಿ ಗ್ರಾಮದ ನಿವಾಸಿ ಹಾಗೂ ನಿವೃತ್ತ ಮುಖ್ಯ ಶಿಕ್ಷಕ ಎಂ.ನಂಜಪ್ಪ(70) ಭಾನುವಾರ ನಿಧನರಾದರು.

ಮೃತರು ಪತ್ನಿ ನಾಗಮ್ಮ, ಪುತ್ರ ಪ್ರಜಾವಾಣಿ ಪತ್ರಿಕೆಯ ಜಿಲ್ಲಾ ವರದಿಗಾರ ಎಂ.ಎನ್.ಯೋಗೇಶ್, ಪುತ್ರಿ ಎಂ.ಎನ್.ಭಾಗ್ಯಲಕ್ಷ್ಮೀ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮ ಮಾರೇನಹಳ್ಳಿ ಗ್ರಾಮದ ರುದ್ರಭೂಮಿಯಲ್ಲಿ ನಡೆಯಲಿದೆ.

ಕೊಡಗು–ಮೈಸೂರು ಗಡಿಯಲ್ಲಿ ಮತ್ತೊಂದು ಸಫಾರಿ ಕೇಂದ್ರ

ವಿರಾಜಪೇಟೆ ತಾಲೂಕಿನಲ್ಲಿ ಸಫಾರಿ ಕೇಂದ್ರದ ಕಾಮಗಾರಿ



ಸಿದ್ದಾಪುರ, ಸೆ.4– ಕೊಡಗು–ಮೈಸೂರು ಗಡಿಯಲ್ಲಿ ಮತ್ತೊಂದು ಸಫಾರಿ ಕೇಂದ್ರ ತೆರೆಯುವ ಮೂಲಕ ಪ್ರವಾಸೋದ್ಯಮ ಅಭಿವೃದ್ಧಿಗೆ ಅರಣ್ಯ ಇಲಾಖೆ ಮುಂದಾಗಿದೆ.

ಈಗಾಗಲೇ ರಾಜ್ಯದಲ್ಲಿ ಬಂಡೀಪುರ, ನಾಗರಹೊಳೆ ಸೇರಿದಂತೆ ಹಲವೆಡೆ ಸಫಾರಿ ಕೇಂದ್ರಗಳಿದ್ದು, ಇದೀಗ ವಿರಾಜಪೇಟೆ ತಾಲೂಕಿನ ಮಾಲ್ದಾರೆ ಸಮೀಪದ ಲಿಂಗಾಪುರ ಮುತ್ತೂರು ಗಡಿ ಅರಣ್ಯದ ಬಫರ್‌ಜೋನ್ ವಲಯ ಹಾಗೂ ಪೊನ್ನಂಪೇಟೆ ತಾಲೂಕಿನ ತಿತಿಮತಿ ಸಮೀಪದ ಆನೆಚೌಕೂರು ಗೇಟ್ ಬಳಿ ಸಫಾರಿ ಕೇಂದ್ರ ತೆರೆಯಲು ನಾಗರಹೊಳೆ ವನ್ಯಜೀವಿ ವಲಯದ ಅಧಿಕಾರಿಗಳು ಪ್ರಕ್ರಿಯೆ ಆರಂಭಿಸಿದ್ದಾರೆ.

ಕೊಡಗು–ಮೈಸೂರು ಗಡಿಗೆ ಹೊಂದಿಕೊಂಡಂತೆ ಹೆಚ್ಚಿನ ಪ್ರಮಾಣದಲ್ಲಿ ಅರಣ್ಯ ಪ್ರದೇಶವಿದ್ದು, ರಾಜ್ಯ ಸೇರಿದಂತೆ ದೇಶದ ನಾನಾ ಭಾಗಗಳಿಂದ ಲಕ್ಷಾಂತರ ಪ್ರವಾಸಿಗರು ಆಗಮಿಸುವ ಹಿನ್ನೆಲೆಯಲ್ಲಿ ಮತ್ತೊಂದು ಸಫಾರಿ ಕೇಂದ್ರ ಆರಂಭಿಸಲು ಅರಣ್ಯ ಇಲಾಖೆ ಅಧಿಕಾರಿಗಳು ಕ್ರಮ ಕೈಗೊಂಡಿದ್ದಾರೆ.

ಸಫಾರಿ ಕೇಂದ್ರದ ವಿಶೇಷ: ಈ ಸಫಾರಿ ಕೇಂದ್ರದಲ್ಲಿ ವಿಶಾಲವಾದ ಪಾರ್ಕಿಂಗ್ ನಿರ್ಮಾಣವಾಗಲಿದ್ದು, ಶೌಚಾಲಯ, ಕುಡಿಯುವ ನೀರು, ಶುಚಿತ್ವಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಅರಣ್ಯದ ಮಾಹಿತಿ ನಾಮಫಲಕ, ಟಿಕೆಟ್ ಕೌಂಟರ್‌ಗಳು ಸಹ ಒಳಗೊಂಡಿರುತ್ತದೆ.

ಲಿಂಗಾಪುರ ಅರಣ್ಯ ವ್ಯಾಪ್ತಿಯಿಂದ ಆನೆ ಚೌಕೂರು ಗೇಟ್‌ವರೆಗೂ 30ಕ್ಕೂ ಹೆಚ್ಚು ಕಿ.ಮೀ ರಸ್ತೆ ಮಾರ್ಗ ಅಭಿವೃದ್ಧಿಪಡಿಸಲಾಗುತ್ತಿದೆ. ಸಂರಕ್ಷಿತಾರಣ್ಯ ಪ್ರದೇಶದಲ್ಲಿ ಪ್ರವಾಸಿಗರು ವನ್ಯಮೃಗಗಳ ಜೊತೆಗೆ ಮಾವು ಕಲ್ಲೇಶ್ವರ ಬೆಟ್ಟ, ಜೇನುಕಲ್ಲು ಬೆಟ್ಟ, ಭೀಮನಾರೆ ಸೇರಿದಂತೆ ಇತರ ಪ್ರೇಕ್ಷಣೀಯ ಸ್ಥಳಗಳನ್ನು ವೀಕ್ಷಿಸಬಹುದಾಗಿದೆ.

ಮುಂಬರುವ 3 ತಿಂಗಳಲ್ಲಿ ನೂತನ ಸಫಾರಿ ಕೇಂದ್ರ ಆರಂಭವಾಗಲಿದ್ದು, 2 ಮಿನಿ ಬಸ್, ನಾಲ್ಕು ಜೀಪ್‌ಗಳು ಕಾರ್ಯ ನಿರ್ವಹಿಸಲಿದ್ದು, ಪ್ರವಾಸಿಗರ ಬೇಡಿಕೆಗೆ ಅನುಗುಣವಾಗಿ ಮತ್ತಷ್ಟು ವಾಹನಗಳನ್ನು ಸೇರ್ಪಡೆಗೊಳಿಸಲು ಅರಣ್ಯ ಇಲಾಖೆ ತೀರ್ಮಾನಿಸಿದೆ.

ಈಗಾಗಲೇ ನಾಗರಹೊಳೆ, ಅಂತರಸಂತೆ ಭಾಗದಲ್ಲಿ ಸಫಾರಿ ಕೇಂದ್ರವಿದ್ದು, ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಿದ್ದಾರೆ. ಹಬ್ಬ ಹಾಗೂ ರಜಾ ದಿನಗಳಲ್ಲಿ ಭಾರೀ ಸಂಖ್ಯೆಯಲ್ಲಿ ಆಗಮಿಸುವ ಪ್ರವಾಸಿಗರಿಗೆ ವಾಹನ ದಟ್ಟಣೆ ಹಾಗೂ ಸಂಖ್ಯೆ ಹೆಚ್ಚಳ ಹಿನ್ನೆಲೆ ಸಫಾರಿ ನೋಡಲು ಸಾಧ್ಯವಾಗದೆ ನಿರಾಸೆಯಿಂದ ಹಿಂತಿರುಗಬೇಕಾದ ಪರಿಸ್ಥಿತಿ ಇದೆ. ಈ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ಮತ್ತೊಂದು ಸಫಾರಿ ಕೇಂದ್ರ ತೆರೆಯಲು ಮುಂದಾಗಿದ್ದು, ಮುತ್ತೂರು ಬಫರ್ ಜೋನ್ ವ್ಯಾಪ್ತಿಯಲ್ಲಿ ಟಿಕೆಟ್ ಕೌಂಟರ್ ಕಾಮಗಾರಿಗೆ ಈಗಾಗಲೇ ಗುದ್ದಲಿ ಪೂಜೆ ನೆರವೇರಿಸಲಾಗಿದೆ. 2018 ರಿಂದ ಪ್ರವಾಹ, ಪ್ರಕೃತಿ ವಿಕೋಪ, ಕೋವಿಡ್ ಲಾಕ್‌ಡೌನ್ ಸಂಕಷ್ಟದಲ್ಲಿದ್ದ ವ್ಯಾಪಾರ ವಹಿವಾಟಿಗೆ ಕೊಡಗು ಗಡಿಯಲ್ಲಿ ಸಫಾರಿ ಕೇಂದ್ರ ಪ್ರಾರಂಭವಾದಲ್ಲಿ ಜಿಲ್ಲೆಗೆ ಮತ್ತಷ್ಟು ಪ್ರವಾಸಿಗರ ಸಂಖ್ಯೆ ಹೆಚ್ಚಳವಾಗಲಿದ್ದು ವ್ಯಾಪಾರ ಉದ್ಯಮ ಮತ್ತೆ ಚೇತರಿಸಿಕೊಳ್ಳಲಿದೆ.

> ‘ ನಾಗರಹೊಳೆ ಸಫಾರಿಗೆ ಪ್ರವಾಸಿಗರ ಸಂಖ್ಯೆ ಹೆಚ್ಚಳವಾಗಿರುವ ಹಿನ್ನೆಲೆಯಲ್ಲಿ ಕೊಡಗು ಗಡಿಯ ಆನೆಚೌಕೂರು ಹಾಗೂ ಮುತ್ತೂರು ಬಫರ್‌ಜೋನ್ ವ್ಯಾಪ್ತಿಯಲ್ಲಿ ಎರಡು ಸಫಾರಿ ಕೇಂದ್ರವನ್ನು ತೆರೆಯಲು ಯೋಜನೆ ಸಿದ್ಧಪಡಿಸಲಾಗಿದೆ. ಟಿಕೆಟ್ ಕೌಂಟರ್ ತೆರೆಯಲು ಕಾಮಗಾರಿಗೆ ಚಾಲನೆ ನೀಡಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. 3, 4 ತಿಂಗಳಲ್ಲಿ ಸಫಾರಿ ಪ್ರಾರಂಭವಾಗಲಿದೆ.
>
> **–ಹರ್ಷಕುಮಾರ್, ನಾಗರಹೊಳೆ ಹುಲಿ ಸಂರಕ್ಷಿತ ವನ್ಯಜೀವಿ ವಲಯದ ನಿರ್ದೇಶಕ.**

> ‘ ಜಿಲ್ಲೆಯ ಗಡಿಭಾಗದಲ್ಲಿ ಸಫಾರಿ ಕೇಂದ್ರ ಪ್ರಾರಂಭಿಸುವುದರಿಂದ ಪ್ರವಾಸಿಗರು, ಸ್ಥಳೀಯರಿಗೆ ಹೆಚ್ಚು ಅನುಕೂಲವಾಗಲಿದೆ. ಇದರಿಂದ ಪ್ರವಾಸಿಗರ ಸಂಖ್ಯೆ ಹೆಚ್ಚಳ ವಾಗಲಿದ್ದು, ಪ್ರವಾಸೋದ್ಯಮ ಮತ್ತಷ್ಟು ಚೇತರಿಸಿಕೊಳ್ಳಲಿದೆ. ಅರಣ್ಯ ಪ್ರದೇಶದಲ್ಲಿ ಸಂಪೂರ್ಣ ಪ್ಲಾಸ್ಟಿಕ್ ನಿಷೇಧ ಮಾಡುವ ಮೂಲಕ ಶುಚಿತ್ವಕ್ಕೆ ಆದ್ಯತೆ ನೀಡಬೇಕಾಗಿದೆ.
>
> **–ಮಾಲ್ದಾರೆ ಅಂತೋಣಿ, ಜನಪರ ಸಂಘದ ಸ್ಥಾಪಕ ಅಧ್ಯಕ್ಷ,**

ಗುದ್ದಲಿ ಪೂಜೆ: ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಹುಣಸೂರು ವನ್ಯಜೀವಿ ವಲಯದ ಮುತ್ತೂರಿನಲ್ಲಿ ಹೊಸದಾಗಿ ಸಫಾರಿ ಮಾಡಲು ಗುದ್ದಲಿ ಪೂಜೆ ಮಾಡಲಾಯಿತು. ಈ ವೇಳೆ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಉಪ ಅರಣ್ಯ ಸಂರಕ್ಷಣಾಧಿಕಾರಿ ಮಹೇಶ್ ಕುಮಾರ್, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಎ.ವಿ.ಸತೀಶ್, ವಲಯ ಅರಣ್ಯ ಅಧಿಕಾರಿ ಹನುಮಂತರಾಜು, ಉಪ ವಲಯ ಅರಣ್ಯಾಧಿಕಾರಿ ಪ್ರಸನ್ನ ಕುಮಾರ್ ಎಂ.ಕೆ, ಅರಣ್ಯರಕ್ಷಕ ಡಿ.ಕೆ.ಲಾಲ್ ದಿಲೀಪ್ ಇದ್ದರು.

ಮೈಸೂರಿನಲ್ಲಿ ಧಾರಾಕಾರ ಮಳೆ

ಮೈಸೂರು, ಸೆ.4– ನಗರದಲ್ಲಿ ಭಾನುವಾರ ರಾತ್ರಿ ಸುರಿದ ಧಾರಾಕಾರ ಮಳೆಯಿಂದಾಗಿ ಜನಜೀವನ ಅಸ್ತವ್ಯಸ್ತಗೊಂಡಿದ್ದು, ಹಲವು ಬಡಾವಣೆಗಳಲ್ಲಿ ವಿದ್ಯುತ್ ಕಡಿತಗೊಂಡು ನಿವಾಸಿಗಳು ಪರದಾಡುವಂತಾಯಿತು.

ರಾತ್ರಿ 9.30ಕ್ಕೆ ಆರಂಭವಾದ ಮಳೆ ತಡರಾತ್ರಿಯವರೆಗೂ ಸುರಿಯಿತು. ವಿಜಯನಗರ, ಬನ್ನಿಮಂಟಪ, ಕುವೆಂಪುನಗರ, ಯಾದವಗಿರಿ, ಸಿದ್ಧಾರ್ಥನಗರ, ಒಂಟಿಕೊಪ್ಪಲ್, ಗೋಕುಲಂ, ಸರಸ್ವತಿಪುರಂ, ಶಾರದಾದೇವಿನಗರ, ರಾಮಕೃಷ್ಣನಗರ, ಕುರ್ಗಳ್ಳಿ, ದಟ್ಟಗಳ್ಳಿ, ಜೆಪಿನಗರ, ಅಗ್ರಹಾರ, ಸುಣ್ಣಕೇರಿ, ಲಕ್ಷ್ಮಿಪುರಂ, ಜಯಲಕ್ಷ್ಮಿಪುರಂ, ಸೇರಿದಂತೆ ನಗರದ ಎಲ್ಲಾ ಭಾಗಗಳಲ್ಲಿ ಸುರಿದ ಮಳೆಯಿಂದಾಗಿ ಚರಂಡಿಗಳು ತುಂಬಿ ಹರಿದವು.

ಇಂದು ಮೈಸೂರಿಗೆ ಸಿದ್ದರಾಮಯ್ಯ



ಮೈಸೂರು, ಸೆ.4(ಎಂಕೆ)– ರಾಹುಲ್ ಗಾಂಧಿಯವರ ಭಾರತ್ ಜೋಡೋ ಯಾತ್ರೆ ಹಿನ್ನೆಲೆ ವಿಪಕ್ಷ ನಾಯಕ ಸಿದ್ದರಾಮಯ್ಯ ನಾಳೆ(ಸೆ.5) ಮೈಸೂರಿಗೆ ಆಗಮಿಸಲಿದ್ದಾರೆ.

ಅಂದು ಸಂಜೆ 5ಕ್ಕೆ ರಾಹುಲ್ ಗಾಂಧಿಯವರ ಭಾರತ್ ಜೋಡೋ ಯಾತ್ರೆ ಅಂಗವಾಗಿ ಮೈಸೂರು, ಚಾಮರಾಜನಗರ ಜಿಲ್ಲೆಯ ಹಾಲಿ ಮತ್ತು ಮಾಜಿ ಶಾಸಕರು, ವಿಧಾನಸಭೆ ಚುನಾವಣೆ ಅಭ್ಯರ್ಥಿಗಳ ಸಭೆಯನ್ನು ನಗರದ ಜೆಪಿ ಫಾರ್ಚೂನ್ ಹೋಟೆಲ್‌ನಲ್ಲಿ ಸಭೆ ನಡೆಸಲಿದ್ದಾರೆ.

ನಂತರ ರಾಮಕೃಷ್ಣನಗರದಲ್ಲಿರುವ ತಮ್ಮ ಮನೆಯಲ್ಲಿ ವಾಸ್ತವ್ಯ ಹೂಡಲಿದ್ದಾರೆ. ಸೆ.6 ರಂದು ನಗರದ ವಿವಿಧ ಸ್ಥಳೀಯ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಮರು ದಿನ ಸೆ.7 ರಂದು ಮಂಡಕಳ್ಳಿ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನ ಮೂಲಕ ತಿರುವನಂತಪುರಕ್ಕೆ ತೆರಳಲಿದ್ದಾರೆ.

ಮಕ್ಕಳಿಗೆ ವಿಷ ನೀಡಿ ನೇಣಿಗೆ ಶರಣಾದ ತಾಯಿ

ರಾಮನಗರ, ಸೆ.4– ತನ್ನ ಇಬ್ಬರು ಪುಟ್ಟ ಮಕ್ಕಳಿಗೆ ವಿಷ ನೀಡಿದ ಮಹಿಳೆಯೊಬ್ಬರು ಬಳಿಕ ತಾನೂ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮಾಗಡಿ ಸಮೀಪದ ಹೊಸಪಾಳ್ಯ ಗ್ರಾಮದಲ್ಲಿ ನಡೆದಿದೆ.

ಮಾಗಡಿ ತಾಲೂಕು ರೈತ ಸಂಘದ ಅಧ್ಯಕ್ಷ ಲೋಕೇಶ್ ಅವರ ಪತ್ನಿ ರೂಪಾ (32) ಮತ್ತು ಅವರ ಮಕ್ಕಳಾದ ಸ್ಫೂರ್ತಿ(6) ಹರ್ಷಿತಾ (4) ಮೃತಪಟ್ಟ ದುರ್ದೈವಿಗಳು. ರೂಪಾ ತನ್ನ ಜಮೀನಿನಲ್ಲಿ ಇಬ್ಬರು ಮಕ್ಕಳಾದ ಸ್ಫೂರ್ತಿ ಹಾಗೂ ಹರ್ಷಿತಾ ಅವರಿಗೆ ವಿಷ ನೀಡಿದ್ದಾರೆ. ಬಳಿಕ ತಾನೂ ಕೂಡಾ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಆತ್ಮಹತ್ಯೆಗೆ ನಿಖರ ಕಾರಣ ತಿಳಿದುಬಂದಿಲ್ಲ. ಇದರಿಂದಾಗಿ ಗ್ರಾಮದಲ್ಲಿ ದುಃಖ ಆವರಿಸಿದ್ದು, ಒಂದೇ ಕುಟುಂಬದ ಮೂವರ ಸಾವಿನಿಂದ ಆಕ್ರಂದನ ಮುಗಿಲು ಮುಟ್ಟಿದೆ. ಈ ಸಂಬಂಧ ಮಾಗಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಸಾಧಕ ರೈತ ಮಹಿಳೆಯರಿಗೆ ಕೃಷಿ ರತ್ನ ಪ್ರಶಸ್ತಿ ಪ್ರದಾನ



ಮೈಸೂರು, ಸೆ.4(ಆರ್‌ಕೆ)– ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘದ ವತಿಯಿಂದ ಮೈಸೂರು ಪತ್ರಕರ್ತರ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಐವರು ಸಾಧಕ ರೈತ ಮಹಿಳೆಯರಿಗೆ ಕೃಷಿ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಸಂಘದ ರಾಜ್ಯಾಧ್ಯಕ್ಷ ಸಿ.ಚಂದನ್‌ಗೌಡ ನೇತೃತ್ವದಲ್ಲಿ ನಡೆದ ಕಾರ್ಯಕ್ರಮದಲ್ಲಿ ಹೆಚ್.ಡಿ.ಕೋಟೆ ತಾಲೂಕಿನ ನಾಗರತ್ನಮ್ಮ, ಹುಣಸೂರು ತಾಲೂಕಿನ ಡಿ.ಪುಟ್ಟಮ್ಮ, ನಂಜನಗೂಡು ತಾಲೂಕಿನ ಬ್ಯಾಳ್ಯಾರು ವನಜಾಕ್ಷಿ, ಬೀಚನಹಳ್ಳಿ ಪುಟ್ಟಸುಬ್ಬಮ್ಮ, ನಾಗನಹಳ್ಳಿ ಮಂಜುಳಾ ಅವರನ್ನು ಸನ್ಮಾನಿಸಲಾಯಿತು. ಇದೇ ಸಂದರ್ಭದಲ್ಲಿ ಕೃಷಿ ಯಶಸ್ವಿನಿ ಕಾರ್ಡ್ ಬಿಡುಗಡೆ ಮಾಡಲಾಯಿತು. ಸಂಘದ ಪದಾಧಿಕಾರಿಗಳಾದ ಹರೀಶ್ ಪಿ.ಗೌಡ, ಸ್ವಾಮಿಗೌಡ, ಹೇಮಂತ್ ಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

ಮಡಿಕೇರಿಯಲ್ಲಿ ಕೊಡಗು ಪತ್ರಕರ್ತರ ಸಂಘದಿಂದ ಪತ್ರಿಕಾ ವಿತರಕರ ದಿನಾಚರಣೆ

ಪತ್ರಿಕಾ ವಿತರಕರಿಗೆ ಯೋಜನೆ ರೂಪಿಸಲು ಜಿಲ್ಲಾಡಳಿತದಿಂದ ನೆರವು: ಡಿಸಿ ಡಾ.ಸತೀಶ

ಮಡಿಕೇರಿ,ಸೆ.4– ಪತ್ರಿಕೆಗಳನ್ನು ಮನೆ–ಮನೆಗಳಿಗೆ ತಲುಪಿಸುವ ಶ್ರಮಜೀವಿಗಳಾದ ಪತ್ರಿಕಾ ವಿತರಕರಿಗೆ ಸೂಕ್ತ ಯೋಜನೆಗಳನ್ನು ಜಾರಿಗೊಳಿಸಲು ಜಿಲ್ಲಾಡಳಿತ ನೆರವು ನೀಡಲಿದೆ ಎಂದು ಜಿಲ್ಲಾಧಿಕಾರಿ ಡಾ. ಬಿ.ಸಿ. ಸತೀಶ ಭರವಸೆ ನೀಡಿದ್ದಾರೆ.



ಕೊಡಗು ಪತ್ರಕರ್ತರ ಸಂಘ, ಕೊಡಗು ಜಿಲ್ಲಾ ಪತ್ರಿಕಾ ವಿತರಕರ ಹಾಗೂ ಏಜೆಂಟರ ಸಂಘ ಹಾಗೂ ಕೊಡಗು ಪತ್ರಿಕಾ ಭವನ ಟ್ರಸ್ಟ್ ಆಶ್ರಯದಲ್ಲಿ ನಗರದ ಪತ್ರಿಕಾ ಭವನದಲ್ಲಿ ಭಾನುವಾರ ನಡೆದ ಪತ್ರಿಕಾ ವಿತರಕ ದಿನಾಚರಣೆ ಕಾರ್ಯಕ್ರಮದಲ್ಲಿ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಪತ್ರಿಕಾ ವಿತರಕರಿಗೆ ಎಲ್ಲಾ ಸಹಕಾರ ಮಾಡಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು. ಇ–ಪೇಪರ್ ಓದುವುದಕ್ಕಿಂತ ಪ್ರಕಟಿತ ಪತ್ರಿಕೆ ಓದುವ ಅನುಭವ ಮನಸ್ಸಿಗೆ ತೃಪ್ತಿ ನೀಡುತ್ತದೆ ಎಂದು ಜಿಲ್ಲಾಧಿಕಾರಿ ಹೇಳಿದರು. ಪತ್ರಿಕಾ ವಿತರಕರಿಗೆ ಸೂಕ್ತ ಮಳಿಗೆಯ ಬೇಡಿಕೆ ನಿಟ್ಟಿನಲ್ಲಿ ಮಡಿಕೇರಿ ನಗರಸಭೆಯ ಸದಸ್ಯರು ಹಾಗೂ ಅಧಿಕಾರಿಗಳೊಂದಿಗೆ ವಿಶೇಷ ಸಭೆಯನ್ನು ನಡೆಸಿ ಸಮಸ್ಯೆಗಳನ್ನು ಇತ್ಯರ್ಥ ಮಾಡಲಾಗುವುದು ಎಂದೂ ಡಾ.ಸತೀಶ್ ಹೇಳಿದರು.

ಶಕ್ತಿ ಪತ್ರಿಕೆಯ ಪ್ರಧಾನ ಸಂಪಾದಕ ಜಿ. ರಾಜೇಂದ್ರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಈಗಿನ ತಂತ್ರಜ್ಞಾನದಲ್ಲಿ ದೃಶ್ಯಮಾಧ್ಯಮದಲ್ಲಿ ಶೀಘ್ರವಾಗಿ ಸುದ್ದಿ ಜನರಿಗೆ ತಲುಪುತ್ತದೆಯಾದರೂ ಆ ಸುದ್ದಿಯನ್ನು ವಿಶ್ಲೇಷಣೆ ಮಾಡಿ ಅವಲೋಕಿಸಿ ತಿಳಿಯಬೇಕೆಂದರೆ ವೃತ್ತ ಪತ್ರಿಕೆಗಳನ್ನು ಓದಬೇಕು ಎಂದು ತಿಳಿಸಿದರು.

ಒಂದು ಪತ್ರಿಕಾ ಮಾಧ್ಯಮ ಸಂಸ್ಥೆ ಉತ್ತಮವಾಗಿ ನಡೆಯಬೇಕೆಂದರೆ ಆ ಪತ್ರಿಕಾ ಮಾಧ್ಯಮ ಸಂಸ್ಥೆಯ ಕಚೇರಿ ಸಿಬ್ಬಂದಿ ವರ್ಗ, ಕಂಪ್ಯೂಟರ್ ಆಪರೇಟರ್, ಸಂಪಾದಕರ ಬಳಗ ಪತ್ರಿಕೆಯನ್ನು ಪ್ರಿಂಟಿಂಗ್ ಮಾಡುವವರು, ಅದೇ ರೀತಿ ಪತ್ರಿಕೆಯನ್ನು ಬಂಡಲ್ ಮಾಡುವವರು, ಪತ್ರಿಕೆಯನ್ನು ವಿತರಣೆ ಮಾಡುವವರ ಶ್ರಮ ಅಷ್ಟೇ ಮುಖ್ಯವಾಗಿದೆ. ಅದರಲ್ಲೂ ಪತ್ರಿಕಾ ವಿತರಕರು ತುಂಬಾ ಮುಖ್ಯ ಪಾತ್ರ ವಹಿಸುತ್ತಾರೆ ಎಂದು ಹೇಳಿದರು.

ಕೊಡಗು ಪತ್ರಕರ್ತರ ಸಂಘದ ಗೌರವ ಸಲಹೆಗಾರ ಟಿ.ಪಿ.ರಮೇಶ್, ಸಮಾಜ ಸೇವಕ ನಾಪಂಡ ಎಂ. ಮುತ್ತಪ್ಪ ಮಾತನಾಡಿದರು.

ಅಖಿಲ ಕರ್ನಾಟಕ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಶಂಕರ್ ಕುದುರೆಮೋತಿ ಮಾತನಾಡಿ, ಪತ್ರಕರ್ತರ ಸಂಘ ಪತ್ರಿಕಾ ವಿತರಕರ ಜೊತೆ ಇದ್ದಾಗ ಮಾತ್ರ ವಿತರಕರು ಬೆಳಕಿಗೆ ಬರಲು ಸಾಧ್ಯ. ಪತ್ರಿಕಾ ವಿತರಕರ ದಿನಾಚರಣೆ ಜೊತೆಗೆ ಪತ್ರಿಕಾ ವಿತರಕರಿಗೆ ಗೌರವ ಸಮರ್ಪಣೆ ಕಾರ್ಯಕ್ರಮ ಒಳ್ಳೆಯ ಪ್ರಯತ್ನವಾಗಿದೆ. ಇನ್ನು ಮುಂದೆ ಕೂಡ ಹಲವಾರು ಕಾರ್ಯಕ್ರಮಗಳ ಮೂಲಕ ಪತ್ರಿಕಾ ವಿತರಕರಿಗೆ ಉತ್ತಮ ಸೌಲಭ್ಯಗಳನ್ನು ತಲುಪಿಸಲು ಶ್ರಮಿಸಬೇಕೆಂದು ಮನವಿ ಮಾಡಿದರು.

ಕೊಡಗು ಪತ್ರಿಕಾ ಭವನ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಎಸ್.ಜಿ. ಉಮೇಶ್ ಮಾತನಾಡಿ, ಸಮಾನ್ಯವಾಗಿ ತಮ್ಮ ಮನೆಗೆ ಬರುವ ಪತ್ರಿಕಾ ವಿತರಕರು ಯಾರೆಂದು ಕೂಡಾ ತಿಳಿಯುವುದಿಲ್ಲ. ಕಾರಣ ಏನೆಂದರೆ ಮನೆಯ ಮಂದಿ ಬೆಳಗ್ಗೆ ಎದ್ದೇಳುವ ಮೊದಲೇ ಮನೆ ಬಾಗಿಲಿಗೆ ಪತ್ರಿಕೆಯನ್ನು ತಲುಪಿಸಿರುತ್ತಾರೆ. ಪತ್ರಿಕೋದ್ಯಮ ಇಲ್ಲಿಯವರೆಗೆ ಬೆಳೆಯಲು ಪತ್ರಿಕಾ ವಿತರಕರ ಶ್ರಮ ಹೆಚ್ಚಿದೆ ಎಂದು ಶ್ಲಾಘಿಸಿದರು.

> ಮುಂಜಾನೆ 4 ಗಂಟೆಗೆ ಪ್ರಾರಂಭವಾಗುವ ಪತ್ರಿಕಾ ವಿತರಕರ ದಿನಚರಿ ನಿಜಕ್ಕೂ ಶ್ರಮದಿಂದ ಕೂಡಿದೆ. ಇಂಥ ಶ್ರಮಜೀವಿ ಪತ್ರಿಕಾ ವಿತರಕರನ್ನು ಗುರುತಿಸಿ ಗೌರವಿಸುವ ಈ ವಿಭಿನ್ನ ಕಾರ್ಯಕ್ರಮ ಶ್ಲಾಘನೀಯ.
>
> –ಡಾ.ಬಿ.ಸಿ. ಸತೀಶ್, ಜಿಲ್ಲಾಧಿಕಾರಿ.

ಕೊಡಗು ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಎ. ಮುರುಳೀಧರ್ ಮಾತನಾಡಿ, ಕೊಡಗು ಜಿಲ್ಲೆಯ ಇತಿಹಾಸದಲ್ಲೇ ಮೊದಲ ಬಾರಿಗೆ ಪತ್ರಿಕಾ ವಿತರಕರ ದಿನಾಚರಣೆಯನ್ನು ಸಂಘ ಆಯೋಜನೆ ಮಾಡಿದೆ. ಪತ್ರಿಕಾ ವಿತರಕರಿಗೆ ಗೌರವ ಸಮರ್ಪಣೆ ಕಾರ್ಯಕ್ರಮ ಕೇವಲ ಸನ್ಮಾನಕ್ಕೆ ಮಾತ್ರ ಸೀಮಿತವಾಗದೆ ಮುಂದಿನ ದಿನಗಳಲ್ಲಿ ಪತ್ರಿಕಾ ವಿತರಕರ ಅಭಿವೃದ್ಧಿಗೆ ಕೊಡಗು ಪತ್ರಕರ್ತರ ಸಂಘ ಶ್ರಮಿಸುತ್ತದೆ ಎಂದು ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಕೊಡಗು ಜಿಲ್ಲೆಯಾದ್ಯಂತ ಕಾರ್ಯನಿರ್ವಹಿಸುತ್ತಿರುವ ಸುಮಾರು 60ಕ್ಕೂ ಅಧಿಕ ಪತ್ರಿಕಾ ವಿತರಕರಿಗೆ ಗೌರವ ಸಮರ್ಪಣೆ ಮಾಡಲಾಯಿತು. ಕೊಡಗು ಜಿಲ್ಲಾ ಪತ್ರಿಕಾ ವಿತರಕರ ಹಾಗೂ ಏಜೆಂಟರ ಸಂಘದ ಅಧ್ಯಕ್ಷ ಟಿ.ಜೆ.ಸತೀಶ್ ವೇದಿಕೆಯಲ್ಲಿದ್ದರು.

ಕಾರ್ಯಕ್ರಮದಲ್ಲಿ ಮಡಿಕೇರಿ ವಕೀಲರ ಸಂಘದ ಅಧ್ಯಕ್ಷ ಕೆ.ಡಿ.ದಯಾನಂದ, ಹಿರಿಯ ಪತ್ರಕರ್ತ ಜಿ.ಚಿದ್ವಿಲಾಸ್, ನಗರಸಭಾ ಸದಸ್ಯರಾದ ಕೆಎಸ್.ರಮೇಶ್, ಉಮೇಶ್ ಸುಬ್ರಮಣಿ, ಸತೀಶ್, ಮಡಿಕೇರಿ ತಾಲೂಕು ಕಸಾಪ ಅಧ್ಯಕ್ಷ ಅಂಬೆಕಲ್ ನವೀನ್, ಮಡಿಕೇರಿ ತಾಲೂಕು ಜಾಪ ಅಧ್ಯಕ್ಷ ಅನಿಲ್.ಎಚ್.ಟಿ., ಜಿಲ್ಲಾ ಜಾನಪದ ಪರಿಷತ್ ಪ್ರಮುಖರಾದ ಸಿದ್ದರಾಜು, ಪ್ರಶಾಂತ್, ಕವಿತಾ, ಸಮರ್ಥ ಕನ್ನಡಿಗರು ಸಂಸ್ಥೆಯ ಜಿಲ್ಲಾ ಸಂಚಾಲಕಿ ಕೆ.ಜಯಲಕ್ಷ್ಮಿ, ಪತ್ರಕರ್ತರ ಸಂಘದ ಗೌರವ ಸಲಹೆಗಾರ ಶ್ರೀಧರ್ ನೆಲ್ಲಿತ್ತಾಯ, ಸಮಾಜ ಸೇವಕ ಹಿದಾಯತ್ ಉಲ್ಲಾ ಸೇರಿದಂತೆ ವಿವಿಧ ಸಂಘಟನೆಗಳ ಪ್ರಮುಖರು ಹಾಜರಿದ್ದರು.

ಬೈಕ್‌ಗೆ ಡಿಕ್ಕಿ ಹೊಡೆದು ಉರುಳಿ ಬಿದ್ದ ಬಸ್

ಪ್ರಯಾಣಿಕರು ಪಾರು, ಸಂಚಾರ ಅಸ್ತವ್ಯಸ್ತ

ಮಡಿಕೇರಿ,ಸೆ.4– ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದ ಕೆಎಸ್‌ಆರ್‌ಟಿಸಿ ಬಸ್ ಒಂದು ರಸ್ತೆ ಬದಿಗೆ ಮಗುಚಿ ಬಿದ್ದ ಘಟನೆ ಮಡಿಕೇರಿ ಹೊರ ವಲಯದ ಬೋಯಿಕೇರಿಯಲ್ಲಿ ನಡೆದಿದೆ. ಮಡಿಕೇರಿ ಸುಂಟಿಕೊಪ್ಪ ಮಾರ್ಗವಾಗಿ ಮೈಸೂರಿಗೆ 21 ಮಂದಿ ಪ್ರಯಾಣಿಕರನ್ನು ಕರೆದೊಯ್ಯುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ ಬೋಯಿಕೇರಿ ಬಳಿ ತೆರಳುತ್ತಿದ್ದಂತೆಯೇ ಮಡಿಕೇರಿ ಕಡೆಗೆ ಬರುತ್ತಿದ್ದ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದಿದೆ.



ಈ ವೇಳೆ ಚಾಲಕನ ನಿಯಂತ್ರಣ ಕಳೆದು ಕೊಂಡು ಬಸ್ ರಸ್ತೆ ಬದಿಗೆ ಮಗುಚಿ ಬಿದ್ದಿದೆ.

ಬೈಕ್ ಬಸ್‌ನ ಹಿಂಬದಿ ಚಕ್ರದ ಅಡಿ ಸಿಲುಕಿಕೊಂಡಿದ್ದು, ಬೈಕ್ ಸವಾರ ಸೇರಿದಂತೆ ಬಸ್‌ನಲ್ಲಿದ್ದ ಎಲ್ಲ 21 ಮಂದಿ ಪ್ರಯಾಣಿಕರು ಕೂಡ ಅಪಾಯದಿಂದ ಪಾರಾಗಿದ್ದಾರೆ. ಈ ಘಟನೆಯಿಂದ ಕೆಲಕಾಲ ವಾಹನ ಸಂಚಾರದಲ್ಲಿ ವ್ಯತ್ಯಯ ಉಂಟಾಗಿತ್ತು. ಘಟನೆ ಕುರಿತು ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಗುಡ್ಡೆಹೊಸೂರಲ್ಲಿ ಅದ್ದೂರಿ ಗಣೇಶ ವಿಸರ್ಜನೆ

ಗುಡ್ಡೆಹೊಸೂರು, ಸೆ.4– ಇಲ್ಲಿನ ಶ್ರೀ ವಿನಾಯಕ ಸೇವಾ ಸಮಿತಿ ವತಿಯಿಂದ 28ನೇ ವರ್ಷದ ಗಣೇಶೋತ್ಸವ ವಿಸರ್ಜನೆಯು ಅದ್ದೂರಿಯಾಗಿ ನೆರವೇರಿತು. ಇಲ್ಲಿನ ಸಮುದಾಯ ಭವನದಲ್ಲಿ ಪ್ರತಿಷ್ಠಾಪಿಸಿದ ಗಣಪತಿ ಮೂರ್ತಿಗೆ ವಿವಿಧ ಪೂಜಾ ಕಾರ್ಯವನ್ನು ನೆರವೇರಿಸಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ವಿವಿಧ ಗ್ರಾಮಗಳಿಗೆ ಮೆರವಣಿಗೆ ಸಾಗಿ ಡಿಜೆ ವಾದ್ಯಗೋಷ್ಠಿಯೊಂದಿಗೆ ಗ್ರಾಮದ ನೂರಾರು ಮಂದಿ ಸೇರಿ ನಲಿಯುತ್ತಾ ಮೆರವಣಿಗೆ ಸಾಗಿ ಇಲ್ಲಿನ ಕಾವೇರಿ ನದಿಯಲ್ಲಿ ವಿಸರ್ಜಿಸಲಾಯಿತು. ಈ ಸಂದರ್ಭ ಗುಡ್ಡೆ ಹೊಸೂರು ಗ್ರಾಮ ವಿದ್ಯುತ್ ದೀಪದೊಂದಿಗೆ ಅಲಂಕಾರಗೊಂಡು ಮದುಮಗಳಂತೆ ಶೃಂಗಾರಗೊಂಡಿತ್ತು. ಪೊಲೀಸರಿಂದ ಸೂಕ್ತ ಬಂದೋಬಸ್ತ್ ಏರ್ಪಡಿಸಲಾಗಿತ್ತು. ಗಣಪತಿ ವಿಸರ್ಜನೆ ಸಂದರ್ಭ ಉತ್ಸವ ಸಮಿತಿಯ ಎಲ್ಲಾ ಪದಾಧಿಕಾರಿಗಳು ಹಾಜರಿದ್ದರು.



ಗೋದಾಮಿನಿಂದ ಕಾಫಿ ಕಳ್ಳತನ: 6 ಮಂದಿ ಬಂಧನ, ವಾಹನ ವಶ



ಸಿದ್ದಾಪುರ, ಸೆ.4– ಕಾಫಿ ತೋಟದ ಗೋದಾಮಿನಿಂದ 3 ಲಕ್ಷ ರೂ. ಮೌಲ್ಯದ ಕಾಫಿ ಕಳವು ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು 6 ಮಂದಿಯನ್ನು ವಿರಾಜಪೇಟೆ ತಾಲೂಕಿನ ಪಾಲಿಬೆಟ್ಟ ಸಮೀಪದ ಚೆನ್ನಯ್ಯನಕೋಟೆಯಲ್ಲಿ ಬಂಧಿಸಿ, ಅವರಿಂದ ಕಾಫಿ ಮತ್ತು 2 ವಾಹನ ವಶಪಡಿಸಿಕೊಂಡಿದ್ದಾರೆ.

ಪಟ್ಟಡ ಮಾಚಯ್ಯ ಎಂಬವರಿಗೆ ಸೇರಿದ ಕಾಫಿ ಗೋದಾಮಿನಿಂದ ಸುಮಾರು 3 ಲಕ್ಷ ಮೌಲ್ಯದ ಕಾಫಿಯನ್ನು ಕಳ್ಳತನ ಮಾಡಿರುವ ಸಂಬಂಧ ಸಿದ್ದಾಪುರ ಠಾಣೆಯಲ್ಲಿ ದೂರು ದಾಖಲಾಗಿತ್ತು.

ತಕ್ಷಣ ಕಾರ್ಯ ಪ್ರವೃತ್ತರಾದ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ ಸಂದರ್ಭ ಗೋದಾಮಿನ ಸೀಟು ತೆಗೆದು ಒಳನುಗ್ಗಿದ ಕಳ್ಳರು ಅಂದಾಜು 50ಕ್ಕೂ ಹೆಚ್ಚು ಚೀಲ ಕಾಫಿ ಕಳ್ಳತನ ಮಾಡಿರುವುದು ಕಂಡು ಬಂದಿತು. ಪೊಲೀಸ್ ವರಿಷ್ಠಾಧಿಕಾರಿ ಅಯ್ಯಪ್ಪ, ಡಿವೈಎಸ್ಪಿ ಗಜೇಂದ್ರ ಪ್ರಸಾದ್, ಸರ್ಕಲ್ ಇನ್ಸ್‌ಪೆಕ್ಟರ್ ನಾಗೇಶ್‌ಕದ್ರಿ ಮಾರ್ಗದರ್ಶನದಲ್ಲಿ ಸಿದ್ದಾಪುರ ಠಾಣಾಧಿಕಾರಿ ಮೋಹನ್‌ರಾಜ್ ನೇತೃತ್ವದ ತಂಡ ತನಿಖೆ ಕೈಗೊಂಡು ಸಮೀಪದ ಕಾಫಿ ತೋಟವೊಂದರ ಕಾರ್ಮಿಕರನ್ನ ವಿಚಾ ರಣೆಗೊಳ ಪಡಿಸಿದ ಸಂದರ್ಭ ಕಳ್ಳತನ ಪ್ರಕರಣ ಬಯಲಾಗಿದೆ.

ಮಣಿ, ಮಂಜು, ಅಯ್ಯಪ್ಪ, ಸುರೇಶ್‌ಕುಮಾರ್, ಹೊಲಮಾಳದ ಲಕ್ಷ್ಮಣ, ಚೆನ್ನಂಗಿ ಕಾಳ ಬಂಧಿತ ಆರೋಪಿಗಳು. ತೋಟದ ಮಾಲೀಕರು ಇಲ್ಲದ ಸಂದರ್ಭ ಕಳೆದ ಕೆಲ ದಿನಗಳಿಂದ ಕಾಫಿ ಕಳ್ಳತನ ಮಾಡಲಾಗಿತ್ತು ಎಂದು ಆರೋಪಿಗಳು ತಿಳಿಸಿದ್ದು, ಕಳ್ಳತನ ಮಾಡಿದ್ದ ಕಾಫಿಯನ್ನು ಗೋಣಿಕೊಪ್ಪಲು ವರ್ತಕರಿಗೆ ಮಾರಾಟ ಮಾಡಿದರೆನ್ನಲಾಗಿದೆ.

ಕಾರ್ಯಾಚರಣೆಯಲ್ಲಿ ಎಎಸ್‌ಐ ತಮ್ಮಯ್ಯ, ಸಿಬ್ಬಂದಿಗಳಾದ ರತನ್, ಲಕ್ಷ್ಮೀಕಾಂತ್, ಕಿರಣ್, ಸುಧೀರ್, ವಸಂತ್‌ಕುಮಾರ್, ಮಲ್ಲಪ್ಪ, ಬಸವರಾಜು, ಕಿರಣ್‌ಕುಮಾರ್, ಶಿವಪ್ಪ, ಗಿರೀಶ್, ರಾಜೇಶ್, ಪ್ರವೀಣ್ ಚಾಲಕ ಗೋವರ್ಧನ್ ಸೇರಿದಂತೆ ಮತ್ತಿತರರಿದ್ದರು.

ಭಗಂಡೇಶ್ವರ, ಕಾವೇರಿ ಸನ್ನಿಧಿಗೆ ಕದಿರು ಅರ್ಪಣೆ

ಮಡಿಕೇರಿ,ಸೆ.4– ಪೆರಾಜೆ ಶ್ರೀ ಶಾಸ್ತಾವು ದೇವಸ್ಥಾನದಿಂದ ತಲತಲಾಂತರದಿಂದ ನಡೆದು ಕೊಂಡು ಬಂದ ಪದ್ಧತಿಯಂತೆ, ಭಾಗಮಂಡಲ ಭಗಂಡೇಶ್ವರ ಮತ್ತು ತಲಕಾವೇರಿ ಶ್ರೀ ಕಾವೇರಿ ಸನ್ನಿಧಿಗೆ ಕದಿರು ಅರ್ಪಿಸಲಾಯಿತು. ಶ್ರೀ ಶಾಸ್ತಾವು ದೇವಸ್ಥಾನದಿಂದ ತೆಂಗಿನಕಾಯಿ, ಅಕ್ಕಿ, ಹೂ, ಹಿಂಗಾರಗಳನ್ನು ತಂದು ಅರ್ಪಿಸಲಾಯಿತು. ಪೆರಾಜೆ ಶ್ರೀ ಶಾಸ್ತಾವು ದೇವಸ್ಥಾನದ ಪಕ್ಕದ ಶ್ರೀ ಕಾವೇರಿ ಗದ್ದೆಯಿಂದ ಕದಿರು ತೆಗೆದು ಭಾಗಮಂಡಲ ಹಾಗೂ ತಲಕಾವೇರಿಯಲ್ಲಿ ಸಕಲ ಪೂಜಾ ವಿಧಿ ವಿಧಾನಗಳನ್ನು ನೆರವೇರಿಸಿದ ಬಳಿಕ ಕದಿರು ಸಮರ್ಪಿಸಲಾಯಿತು.

ಈ ಸಂದರ್ಭ ಪೆರಾಜೆ ಶ್ರೀ ಶಾಸ್ತಾವು ದೇವಸ್ಥಾನದ ಆಡಳಿತ ಮೊಕ್ತೇಸರ ಜಿತೇಂದ್ರ ನಿಡ್ಯಮಲೆ, ಕಾರ್ಯದರ್ಶಿ ತೇಜಪ್ರಸಾದ್ ಅಮೆಚೂರು, ತಲಕಾವೇರಿ ದೇವಸ್ಥಾನದ ತಕ್ಕ ಮುಖ್ಯಸ್ಥ ಕೋಡಿ ಮೋಟಯ್ಯ, ಭಾಗಮಂಡಲ ಕ್ಷೇತ್ರದ ತಕ್ಕ ಮುಖ್ಯಸ್ಥ ಬಳ್ಳಡ್ಕ ಅಪ್ಪಾಜಿ, ಶ್ರೀ ಶಾಸ್ತಾವು ದೇವಸ್ಥಾನದ ಆಡಳಿತ ಮಂಡಳಿಯ ಪದಾಧಿಕಾರಿಗಳು ಹಾಜರಿದ್ದರು.



ವಿರಾಜಪೇಟೆ: ಚುನಾವಣೆಗೆ ಜೆಡಿಎಸ್ ಸಿದ್ಧತೆ

ಕುಮಾರಸ್ವಾಮಿ ಅಭಿವೃದ್ಧಿ ಕಾರ್ಯಗಳನ್ನು ಜನರಿಗೆ ತಿಳಿಸಲು ನಿರ್ಧಾರ



ವಿರಾಜಪೇಟೆ, ಸೆ.4– ಮುಂಬರುವ ತಾಲೂಕು, ಜಿಲ್ಲಾ ಪಂಚಾಯಿತಿ, ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ವಿರಾಜಪೇಟೆ ತಾಲೂಕು ಜೆಡಿಎಸ್ ಪಕ್ಷದ ಪ್ರಮುಖರು ಮತ್ತು ಮುಖಂಡರು ನಗರದ ಪ್ರವಾಸಿ ಮಂದಿರದ ಆವರಣದಲ್ಲಿ ತಾಲೂಕು ಅಧ್ಯಕ್ಷ ಪಿ.ಎ.ಮಂಜುನಾಥ್ ಅವರ ಅಧ್ಯಕ್ಷತೆಯಲ್ಲಿ ಪೂರ್ವಭಾವಿ ಸಭೆ ನಡೆಸಿ ಚರ್ಚಿಸಿದರು.

ಹೆಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ರೈತರ ಸಾಲ ಮನ್ನಾ, ಲಾಟರಿ ಮತ್ತು ಸಾರಾಯಿ ನಿಷೇಧ ಮಾಡಿರುವುದಲ್ಲದೆ ಕೊಡಗಿನಲ್ಲಿ ಪ್ರಕೃತಿ ವಿಕೋಪದ ಸಂದರ್ಭದಲ್ಲಿ ಕೊಡಗಿಗೆ ಭೇಟಿ ನೀಡಿ ಆಸ್ತಿ ಮನೆ ಕಳೆದುಕೊಂಡವರಿಗೆ ಮನೆಗಳನ್ನು ನಿರ್ಮಿಸಿಕೊಟ್ಟಿದ್ದಾರೆ. ಜೊತೆಗೆ ಕೊಡಗಿನ ಪೊನ್ನಂಪೇಟೆ, ಕುಶಾಲನಗರವನ್ನು ತಾಲೂಕುಗಳನ್ನಾಗಿ ಘೋಷಣೆ ಮಾಡಿದರಲ್ಲದೆ ಬಡ ಕಾರ್ಮಿಕ ಕುಟುಂಬಗಳ ಪರ ಅನೇಕ ಯೋಜನೆಗಳನ್ನು ಜಾರಿ ಮಾಡಿರುವ ಬಗ್ಗೆ ಚರ್ಚಿಸಲಾಯಿತು.

ಈಗ ರಾಜ್ಯದಲ್ಲಿ ಎರಡು ರಾಷ್ಟ್ರೀಯ ಪಕ್ಷಗಳ ಗುದ್ದಾಟದಿಂದ ಅಭಿವೃದ್ಧಿ ಕಾರ್ಯಗಳು ಕುಂಠಿತಗೊಂಡಿರುವುದರಿಂದ ಜೆಡಿಎಸ್ ಪಕ್ಷದ ಕಾರ್ಯಕರ್ತರು ಕುಮಾರಸ್ವಾಮಿ ಅವರ ಅಭಿವೃದ್ಧಿ ಕಾರ್ಯಗಳ ಬಗ್ಗೆ ಮತದಾರರಿಗೆ ತಿಳಿಸಿಕೊಡುವ ಮೂಲಕ ಅವರ ಮನವೊಲಿಸಬೇಕು ಹಾಗೂ ಪಕ್ಷ ಬಿಟ್ಟು ಹೋದ ಮತ್ತು ತಟಸ್ಥರಾಗಿರುವವರನ್ನು ಮರಳಿ ಪಕ್ಷಕ್ಕೆ ಬರಮಾಡಿಕೊಳ್ಳುವ ಬಗ್ಗೆ ಸಭೆಯಲ್ಲಿ ತೀರ್ಮಾನಿಸಲಾಯಿತು. ಪೂರ್ವಭಾವಿ ಸಭೆಯಲ್ಲಿ ಜೆಡಿಎಸ್ ಪಕ್ಷದ ಜಿಲ್ಲಾ ಕಾರ್ಯಾಧ್ಯಕ್ಷ ಎಸ್.ಹೆಚ್.ಮತೀನ್, ವಿ.ಸಿ.ದೇವರಾಜ್, ಜಿಪಂ ಮಾಜಿ ಸದಸ್ಯ ಹೆಚ್.ಬಿ.ಗಣೇಶ್, ಮಹಿಳಾ ಘಟಕ ಪರಿಶಿಷ್ಟ ಜಾತಿ ಪಂಗಡದ ಜಿಲ್ಲಾ ಅಧ್ಯಕ್ಷೆ ಹೆಚ್.ವಿ.ಜಯಮ್ಮ, ಹೆಚ್.ಎಸ್.ರಾಜೇಶ್, ಬಾಳೆಕುಟ್ಟಿರ ದಿನೀ, ಅಪ್ಪಡೇರವಂಡ ಸನ್ನು, ತಾಲೂಕು ಸಮಿತಿ ಉಪಾಧ್ಯಕ್ಷ ಪಿ.ರವಿ ಮಾದಪ್ಪ, ಖಜಾಂಚಿ ಸತ್ಯ ಪಾಣತ್ತಲೆ, ಅಲ್ಪ ಸಂಖ್ಯಾತರ ಘಟಕದ ಅಧ್ಯಕ್ಷ ಮಜೀದ್, ಯುವ ಘಟಕದ ಸೈಫುದ್ದೀನ್, ನಗರ ಘಟಕದ ಯೋಗೇಶ್ ನಾಯ್ಡು, ಎಚ್.ಆರ್.ಕಿಶೋರ್, ಕುಯ್ಯಂಡ ರಾಕೇಶ್, ಪಿ.ಗಣಪತಿ, ಸಂಶುದ್ದಿನ್, ಟಿ.ಆರ್.ಹರ್ಷ, ಅಶ್ರಫ್ ಅಲಿ ಉಪಸ್ಥಿತರಿದ್ದರು. ಪಿ.ಎ.ಮಂಜುನಾಥ್ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಸೈಕಲ್ ವ್ಹೀಲಿಂಗ್ ವಿಚಾರವಾಗಿ ಗುಂಪು ಘರ್ಷಣೆ

6 ಮಂದಿ ಬಂಧನ; ಪೊಲೀಸರಿಂದ ಪಥಸಂಚಲನ

ಚಾಮರಾಜನಗರ, ಸೆ.4–ಸೈಕಲ್‌ನಲ್ಲಿ ವ್ಹೀಲಿಂಗ್ ವಿಚಾರವಾಗಿ ನಗರದಲ್ಲಿ ಶನಿವಾರ ರಾತ್ರಿ ಎರಡು ಗುಂಪುಗಳ ನಡುವೆ ನಡೆದ ಗಲಾಟೆ ಸಂಬಂಧ ಪೊಲೀಸರು 6 ಯುವಕರನ್ನು ಬಂಧಿಸಿದ್ದಾರೆ. ಅಲ್ಲದೆ ನಗರದಲ್ಲಿ ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಪೊಲೀಸರು ಭಾನುವಾರ ಮಧ್ಯಾಹ್ನ ಪಥ ಸಂಚಲನ ನಡೆಸಿದರು.

ನಗರ ನಿವಾಸಿಗಳಾದ ಮಹಮ್ಮದ್ ಅಸ್ಗರ್, ಬಾಬು ಅಶ್ರಫ್, ಅಸ್ಗರ್ ಪಾಷಾ, ಮಹೇಶ್, ಮನೋಜ್ ಹಾಗೂ ಸಚ್ಚಿನ್ ಎಂಬುವವರನ್ನು ಬಂಧಿಸಲಾಗಿದೆ ಎಲ್ಲರನ್ನೂ ತೀವ್ರ ವಿಚಾರಣೆಗೆ ಒಳಪಡಿಸಲಾಗಿದೆ ಎಂದು ಎಸ್ಪಿ ಟಿ.ಪಿ.ಶಿವಕುಮಾರ್ ಸುದ್ದಿಗಾರರಿಗೆ ತಿಳಿಸಿದರು.

ಚಾಮರಾಜನಗರದ ಸಂತೇಮರಳ್ಳಿ ವೃತ್ತದ ಬಳಿ ಒಂದು ಗುಂಪಿಗೆ ಸೇರಿದ ಯುವಕ ಸೈಕಲ್‌ನಲ್ಲಿ ವ್ಹೀಲಿಂಗ್ ಮಾಡುತ್ತಿದ್ದಾಗ ಆ ಸೈಕಲ್ ಮತ್ತೊಂದು ಗುಂಪಿನ ಯುವಕನಿಗೆ ತಾಗಿತು. ಇದರಿಂದ ಎರಡೂ ಗುಂಪುಗಳ ನಡುವೆ ಘರ್ಷಣೆ ನಡೆದಿತ್ತು. ಈ ಸಂಬಂಧ ಎರಡೂ ಗುಂಪಿನ ತಲಾ ಮೂವರ ವಿರುದ್ಧ ಪ್ರಕರಣ ದಾಖಲಾಗಿದ್ದು, ಎಲ್ಲರನ್ನು ಬಂಧಿಸಲಾಗಿದೆ ಎಂದು ಎಸ್ಪಿ ಮಾಹಿತಿ ನೀಡಿದರು.

ವ್ಹೀಲಿಂಗ್ ಮಾಡಿದರೆ ಕ್ರಮ: ನಗರದ ಸೇರಿದಂತೆ ಜಿಲ್ಲೆಯಲ್ಲಿ ಸೈಕಲ್ ಹಾಗೂ ಬೈಕ್‌ನಲ್ಲಿ ವ್ಹೀಲಿಂಗ್ ಮಾಡುತ್ತಿರುವುದು ಗಮನಕ್ಕೆ ಬಂದಿದೆ. ಇದಕ್ಕೆ ಕಡಿವಾಣ ಹಾಕಲು ವಿಶೇಷ ತಂಡ ರಚಿಸಲಾಗುವುದು. ನಗರದಲ್ಲಿ ಶನಿವಾರ ರಾತ್ರಿ ನಡೆದ ಗಲಾಟೆ ಸಂಬಂಧ ಜಿಲ್ಲಾಧಿಕಾರಿಗಳೊಂದಿಗೆ ಸೋಮವಾರ ಸಭೆ ನಡೆಸಿ ಚರ್ಚಿಸಲಾಗುವುದು. ನಗರದಲ್ಲೀಗ ಪರಿಸ್ಥಿತಿ ಶಾಂತವಾಗಿದೆ. ವದಂತಿಗಳಿಗೆ ಯಾರೂ ಕಿವಿಗೊಡದೆ ಶಾಂತಿ ಕಾಪಾಡುವಂತೆ ಎಸ್‌ಪಿ ಶಿವಕುಮಾರ್ ಮನವಿ ಮಾಡಿದರು.



ಪಥಸಂಚಲನ: ನಗರದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಜಾಗೃತಿ ಮೂಡಿಸಲು ಪೊಲೀಸ್ ಸಿಬ್ಬಂದಿ ಭಾನುವಾರ ನಗರದಲ್ಲಿ ಪಥ ಸಂಚಲನ ನಡೆಸಿದರು. ಎಸ್‌ಪಿ ಟಿ.ಪಿ.ಶಿವಕುಮಾರ್ ನೇತೃತ್ವದಲ್ಲಿ ನಗರದ ಪ್ರವಾಸಿ ಮಂದಿರದಿಂದ ಆರಂಭವಾದ ಪಥಸಂಚಲನ ಗುಂಡ್ಲುಪೇಟೆ ವೃತ್ತ, ದೊಡ್ಡ ಅಂಗಡಿಬೀದಿ, ಚಿಕ್ಕಂಗಡಿ ಬೀದಿ, ಸಂತೇಮರಳ್ಳಿ ವೃತ್ತ, ಭುವನೇಶ್ವರಿ ವೃತ್ತ, ಕೆಆರ್‌ಎಸ್‌ಆರ್‌ಟಿಸಿ ಬಸ್ ನಿಲ್ದಾಣ, ಸತ್ತಿ ಸರ್ಕಲ್ ಮೂಲಕ ಪ್ರವಾಸಿ ಮಂದಿರದಲ್ಲಿ ಕೊನೆಗೊಂಡಿತು.

ಎಎಸ್‌ಪಿ ಸುಂದರ್‌ರಾಜ್, ಡಿವೈಎಸ್‌ಪಿ ಪ್ರಿಯದರ್ಶಿನಿ ಸಾಣೆಕೊಪ್ಪ, ಜಿಲ್ಲಾ ಸಶಸ್ತ್ರ ಮೀಸಲು ಪಡೆ ಡಿವೈಎಸ್‌ಪಿ ಸೋಮಣ್ಣ, ಇನ್‌ಸ್ಪೆಕ್ಟರ್, ಸಬ್‌ಇನ್‌ಸ್ಪೆಕ್ಟರ್, ಸಂಚಾರಿ ಠಾಣೆ ಪೇದೆಗಳಿದ್ದರು.

ಮಳೆಹಾನಿ ಪ್ರದೇಶಗಳಿಗೆ ಶಾಸಕ ಮಹೇಶ್ ಭೇಟಿ

ಚಾಮರಾಜನಗರ,ಸೆ.4–ಸತತವಾಗಿ ಸುರಿದ ಮಳೆಗೆ ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಅನೇಕ ಗ್ರಾಮಗಳಲ್ಲಿ ಅಪಾರ ಪ್ರಮಾಣದ ಆಸ್ತಿಪಾಸ್ತಿ ಹಾನಿ ಸಂಭವಿಸಿದ್ದು, ಮಳೆಹಾನಿ ಪೀಡಿತ ಪ್ರದೇಶಗಳಿಗೆ ಕ್ಷೇತ್ರದ ಶಾಸಕ ಎನ್.ಮಹೇಶ್ ಭೇಟಿ ನೀಡಿ, ಪರಿಶೀಲಿಸಿದರು.

ಕ್ಷೇತ್ರದ ಹಲವೆಡೆ ಮರಗಳು ಉರುಳಿಬಿದ್ದು, ಮನೆಗಳಿಗೆ ಹಾನಿಯಾಗಿವೆ. ರಸ್ತೆಗಳು, ನಾಲೆಗಳು, ಕಾಲುವೆಗಳು ಹಾಳಾಗಿವೆ. ಜನತೆ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಆದ್ದರಿಂದ ಗ್ರಾಮ ಲೆಕ್ಕಿಗರು ಮತ್ತು ಇನ್ನಿತರ ಅಧಿಕಾರಿಗಳಿಗೆ ಸರ್ಕಾರಕ್ಕೆ ವಸ್ತುನಿಷ್ಠ ವರದಿ ನೀಡಬೇಕು ಎಂದು ಸೂಚಿಸಿದರು.

ಶನಿವಾರ ಬೂದುಬಳ್ಳಿ ಬುದುಬಳ್ಳಿಮೋಳೆ, ಗೂಳೀಪುರ, ಹೊಮ್ಮ, ಹೆಚ್.ಮೂಕಳ್ಳಿ ಸೇರಿದಂತೆ ಇನ್ನಿತರ ಗ್ರಾಮಗಳಿಗೂ ಭೇಟಿ ನೀಡಿ ಹಾನಿಯಾಗಿರುವ ಮನೆ, ಆಸ್ತಿಗಳನ್ನು ಪರಿಶೀಲಿಸಿದರು. ಜೊತೆಯಲ್ಲಿ ಹಾಜರಿದ್ದ ಗ್ರಾಮ ಲೆಕ್ಕಾಧಿಕಾರಿ, ರಾಜಸ್ವ ನಿರೀಕ್ಷಕ, ಹಾಗೂ ಪಂಚಾಯಿತಿ ಅಧಿಕಾರಿಗಳಿಗೆ ಮಳೆಯಿಂದ ಹಾನಿಯಾಗಿರುವ ಮನೆ, ಆಸ್ತಿಪಾಸ್ತಿಗಳನ್ನು ಸರ್ವೆ ಮಾಡಿ ಸರ್ಕಾರಕ್ಕೆ ವರದಿ ಸಲ್ಲಿಸಿ ಸೂಕ್ತ ಪರಿಹಾರ ಕೊಡಿಸುವ ಕೆಲಸ ಮಾಡುವಂತೆ ಶಾಸಕರು ನಿರ್ದೇಶನ ನೀಡಿದರು.



ಹೊಮ್ಮದಿಂದ ಕೆಂಪನಪುರಕ್ಕೆ ಹೋಗುವ ಸೇತುವೆ ಮುಳಗಡೆಯಾಗಿರುವುದನ್ನು ವೀಕ್ಷಿಸಿದರು. ಈ ವೇಳೆ ಗ್ರಾಮಸ್ಥರು, ಪ್ರವಾಹ ಬಂದರೆ ಹೊಳೆಯಿಂದಾಚೆಗೆ ಹೋಗಲು ರೈತರಿಗೆ ತೊಂದರೆಯಾಗಿದೆ. ಆದರಿಂದ ಹೊಳೆಗೆ ಸೇತುವೆ ನಿರ್ಮಿಸುವ ಮೂಲಕ ರೈತರಿಗೆ ಅನುಕೂಲ ಮಾಡಿಕೊಡಬೇಕು ಹಾಗೂ ಪ್ರವಾಹದಿಂದ ಪದೇಪದೆ ಒಡೆದು ಹೋಗುವ ಕೆಸ್ತೂರು ಕಾಲುವೆ ಏರಿ ದುರಸ್ತಿಪಡಿಸುವಂತೆ ಶಾಸಕರಲ್ಲಿ ಮನವಿ ಮಾಡಿದರು.

ಬಳಿಕ ಶಾಸಕರು ಚಾಮರಾಜನಗರ ತಾಲೂಕಿನ ಆಲೂರು ಹೊಮ್ಮ ಗ್ರಾಮದಲ್ಲಿ ಪ್ರವಾಹದಿಂದ ಹಾನಿಯಾಗಿರುವ ಪ್ರದೇಶಗಳನ್ನು ಶಾಸಕ ಎನ್.ಮಹೇಶ್ ಅಧಿಕಾರಿಗಳೊಂದಿಗೆ ಭೇಟಿ ನೀಡಿ, ಪರಿಶೀಲಿಸಿದರು.

ಭಾರೀ ವಾಹನಗಳ ಸಂಚಾರ ಸಂಪೂರ್ಣ ನಿರ್ಬಂಧ

ಪರಿಷ್ಕೃತ ಆದೇಶ ಹೊರಡಿಸಿದ ಜಿಲ್ಲಾಧಿಕಾರಿ ಚಾರುಲತಾ ಸೋಮಲ್

ಚಾಮರಾಜನಗರ, ಸೆ.4–ಜಿಲ್ಲೆಯ ಹನೂರು ತಾಲೂಕಿನ ತಾಳಬೆಟ್ಟದಿಂದ ಮಲೆ ಮಹದೇಶ್ವರಬೆಟ್ಟದ ಮಾರ್ಗವಾಗಿ ತಮಿಳುನಾಡಿಗೆ ಹೋಗುವ ಮತ್ತು ತಮಿಳುನಾಡಿನಿಂದ ರಾಜ್ಯಕ್ಕೆ ಪಾಲಾರ್ ಮೂಲಕ ಬರುವ ರಸ್ತೆಯಲ್ಲಿ 6ಕ್ಕಿಂತ ಹೆಚ್ಚಿನ ಚಕ್ರಗಳನ್ನು ಹೊಂದಿರುವ ಭಾರೀ ವಾಹನಗಳ ಸಂಚಾರವನ್ನು ಸಂಪೂರ್ಣವಾಗಿ ನಿರ್ಬಂಧಿಸಿ ಹಾಗೂ 6 ಚಕ್ರಗಳನ್ನು ಹೊಂದಿರುವ ವಾಹನಗಳ (ಲಾರಿ) ಸಂಚಾರವನ್ನು ರಾತ್ರಿ 9 ಗಂಟೆಯಿಂದ ಬೆಳಗ್ಗೆ 6 ಗಂಟೆಯವರೆಗೆ ನಿರ್ಬಂಧಿಸಿ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಅವರಿಂದು ಪರಿಷ್ಕೃತ ಆದೇಶ ಹೊರಡಿಸಿದ್ದಾರೆ. ಸಾರ್ವಜನಿಕರು, ಗ್ರಾಮಸ್ಥರಿಗೆ ಅನುಕೂಲವಾಗುವಂತೆ ಅಗತ್ಯ ವಸ್ತುಗಳ ಸಾಗಾಣಿಕೆ ವಾಹನಗಳು, ಅಗ್ನಿಶಾಮಕ ವಾಹನ, ಅಂಬುಲೆನ್ಸ್ ವಾಹನ, ರಾಜ್ಯ ಹಾಗೂ ಹೊರರಾಜ್ಯದ ಸಾರ್ವಜನಿಕ ವಾಹನಗಳಾದ ಸರ್ಕಾರಿ, ಖಾಸಗಿ ಬಸ್‌ಗಳು, ಸರ್ಕಾರಿ ಇತರೆ ಎಲ್ಲಾ ರೀತಿಯ ಲಘು ವಾಹನಗಳ ಮುಕ್ತ ಸಂಚಾರಕ್ಕೆ ಅವಕಾಶವಿರುತ್ತದೆ ಎಂದು ಜಿಲ್ಲಾಧಿಕಾರಿ ಆದೇಶದಲ್ಲಿ ತಿಳಿಸಿದ್ದಾರೆ.

ಡಾ.ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಚಾಲನೆ

ಗುಂಡ್ಲುಪೇಟೆ, ಸೆ.4– ತಾಲೂಕಿನ ಕಗ್ಗಳ ಗ್ರಾಮದಲ್ಲಿ 15 ಲಕ್ಷ ರೂ. ವೆಚ್ಚದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಭವನ ನಿರ್ಮಾಣ ಕಾಮಗಾರಿಗೆ ಶಾಸಕ ಸಿ.ಎಸ್.ನಿರಂಜನಕುಮಾರ್ ಭೂಮಿಪೂಜೆ ನೆರವೇರಿಸಿದರು. ಬಳಿಕ ಮಾತನಾಡಿದ ಅವರು, ತಾಲೂಕಿನ ಹಲವು ಗ್ರಾಮಗಳಲ್ಲಿ ಸಮುದಾಯ ಭವನಗಳನ್ನು ಈಗಾಗಲೇ ನಿರ್ಮಿಸಲಾಗಿದೆ. ಅವುಗಳನ್ನು ಆಯಾಯ ಸಮುದಾಯದ ಶುಭ ಕಾರ್ಯಕ್ರಮಗಳಿಗೆ ಬಳಸಿಕೊಂಡಾಗ ಮಾತ್ರ ನಿರ್ಮಿಸಿದ್ದಕ್ಕೆ ಅರ್ಥ ಬರುತ್ತದೆ ಎಂದರು. ಕ್ಷೇತ್ರದಲ್ಲಿ ಯಾವುದೇ ರೀತಿಯಲ್ಲೂ ಅಭಿವೃದ್ಧಿ ಕುಂಠಿತಗೊಳ್ಳದಂತೆ ಶ್ರಮಿಸುತ್ತಿದ್ದೇನೆ. ಈಗಾಗಲೇ ಕೋಟ್ಯಂತರ ರೂ.ಗಳ ವಿಶೇಷ ಅನುದಾನದಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಾಣಕ್ಕೆ ಚಾಲನೆ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಅಗತ್ಯವಿರುವ ರಸ್ತೆ ಮತ್ತು ಚರಂಡಿ ನಿರ್ಮಿಸಲು ಕ್ರಮ ಕೈಗೊಳ್ಳುತ್ತೇನೆ ಎಂದರು.

ಈ ಸಂದರ್ಭದಲ್ಲಿ ಗ್ರಾಪಂ ಸದಸ್ಯರಾದ ಸೌಮ್ಯ ಮಂಜುನಾಥ್, ಶಿವಮಲ್ಲಪ್ಪ, ಗಣೇಶ್ ನಾಯ್ಕ, ಬಿಜೆಪಿ ಮಂಡಲಾಧ್ಯಕ್ಷ ಜಗದೀಶ್, ತಾಪಂ ಮಾಜಿ ಸದಸ್ಯ ಸಿ.ಮಹದೇವಪ್ರಸಾದ್, ಮುಖಂಡರಾದ ಲಿಂಗರಾಜು, ಮಂಜು, ಎಸ್.ಸಿ.ಮಂಜುನಾಥ್ ಹಲವರಿದ್ದರು.



1.43 ಕೋಟಿ ರೂ. ವೆಚ್ಚದ ಕಾಮಗಾರಿಗೆ ಭೂಮಿಪೂಜೆ



ಹನೂರು, ಸೆ.4–ತಾಲೂಕಿನ ಅಜ್ಜಿಪುರ ಗ್ರಾಮದಲ್ಲಿ ಶಾಸಕ ಆರ್.ನರೇಂದ್ರ ಅವರು 1.43 ಕೋಟಿ ರೂ. ವೆಚ್ಚದ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದರು.

ಈ ವೇಳೆ ಮಾತನಾಡಿದ ಅವರು ಎಸ್‌ಡಿಪಿ ಯೋಜನೆಯಡಿ ಅಜ್ಜಿಪುರ ಗ್ರಾಮದಿಂದ ಕಾಂಚಳ್ಳಿ ಗ್ರಾಮದವರೆಗೆ 1.03 ಕೋಟಿ ರೂ. ವೆಚ್ಚದಲ್ಲಿ ಚರಂಡಿ ಮತ್ತು ಡಾಂಬರು ರಸ್ತೆ ಅಭಿವೃದ್ಧಿ ಕಾಮಗಾರಿ ಹಾಗೂ ಮುನಿಯಪ್ಪನ ದೊಡ್ಡಿ ಗ್ರಾಮದ ರಸ್ತೆಗೆ 40 ಲಕ್ಷ ರೂ. ವೆಚ್ಚದ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಾಗುತ್ತಿದೆ. ಅಜ್ಜಿಪುರದಿಂದ ಕಾಂಚಳ್ಳಿ ಗ್ರಾಮದವರೆಗೆ ರಸ್ತೆ ತೀರಾ ಹದಗೆಟ್ಟಿದ್ದು, ಇದನ್ನು ಮನಗಂಡು ಅನುದಾನ ತರಲಾಗಿದೆ. ಅಧಿಕಾರಿಗಳು, ಗುತ್ತಿಗೆದಾರರು ಗ್ರಾಮಸ್ಥರ ಅಗತ್ಯತೆ ಅರಿತು ಕಾಮಗಾರಿ ನಿರ್ವಹಿಸಬೇಕು ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಜಿಪಂ ಮಾಜಿ ಉಪಾಧ್ಯಕ್ಷ ಬಸವರಾಜು, ತಾಪಂ ಮಾಜಿ ಅಧ್ಯಕ್ಷ ಮುರುಡೇಶ್ವರಸ್ವಾಮಿ, ಗ್ರಾಪಂ ಅಧ್ಯಕ್ಷೆ ಸುಧಾ ಲಿಂಗರಾಜು, ಮುಖಂಡರಾದ ಎಂ.ಮಾದೇವ್, ನಾಗರಾಜು, ಬೈರಾಜ್, ಕಲಂದರ್ ಪಾಷಾ ಸೇರಿದಂತೆ ಇನ್ನಿತರರಿದ್ದರು.

ಮುರುಘಾ ಶ್ರೀ ವಿರುದ್ಧದ ಪ್ರಕರಣ

ನ್ಯಾಯಾಂಗ ತನಿಖೆಗೆ ಆಗ್ರಹಿಸಿ ಪ್ರತಿಭಟನೆ

ಚಾಮರಾಜನಗರ, ಸೆ.4–ಚಿತ್ರದುರ್ಗದ ಮುರುಘಾ ಮಠದ ಪೀಠಾಧ್ಯಕ್ಷ ಶಿವಮೂರ್ತಿ ಮುರುಘಾ ಸ್ವಾಮೀಜಿ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿರುವ ಆರೋಪದ ಪ್ರಕರಣ ಕುರಿತು ಹೈಕೋರ್ಟ್ ನ್ಯಾಯಾಧೀಶರಿಂದ ನ್ಯಾಯಾಂಗ ತನಿಖೆ ನಡೆಸುವಂತೆ ಆಗ್ರಹಿಸಿ ಪ್ರಗತಿಪರ ಮತ್ತು ದಲಿತ ಸಂಘಟನೆಗಳ ಒಕ್ಕೂಟ ನಗರದಲ್ಲಿ ಶುಕ್ರವಾರ ಪ್ರತಿಭಟಿಸಲಾಯಿತು.

ನಗರದ ಜಿಲ್ಲಾಡಳಿತ ಭವನದ ಮುಂಭಾಗದ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಬಳಿ ಒಕ್ಕೂಟ ಕಾರ್ಯಕರ್ತರು ಜಮಾಯಿಸಿ ಪ್ರತಿಭಟಿಸಿದರು. ಚಿತ್ರದುರ್ಗದ ಶ್ರೀ ಮುರುಘಾ ಮಠದ ಶ್ರೀ ಶಿವಮೂರ್ತಿ ಸ್ವಾಮಿಗಳು ತಮ್ಮ ಮಠದ ಅಪ್ರಾಪ್ತ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ ಎಸಗಿರುವುದು ನಾಗರಿಕ ಸಮಾಜ ತಲೆ ತಗ್ಗಿಸುವಂತದ್ದು. ರಾಜ್ಯಾದ್ಯಂತ ಪ್ರತಿಭಟನೆಗಳು ಹೆಚ್ಚಾದ ಹಿನ್ನೆಲೆಯಲ್ಲಿ ಒಂದು ವಾರದ ನಂತರ ಮುಖ್ಯ ಆರೋಪಿಯನ್ನು ಬಂಧಿಸಲಾಗಿದೆ ಅಲ್ಲದೆ ಆರೋಪಿಯ ಬೆಂಬಲಿಗರೊಂದಿಗೆ ಮಠದಲ್ಲಿರುವಾಗಲೇ ಸಂತ್ರಸ್ತರನ್ನು ಕರೆದುಕೊಂಡು ಹೋಗಿ ಸ್ಥಳ ಮಹಜರು ನಡೆಸಿರುವುದು ಪೋಕ್ಸೋ ಕಾಯ್ದೆಯ ಆಶಯಗಳಿಗೆ ವಿರುದ್ಧವಾದ ಕ್ರಮವಾಗಿದೆ. ಪೊಲೀಸರು ಕರ್ತವ್ಯಲೋಪ ಎಸಗಿದ್ದಾರೆ ಎಂದು ಪ್ರತಿಭಟನಾಕಾರರು ದೂರಿದರು.



ಶಿವಮೂರ್ತಿ ಮುರುಘಾ ಸ್ವಾಮೀಜಿ ಕೂಡಲೇ ಪೀಠ ತ್ಯಾಗ ಮಾಡಬೇಕು. ಈ ಪ್ರಕರಣದ ಬಗ್ಗೆ ಹಾಲಿ ಹೈಕೋರ್ಟ್ ನ್ಯಾಯಾಧೀಶರಿಂದ ನ್ಯಾಯಾಂಗ ತನಿಖೆ ನಡೆಸಬೇಕು ಎಂದು ಆಗ್ರಹಿಸಿದರು. ಜಿಲ್ಲಾಧಿಕಾರಿಗಳ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ಮುಖಂಡರಾದ ಜಿ.ಎಂ.ನಾಡ್ಕರ್, ಸಿ.ಎಂ.ಕೃಷ್ಣಮೂರ್ತಿ, ರಾಮಸಮುದ್ರ ಸುರೇಶ್, ಕೆ.ಎಂ.ನಾಗರಾಜು, ಸಿ.ಎಂ. ಶಿವಣ್ಣ, ಬ್ಯಾಡಮುಡ್ಲು ಬಸವಣ್ಣ, ದೊರೆಸ್ವಾಮಿ, ಸಿದ್ದರಾಜು, ಮಹೇಶ್ ಇತರರಿದ್ದರು.

ಅತಿಯಾಗಿ ಮದ್ಯ ಸೇವಿಸಿ ವ್ಯಕ್ತಿ ಸಾವು

ಕೊಳ್ಳೇಗಾಲ, ಸೆ.4–ಅತಿಯಾದ ಮದ್ಯ ಸೇವನೆಯಿಂದ ವ್ಯಕ್ತಿಯೋರ್ವ ಸಾವನ್ನಪ್ಪಿರುವ ಘಟನೆ ಜರುಗಿದೆ. ತಾಲೂಕಿನ ಮುಳ್ಳೂರು ಗ್ರಾಮದ ನಿವಾಸಿ ನಿಂಗನಾಯಕ(55) ಮೃತರು. ಇವರು ಕಳೆದ ಆರು ತಿಂಗಳ ಹಿಂದೆ ಬೆಂಗಳೂರಿನಿಂದ ವಾಪಸ್ಸಾಗಿ ನಗರದ ತನ್ನ ತಂಗಿಯ ಮನೆಯಲ್ಲಿ ಇದ್ದುಕೊಂಡು ಕೂಲಿ ಕೆಲಸ ಮಾಡುತ್ತಿದ್ದರು. 4 ದಿನಗಳಿಂದ ಕೆಲಸಕ್ಕೆ ಹೋಗುವುದಾಗಿ ತೆರಳಿ ವಾಪಸ್ಸಾಗಿರಲಿಲ್ಲ. ಶನಿವಾರ ವಿಪರೀತ ಮದ್ಯ ಸೇವಿಸಿದ್ದರು ಎನ್ನಲಾಗಿದೆ ನಗರದ ಬಸ್ ನಿಲ್ದಾಣದ ಬಳಿಯ ಬಟ್ಟೆ ಅಂಗಡಿಯ ಮುಂಭಾಗ ಮಲಗಿದ್ದ ಜಾಗದಲ್ಲಿ ನಿಂಗನಾಯಕ ಕೊನೆಯುಸಿರೆಳೆದಿದ್ದಾರೆ. ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ದೇಹ ಒಪ್ಪಿಸಲಾಯಿತು. ಈ ಸಂಬಂಧ ಟೌನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.





ಚಾಮರಾಜನಗರದಲ್ಲಿ ಐಎಲ್‌ವೈಎಫ್ ವತಿಯಿಂದ ಪುಟ್ಟನಪುರ ಮತ್ತು ಅಯ್ಯನಪುರ ಗ್ರಾಮದ ರೈತರಿಗೆ ಹಾಲಿನ ಕ್ಯಾನ್, ಔಷಧಿ ಸಿಂಪಡಿಸುವ ಯಂತ್ರ ಸೇರಿದಂತೆ ಕೃಷಿ ಪರಿಕರಗಳನ್ನು ವಿತರಿಸಲಾಯಿತು. ಐಎಲ್‌ವೈಎಫ್ ಅಧ್ಯಕ್ಷ ಹೆಚ್.ಎಸ್.ವೀರೇಶ್, ಉಪಾಧ್ಯಕ್ಷ ಧರ್ಮಪ್ರಸಾದ್, ಎಂಆರ್‌ಎಫ್ ಮಹೇಶ್, ಸದಸ್ಯರಾದ ವರುಣಾ ಮಹೇಶ್, ದೀಪಕ್, ಕುಮಾರ್, ಹರ್ಷ, ದೊಡ್ಡರಾಯಪೇಟೆ ಗಿರೀಶ್, ಪ್ರದೀಪ್, ಕಿರಣ್ ಮತ್ತಿತರರು ಹಾಜರಿದ್ದರು.

ಒಂದನೇ ಪುಟದಿಂದ

ಚುನಾವಣೆಗೆ ಒಂದೇ ದಿನ ಬಾಕಿ

ಸೋಮವಾರ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ನೇತೃತ್ವದಲ್ಲಿ ಕಾಂಗ್ರೆಸ್ ಶಾಸಕರು, ಮುಖಂಡರು, ಕಾರ್ಪೊರೇಟರ್‌ಗಳ ಮತ್ತೊಂದು ಸುತ್ತಿನ ಸಭೆ ನಡೆಯಲಿದೆ. ನಂತರ ಸಭೆಯ ತೀರ್ಮಾನವನ್ನು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಗಮನಕ್ಕೆ ತಂದು, ಅವರೊಂದಿಗೆ ಚರ್ಚೆ ನಡೆಸುವ ಸಾಧ್ಯತೆ ಇದೆ. ಅಂತಿಮವಾಗಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗೆ ವಿಚಾರ ತಿಳಿಸಿ ಅಂತಿಮವಾಗಿ ನಿರ್ಣಯ ಕೈಗೊಳ್ಳಬಹುದು ಎನ್ನಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅಧ್ಯಕ್ಷತೆಯಲ್ಲಿ ಬಿಜೆಪಿ ಮುಖಂಡರ ಸಭೆ ನಡೆಯಲಿದೆ.

ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ನಿರ್ಮಲಕುಮಾರ್ ಸುರಾನ, ಪ್ರಧಾನ ಕಾರ್ಯದರ್ಶಿ ಎನ್.ರವಿಕುಮಾರ್, ಸಂಸದ ಪ್ರತಾಪ್ ಸಿಂಹ, ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ ಸೇರಿದಂತೆ ಅನೇಕ ಮುಖಂಡರು ಸಭೆಯಲ್ಲಿ ಭಾಗಿಯಾಗಲಿದ್ದಾರೆ. ಮುಂಬರುವ ವಿಧಾನಸಭಾ ಚುನಾವಣೆ ದೃಷ್ಟಿಯಿಂದ ಸೂಕ್ತ ನಿರ್ಧಾರ ಕೈಗೊಂಡು ಪಾಲಿಕೆ ಸದಸ್ಯರಿಗೆ ಸೂಚನೆ ನೀಡುವ ಸಾಧ್ಯತೆ ಇದೆ.

ಕಾಂಗ್ರೆಸ್ ಹಾಗೂ ಬಿಜೆಪಿ ನಡೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಿರುವ ಜೆಡಿಎಸ್, ಎಚ್ಚರಿಕೆಯಿಂದ ಮುಂದುವರೆಯಲು ತೀರ್ಮಾನಿಸಿದೆ. ಈ ನಿಟ್ಟಿನಲ್ಲಿ ಶಾಸಕ ಸಾ.ರಾ. ಮಹೇಶ್ ಸೋಮವಾರ ಸಭೆ ನಡೆಸಲಿದ್ದಾರೆ. ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಪಕ್ಷದ ಪದಾಧಿಕಾರಿಗಳು, ಮೇಯರ್ ಆಕಾಂಕ್ಷಿಗಳು ಸೇರಿದಂತೆ ಎಲ್ಲಾ ಸದಸ್ಯರ ಅಭಿಪ್ರಾಯ ಸಂಗ್ರಹಿಸಿ, ಪಕ್ಷದ ನಾಯಕರಾದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಮಾಹಿತಿ ರವಾನಿಸಲಿದ್ದಾರೆ. ಅಗತ್ಯವೆನಿಸಿದರೆ ಕುಮಾರಸ್ವಾಮಿಯವರೇ ಮೈಸೂರಿಗೆ ಆಗಮಿಸಿ ಅಂತಿಮ ಸುತ್ತಿನ ಸಭೆ ನಡೆಸಿ, ನಿರ್ಧಾರ ಪ್ರಕಟಿಸುವ ಸಾಧ್ಯತೆಯೂ ಇದೆ ಎಂದು ಪಕ್ಷದ ಮೂಲಗಳಿಂದ ತಿಳಿದುಬಂದಿದೆ.

ಒಟ್ಟಾರೆ ಮೈಸೂರು ನಗರ ಪಾಲಿಕೆ ಮೇಯರ್ ಹಾಗೂ ಉಪಮೇಯರ್ ಚುನಾವಣೆ ಕುತೂಹಲಕಾರಿ ಘಟ್ಟ ತಲುಪಿದೆ. ಈ ಹಿಂದಿನ ವರ್ಷಗಳಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ಪಕ್ಷಗಳು ಅಧಿಕಾರ ಹಿಡಿಯುವ ಸಲುವಾಗಿ ಜೆಡಿಎಸ್ ಬೆನ್ನೇರುತ್ತಿದ್ದವು. ಕಡೇ ಕ್ಷಣದವರೆಗೂ ಮೈತ್ರಿಗಾಗಿ ಕಸರತ್ತು ನಡೆಯುತ್ತಿತ್ತು. ನಂತರವೂ ಮೇಯರ್ ಹಾಗೂ ಉಪಮೇಯರ್ ಸ್ಥಾನ ಯಾರಿಗೆ ಎನ್ನುವ ನಿರ್ಧಾರಕ್ಕೂ ಪೈಪೋಟಿ ನಡೆಯುತ್ತಿತ್ತು. ಆದರೆ ಈ ಬಾರಿಯ ಪರಿಸ್ಥಿತಿ ಸ್ವಲ್ಪ ಭಿನ್ನವಾಗಿದೆ. ಕಾಂಗ್ರೆಸ್ ಹಾಗೂ ಬಿಜೆಪಿ ಪಕ್ಷಗಳು ಮೂರ್‍ನಾಲ್ಕು ದಿನಗಳ ಮುಂಚೆಯೇ ಸ್ವತಂತ್ರ ಸ್ಪರ್ಧೆಗೆ ನಿರ್ಧರಿಸಿ, ಜೆಡಿಎಸ್ ಪಕ್ಷವೇ ಮೈತ್ರಿಗೆ ದುಂಬಾಲು ಬೀಳಲಿ ಎನ್ನುವ ನಿರೀಕ್ಷೆಯಲ್ಲಿವೆ. ಒಂದು ವೇಳೆ ಜೆಡಿಎಸ್ ತಟಸ್ಥ ನಿಲುವು ತಳೆದರೆ ಚುನಾವಣಾ ಅಖಾಡದಲ್ಲಿ ಗೆಲ್ಲುವುದಕ್ಕೆ ಇರುವ ಎಲ್ಲಾ ಅವಕಾಶಗಳನ್ನು ಗಟ್ಟಿ ಮಾಡಿಕೊಳ್ಳುವ ಪ್ರಯತ್ನವನ್ನೂ ನಡೆಸಿವೆ. ತಮ್ಮ ಪಕ್ಷಗಳ ಅಭ್ಯರ್ಥಿಗಳನ್ನು ಕಣಕ್ಕಿಳಿಸಿ ಗೆಲ್ಲಿಸಲು ರಹಸ್ಯ ತಂತ್ರಗಾರಿಕೆಯನ್ನೂ ಹೆಣೆಯುತ್ತಿವೆ.

ಇನ್ನಿಬ್ಬರ ಸದಸ್ಯತ್ವಕ್ಕೆ ತಕರಾರು

ಮೈಸೂರು ಮಹಾನಗರ ಪಾಲಿಕೆ ಚುನಾವಣೆಯಲ್ಲಿ ಮತದಾರರಾಗಿ ಹಕ್ಕು ಪಡೆದಿರುವ ವಿಧಾನ ಪರಿಷತ್ ಸದಸ್ಯರಾದ ಜಿ.ಎಂ.ಮಧು ಮಾದೇಗೌಡ ಹಾಗೂ ಎ.ಹೆಚ್.ವಿಶ್ವನಾಥ್ ವಿರುದ್ಧ ವಕೀಲ ಬಿ.ಎಂ.ರಾಜಶೇಖರ್, ಚುನಾವಣಾಧಿಕಾರಿಗಳೂ ಆದ ಪ್ರಾದೇಶಿಕ ಆಯುಕ್ತರಿಗೆ ತಕರಾರು ಅರ್ಜಿ ಸಲ್ಲಿಸಿದ್ದಾರೆ. ದಕ್ಷಿಣ ಪದವೀಧರರ ಕ್ಷೇತ್ರದ ಚುನಾವಣೆಯಲ್ಲಿ ಸ್ಪರ್ಧಿಸುವಾಗ ಮಧು, ತಾವು ಮದ್ದೂರು ತಾಲ್ಲೂಕಿನ ಗುರುದೇವರಹಳ್ಳಿ ನಿವಾಸಿ ಎಂದು ಪ್ರಮಾಣ ಪತ್ರದಲ್ಲಿ ದಾಖಲಿಸಿದ್ದರು. ಆಯ್ಕೆ ಬಳಿಕ ಏಕಾಏಕಿ ಮೈಸೂರು ವಿಳಾಸ ನೀಡಿ ನಗರಪಾಲಿಕೆ ಸದಸ್ಯತ್ವ ಪಡೆದಿದ್ದಾರೆ. ಹಾಗೆಯೇ ಹುಣಸೂರು ತಾಲೂಕಿನ ನಿವಾಸಿಯಾಗಿ ಮತದಾನದ ಹಕ್ಕು ಹೊಂದಿದ್ದ ವಿಧಾನಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್, ಈ ಚುನಾವಣೆಗೋಸ್ಕರ ಮೈಸೂರು ನಗರಕ್ಕೆ ವಿಳಾಸ ಬದಲಿಸಿಕೊಂಡು ಸದಸ್ಯತ್ವ ಪಡೆದಿದ್ದಾರೆ. ಹೀಗೆ ವಿಳಾಸ ಬದಲಿಸಿಕೊಂಡಿರುವುದು ಕಾನೂನು ಬಾಹಿರವಾಗಿದ್ದು, ಇವರಿಬ್ಬರ ಮತದಾನದ ಹಕ್ಕನ್ನು ರದ್ದುಗೊಳಿಸುವಂತೆ ಕೋರಿದ್ದಾರೆ. ಮಂಡ್ಯ ಜಿಲ್ಲೆ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ವಿಧಾನಪರಿಷತ್‌ಗೆ ಆಯ್ಕೆಯಾಗಿರುವ ದಿನೇಶ್ ಗೂಳಿಗೌಡರ ಸದಸ್ಯತ್ವ ಪ್ರಶ್ನಿಸಿ ನಿನ್ನೆಯಷ್ಟೇ ಜೆಡಿಎಸ್ ರಾಜ್ಯ ವಕ್ತಾರರೂ ಆದ ವಕೀಲ ರವಿಚಂದ್ರೇಗೌಡ ತಕರಾರು ಸಲ್ಲಿಸಿದ್ದಾರೆ. ಚುನಾವಣೆ ಹೊಸ್ತಿಲಲ್ಲಿ ಈ ಮೂವರು ವಿಧಾನಪರಿಷತ್ ಸದಸ್ಯರ ಮತದಾನದ ಹಕ್ಕಿನ ಬಗ್ಗೆ ಪ್ರಾದೇಶಿಕ ಆಯುಕ್ತರು ಕೈಗೊಳ್ಳುವ ತೀರ್ಮಾನ ಚುನಾವಣೆ ಮೇಲೆ ಪರಿಣಾಮ ಬೀರಬಹುದು.

ಪಾಲಿಕೆಯಲ್ಲಿ ಪಕ್ಷಗಳ ಬಲಾಬಲ

ಸದ್ಯ ಮತದಾರರ ಪಟ್ಟಿಯನುಸಾರ ಶಾಸಕ ತನ್ವೀರ್ ಸೇಠ್, ವಿಧಾನಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಜಿ.ಎಂ.ಮಧು, ದಿನೇಶ್ ಗೂಳಿಗೌಡ ಹಾಗೂ 20 ಕಾರ್ಪೊರೇಟರ್‌ಗಳು ಸೇರಿ ಕಾಂಗ್ರೆಸ್ 24 ಸದಸ್ಯರ ಬಲ ಹೊಂದಿದೆ. ಪಕ್ಷೇತರರಾದ ಪೈಲ್ವಾನ್ ಶ್ರೀನಿವಾಸ್ ಹಾಗೂ ಎಂ.ಶಿವಕುಮಾರ್ ಈಗಾಗಲೇ ಕಾಂಗ್ರೆಸ್‌ನಲ್ಲಿ ಗುರುತಿಸಿಕೊಂಡಿರುವುದರಿಂದ ಒಟ್ಟು **'ಕೈ'ಬಲ 26** ಆಗಲಿದೆ. ಬಿಜೆಪಿಯಲ್ಲಿ ಸಂಸದ ಪ್ರತಾಪ್ ಸಿಂಹ, ಶಾಸಕರಾದ ಎಸ್.ಎ.ರಾಮದಾಸ್, ಎಲ್.ನಾಗೇಂದ್ರ, ವಿಧಾನಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್, 22 ಕಾರ್ಪೊರೇಟರ್‌ಗಳು ಹಾಗೂ ಪಕ್ಷೇತರರಾಗಿ ಗೆದ್ದಿರುವ ಮ.ವಿ.ರಾಮ್‌ಪ್ರಸಾದ್ ಸೇರಿ ಒಟ್ಟು **27 ಸದಸ್ಯ** ಬಲವಿದೆ. ಇನ್ನು ಜೆಡಿಎಸ್‌ನಲ್ಲಿ ಶಾಸಕ ಜಿ.ಟಿ.ದೇವೇಗೌಡ, ವಿಧಾನಪರಿಷತ್ ಸದಸ್ಯರಾದ ಸಿ.ಎನ್.ಮಂಜೇಗೌಡ, ಮರಿತಿಬ್ಬೇಗೌಡ ಹಾಗೂ 17 ಕಾರ್ಪೊರೇಟರ್‌ಗಳ ಜೊತೆ ಪಕ್ಷೇತರರಾಗಿ ಗೆದ್ದಿರುವ ಕೆ.ವಿ.ಶ್ರೀಧರ್, ಸಮೀವುಲಾ(ಅಜ್ಜು) ಸೇರಿ 22 ಸದಸ್ಯರ ಬಲವಿದೆ. ಬಿಎಸ್‌ಪಿ ಸದಸ್ಯೆ ಪಲ್ಲವಿ ಬೇಗಂ ಬೆಂಬಲ ಯಾರಿಗೆ ಎನ್ನುವುದು ತಿಳಿಯಬೇಕಿದೆ. ಒಟ್ಟಾರೆ 26 ಸದಸ್ಯ ಬಲ ಹೊಂದಿರುವ ಕಾಂಗ್ರೆಸ್, 27 ಸದಸ್ಯ ಬಲ ಹೊಂದಿರುವ ಬಿಜೆಪಿ ಪಕ್ಷಗಳು ಸ್ವತಂತ್ರ ಸ್ಪರ್ಧೆಗೆ ನಿರ್ಧರಿಸಿವೆ. ಇದರಿಂದ ಪ್ರಪ್ರಥಮ ಬಾರಿಗೆ ಬಿಜೆಪಿ ಮೇಯರ್ ಆಗಲು ಸಹಕರಿಸಿದ ಜೆಡಿಎಸ್‌ಗೆ ಪೆಟ್ಟು ಬಿದ್ದಂತಾಗಿದೆ. ಮಾತಿನಂತೆ ಮುಂದಿನ 2 ಅವಧಿಗೆ ಬೆಂಬಲ ನೀಡದೆ ನಡೆ ಬದಲಿಸಿದ ಬಿಜೆಪಿ ವಿರುದ್ಧ ಜೆಡಿಎಸ್ ಸಿಟ್ಟಿಗೆದ್ದಿದೆ. ಅಂತಿಮ ಕ್ಷಣದಲ್ಲಿ ಕಾಂಗ್ರೆಸ್‌ಗೆ ಬೆಂಬಲಿಸಿ ಬಿಜೆಪಿ ವಿರುದ್ಧ ಸೇಡು ತೀರಿಸಿಕೊಳ್ಳುವ ಸಾಧ್ಯತೆ ಇದೆ. ಆದರೆ ಜೆಡಿಎಸ್‌ನ ಬೆಂಬಲವಿಲ್ಲದೆಯೇ ಪಕ್ಷೇತರರ ಬೆಂಬಲ ಪಡೆದು ಸ್ವತಂತ್ರವಾಗಿ ಅಧಿಕಾರಕ್ಕೇರುವ ನಿಟ್ಟಿನಲ್ಲಿ ಕಾಂಗ್ರೆಸ್ ಪ್ರಯತ್ನ ನಡೆಸಿದೆ. ಈ ನಡುವೆ ಜೆಡಿಎಸ್‌ನೊಂದಿಗೆ ಮೈತ್ರಿ ಮಾಡಿಕೊಂಡು ಮಾತಿನಂತೆ ಅವರಿಗೆ ಮೇಯರ್ ಸ್ಥಾನ ಬಿಟ್ಟುಕೊಡಲು ಸೂಚಿಸುವಂತೆ ಬಿಜೆಪಿ ರಾಜ್ಯಾಧ್ಯಕ್ಷರಿಗೆ ಸ್ಥಳೀಯ ನಾಯಕರು ಒತ್ತಡ ಹೇರಿದ್ದಾರೆಂದು ತಿಳಿದುಬಂದಿದೆ. ಒಟ್ಟಾರೆ ಸೆ.6ರಂದು ನಡೆಯಲಿರುವ ಮೇಯರ್-ಉಪಮೇಯರ್ ಚುನಾವಣೆ ಅಖಾಡ ರೋಚಕವಾಗಿರಲಿದೆ.

ಮಠದಲ್ಲಿ ಮಹಜರ್

ಕೆಲ ಸಾಕ್ಷ್ಯಗಳ ಮಾಹಿತಿಯನ್ನೂ ಪೊಲೀಸರು ಕಲೆಹಾಕಿದ್ದಾರೆ. ಕೊಠಡಿಯಲ್ಲಿ ಇದ್ದ ಕೆಲವು ಬಟ್ಟೆಗಳನ್ನು ಪೊಲೀಸರು ಈ ವೇಳೆ ವಶಕ್ಕೆ ಪಡೆದುಕೊಂಡಿದ್ದಾರೆ. ಅದರೊಂದಿಗೆ ಮಠದ ಸಿಬ್ಬಂದಿಯನ್ನೂ ವಿಚಾರಣೆ ನಡೆಸಿ, ಕೆಲವು ಮಾಹಿತಿಗಳನ್ನು ಪಡೆದುಕೊಂಡಿದ್ದಾರೆ. ಮುರುಘಾ ಶ್ರೀಗಳ ಕೋಣೆಗೆ ಯಾರೆಲ್ಲಾ ಹೋಗುತ್ತಿದ್ದರು. ಅವರ ಕೋಣೆಗೆ ಯಾರಿಗೆಲ್ಲಾ ಪ್ರವೇಶವಿತ್ತು ಎನ್ನುವ ಮಾಹಿತಿಯನ್ನು ಪೊಲೀಸರು ಪಡೆದುಕೊಂಡಿದ್ದಾರೆ. ಕೋಣೆಗೆ ಯಾರಿಗೆಲ್ಲ ಅವಕಾಶ ಇತ್ತು, ಬಾಲಕಿಯರು ಹೋಗುತ್ತಿದ್ದರೆ, ಅವರನ್ನು ಯಾರು ಕರ್ಕೊಂಡು ಹೋಗುತ್ತಿದ್ದರು ಎನ್ನುವುದರ ಮಾಹಿತಿ ಸಂಗ್ರಹ ಮಾಡಿದ್ದಾರೆ. ಮಹಜರು ಮುಗಿಸಿ ಮಠದಿಂದ ಸ್ವಾಮೀಜಿಯನ್ನು ಡಿವೈಎಸ್ಪಿ ಕಚೇರಿಗೆ ಪೊಲೀಸರು ಕರೆದೊಯ್ದಿದ್ದಾರೆ. ಈ ವೇಳೆ ಶ್ರೀಗಳು ಕಣ್ಣೀರಿಟ್ಟಿದ್ದಾರೆ.



ಜಾಮೀನು ಅರ್ಜಿ ಸಲ್ಲಿಕೆ ಸಾಧ್ಯತೆ

ಅವಕಾಶ ಕೊಡಬೇಕು. ಹಾಗಾಗಿ, ಮಧ್ಯಂತರ ಜಾಮೀನು ನೀಡಬೇಕೆಂದು ಶ್ರೀಗಳ ಪರ ವಕೀಲರು ಮನವಿ ಸಲ್ಲಿಸುವ ಸಾಧ್ಯತೆ ಹೆಚ್ಚಿದೆ. ಈ ಸಂಬಂಧ ಡಿವೈಎಸ್‌ಪಿ ಕಚೇರಿಗೆ ಬೆಳಗ್ಗೆ ಭೇಟಿ ನೀಡಿದ್ದ ವಕೀಲ ಉಮೇಶ್, ಶ್ರೀಗಳ ಆರೋಗ್ಯ ವಿಚಾರಿಸಿ ಬೇಲ್ ಸಂಬಂಧ ಚರ್ಚಿಸಿದ್ದಾರೆ. ಇಂದು ಬೆಳಗ್ಗೆ ಪೊಲೀಸರು ಡಿವೈಎಸ್‌ಪಿ ಕಚೇರಿಗೆ ವೈದ್ಯರನ್ನು ಕರೆಸಿಕೊಂಡು ಶ್ರೀಗಳ ಆರೋಗ್ಯ ತಪಾಸಣೆ ಮಾಡಿಸಿದರು.

ಅನಾಥ ಸೇವಾಶ್ರಮದ ಅಧ್ಯಕ್ಷ ಸ್ಥಾನದಿಂದ ಮುರುಘಾ ಶ್ರೀ ವಜಾ

ಪೋಕ್ಸೋ ಕೇಸ್‌ನಡಿಯಲ್ಲಿ ಬಂಧನಕ್ಕೆ ಒಳಗಾಗಿರುವ ಮುರುಘಾ ಶ್ರೀಗಳನ್ನು ಅನಾಥ ಸೇವಾಶ್ರಮದ ಅಧ್ಯಕ್ಷ ಸ್ಥಾನದಿಂದ ವಜಾ ಮಾಡಲಾಗಿದೆ. ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲೂಕಿನ ಮಲ್ಲಾಡಿಹಳ್ಳಿ ಗ್ರಾಮದಲ್ಲಿರುವ ಅನಾಥ ಸೇವಾಶ್ರಮದಲ್ಲಿ ಮುರುಘಾ ಶ್ರೀಗಳು ಅಧ್ಯಕ್ಷರಾಗಿದ್ದರು. ಲೈಂಗಿಕ ದೌರ್ಜನ್ಯ ಆರೋಪ ಕೇಳಿಬಂದ ಹಿನ್ನೆಲೆಯಲ್ಲಿ ಅನಾಥ ಸೇವಾಶ್ರಮ ವಿಶ್ವಸ್ತ ಸಮಿತಿಯು ಅವರನ್ನು ಅಧ್ಯಕ್ಷ ಸ್ಥಾನದಿಂದ ವಜಾಗೊಳಿಸಿರುವುದಾಗಿ ತಿಳಿಸಿದೆ. ಈ ಬಗ್ಗೆ ಗೌರವ ಕಾರ್ಯದರ್ಶಿ ಪ್ರೊ. ಕೆ.ಇ.ರಾಧಾ ಕೃಷ್ಣ ಪ್ರಕಟಣೆಯನ್ನು ಹೊರಡಿಸಿದ್ದಾರೆ. ಜೊತೆಗೆ ವಿಶ್ವಸ್ತ ಸಮಿತಿಯ ಸದಸ್ಯತ್ವದಿಂದಲೂ ಮುರುಘಾ ಶ್ರೀ ಅಮಾನತು ಮಾಡಿರುವುದಾಗಿ ತಿಳಿಸಿದ್ದಾರೆ.

ಪ್ರವಾಸೋದ್ಯಮ ಆಧುನಿಕ ಯುಗದ ರೋಗ

'ಪ್ರಯಾಣ' ಅನಾದಿ ಕಾಲದ ಮನುಷ್ಯನ ಸಹಜ ಗುಣ

ಪ್ರವಾಸ ಕಥನ 'ಜಗವ ಸುತ್ತುವ ಮಾಯೆ' ಕೃತಿ ಬಿಡುಗಡೆಗೊಳಿಸಿ ಲೇಖಕ ಜೋಗಿ ಅಭಿಮತ

ಮೈಸೂರು,ಸೆ.4(ಪಿಎಂ)- ಟೂರಿಸಂ (ಪ್ರವಾಸೋದ್ಯಮ) ಎಂಬುದು ಆಧುನಿಕ ಯುಗದ ಒಂದು ರೋಗ. ಆದರೆ ಟ್ರಾವೆಲಿಂಗ್ (ಪ್ರಯಾಣ) ಎಂಬುದು ಅನಾದಿ ಕಾಲದಿಂದಲೂ ಮನುಷ್ಯನ ಜೊತೆಗೆ ಬಂದ ಸಹಜ ಗುಣ ಎಂದು ಲೇಖಕರೂ ಆದ ಪತ್ರಕರ್ತ ಜೋಗಿ ಅಭಿಪ್ರಾಯಪಟ್ಟರು.

ಮೈಸೂರಿನ ಮಾನಸ ಗಂಗೋತ್ರಿಯ ಮೈಸೂರು ವಿವಿ ವಿಜ್ಞಾನ ಭವನದಲ್ಲಿ ಕವಿತಾ ಪ್ರಕಾಶನದ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಸುಚಿತ್ರಾ ಹೆಗಡೆ ಅವರ ಪ್ರವಾಸ ಕಥನ 'ಜಗವ ಸುತ್ತುವ ಮಾಯೆ' ಕೃತಿ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಪ್ರಸ್ತುತ ಅನೇಕ ರಾಷ್ಟ್ರಗಳು ಟೂರಿಸಂ ಮೂಲಕ ಹೆಚ್ಚಿನ ಆದಾಯ ಗಳಿಸುತ್ತಿವೆ. ಆದರೆ ನನಗೆ ಟೂರಿಸಂನಲ್ಲಿ (ಪ್ರವಾಸೋದ್ಯಮ) ಆಸಕ್ತಿ ಇಲ್ಲ. ಬದಲಿಗೆ ಟ್ರಾವಲಿಂಗ್‌ನಲ್ಲಿ (ಪ್ರಯಾಣ) ಆಸಕ್ತಿ ಹೊಂದಿದ್ದೇನೆ. ಟೂರಿಸಂ ಎಂದಾಗ ಅದು ಉದ್ಯಮ-ಉದ್ಯೋಗ ಆಗಿಬಿಡುತ್ತದೆ. ಅದು ಪ್ರತಿಯೊಬ್ಬರಿಗೂ ಒಂದೇ ಅನುಭವ ನೀಡುವ ಮಾದರಿ ಹೊಂದಿರುತ್ತದೆ. ಉದಾಹರಣೆಗೆ ಸಿಂಗಾಪುರ್‌ಗೆ ಟೂರಿಸಂನಡಿ ಪ್ರವಾಸಕ್ಕೆ ಹೋದ ಇಬ್ಬರನ್ನು ಮುಖಾಮುಖಿಯಾಗಿಸಿದರೆ ಇಬ್ಬರ ಅನುಭವ ಒಂದೇ ಆಗಿರುತ್ತದೆ. ಇಬ್ಬರು ಮನುಷ್ಯರ ಅನುಭವ ಒಂದೇ ಆಗಿರಬಾರದು. ವೈವಿಧ್ಯತೆಯಲ್ಲಿ ಮಾನವ ತತ್ವದ ಒಂದು ಸತ್ವ ಅಡಗಿರುತ್ತದೆ. ಆದರೆ ಟೂರಿಸಂನಲ್ಲಿ ಅಂತಹ ವಿಭಿನ್ನ ಅನುಭವ ಇಲ್ಲ ಎಂದು ವಿಶ್ಲೇಷಿಸಿದರು.

ಫುಡ್ ಟೂರಿಸಂ, ಬುಕ್ ಟೂರಿಸಂ ಎಂಬ ಪರಿಕಲ್ಪನೆಗಳು ಬಂದಿವೆ. ಹಲವು ಕ್ಷೇತ್ರಗಳಲ್ಲಿರುವವರ ಉದ್ದೇಶಗಳಿಗೆ ಅನುಗುಣವಾಗಿ ಟೂರಿಸಂ ವಿಧಗಳು ಬಂದಿವೆ ಹೀಗೆ ಒಬ್ಬರಿಗೆ ಒಂದೊಂದು ಉದ್ದೇಶವಿರುತ್ತದೆ ರಾಜಕಾರಣಿಗಳು ಯಾವುದಾದರೂ ದೇಶಕ್ಕೆ ಭೇಟಿ ನೀಡಿದರೆ ಅಲ್ಲಿ ಭ್ರಷ್ಟಾಚಾರ ಮಾಡುವ ವಿಧಾನ ಬಗ್ಗೆ ತಿಳಿದುಕೊಂಡು ಬರುವಲ್ಲಿ ಆಸಕ್ತರಾಗಿರುತ್ತಾರೆ ಎಂದು ಹಾಸ್ಯ ಚಟಾಕಿ ಹಾರಿಸಿದರು.

ಪ್ರವಾಸ ಎಂದರೆ ನಿತ್ಯದ ಕೆಲಸ-ಕಾರ್ಯ ಮತ್ತು ಜಂಜಾಟದಿಂದ ಬಿಡುಗಡೆ ಹೊಂದುವುದೂ ಆಗಿದೆ. ಜೊತೆಗೆ ಪ್ರವಾಸವು ಪರಸ್ಪರರನ್ನು ಅರ್ಥ ಮಾಡಿಸುವ ಮಹತ್ವದ ಗುಣವನ್ನೂ ಹೊಂದಿದೆ. ಪ್ರವಾಸ ಹೋದಾಗ ಅಂತರಂಗದ ಗುಣಗಳು ಜೊತೆಗಾರರಿಗೆ ಬಹಿರಂಗವಾಗಲಿವೆ ಮನುಷ್ಯನ ಅಂತರಂಗದ ಸತ್ವ-ಸತ್ಯಗಳನ್ನು ಪರಸ್ಪರರಿಗೆ ಅರ್ಥ ಮಾಡಿಸುವ ಶಕ್ತಿ ಪ್ರವಾಸಕ್ಕಿದೆ. ಹಾಗಾಗಿಯೇ ನಿರ್ಮಾಪಕರು ತಮ್ಮ ಸಿನಿಮಾಗೆ ನಿರ್ದೇಶಕರನ್ನು ಆಯ್ಕೆ ಮಾಡಿಕೊಳ್ಳಲು ಅವರೊಂದಿಗೆ ಪ್ರವಾಸ ಹೋಗುವುದೂ ಇದೆ ಎಂದರು.

ಟೂರಿಸಂ ನಂಬಿರುವ ಹಲವು ದೇಶಗಳು ಪ್ರವಾಸಿಗರ ಸ್ಥಳಗಳಲ್ಲಿ ದೊರೆಯುವ ವಸ್ತು, ತಿಂಡಿ ಮತ್ತು ಬಟ್ಟೆ ಉತ್ಪಾದನೆಗೆ ಹೆಚ್ಚು ಒತ್ತು ನೀಡುವ ಮೂಲಕ ತನ್ನಲ್ಲಿನ ಮೂಲ ಸತ್ವ ಮರೆತು ಬಿಡುತ್ತವೆ. ಇಂದು ಯಾವುದೇ ಊರಿಗೆ ಹೋದರೂ ಬೆಳಗಿನ ಉಪಾಹಾರಕ್ಕೆ ಇಡ್ಲಿ-ವಡೆ ಕೊಡುವುದಿದೆ. ಆದರೆ ಆಯಾಯ ಸ್ಥಳದಲ್ಲಿನ ಆಹಾರಕ್ಕೆ ಆದ್ಯತೆ ನೀಡುವುದು ಮುಖ್ಯವಾಗಬೇಕು ಎಂದು ಹೇಳಿದರು.

ನಾನು ಇತ್ತೀಚೆಗೆ ಕೆಲ ದೇಶಗಳಿಗೆ ಪ್ರವಾಸಕ್ಕೆ ಹೋಗಿದ್ದಾಗ ಗೈಡ್‌ಗಳ ಸಹಾಯ ತೆಗೆದುಕೊಳ್ಳಲಿಲ್ಲ. ಟ್ರಾವೆಲಿಂಗ್ ಗೈಡ್‌ಗಳು ಎಷ್ಟೋ ಕಡೆ ನೈಜ ಮಾಹಿತಿ ಕೊಡುವುದೇ ಇಲ್ಲ ಆ ಕ್ಷಣಕ್ಕೆ ನಮ್ಮನ್ನು ರಂಜಿಸುವ ಪ್ರಯತ್ನ ಮಾಡುವುದೇ ಹೆಚ್ಚು. ಇನ್ನು 6 ದಿನ ಪ್ರವಾಸ ಮಾಡಿ 7ನೇ ದಿನ ಮನೆಗೆ ಹಿಂತಿರುಗಿದರೆ ತಮಗೆ ಮನೆಗೆ ಹೋದಷ್ಟು ಸಂತಸ ಉಂಟಾಗುತ್ತದೆ ಎಂದು ತಿಳಿಸಿದರು.


ಕೃತಿ ಕರ್ತೃ ಸುಚಿತ್ರಾ ಹೆಗಡೆ ಉದ್ದೇಶಿಸಿ ಮಾತನಾಡಿದ ಅವರು, ನೀವು ಒಂದು ದೇಶಕ್ಕೆ ಹೋಗಿ ತಿಂಗಳು ಕಾಲ ನೆಲೆಸಿ ಅಲ್ಲಿನ ಬಗ್ಗೆ ಪುಸ್ತಕ ಬರೆಯಿರಿ. ಈ ಪುಸ್ತಕದಲ್ಲಿ ಏಳೆಂಟು ದೇಶಗಳ ಬಗ್ಗೆ ಬರೆದಿದ್ದೀರಿ. ಆದರೆ ಒಂದು ದೇಶಕ್ಕೆ ಸೀಮಿತವಾಗಿ ಬರವಣಿಗೆ ಮಾಡಿದರೆ ಹೆಚ್ಚು ಪರಿಣಾಮಕಾರಿಯಾಗಲಿದೆ ಎಂದು ಸಲಹೆ ನೀಡಿದರು.

ಈ ಪುಸ್ತಕ ಚಿಕ್ಕದಾಗಿದ್ದರೂ ಹಲವು ದೇಶ-ಭಾಷೆ-ಘಟನಾವಳಿಗಳ ಬಗ್ಗೆ ವಿಶೇಷ ಮಾಹಿತಿ ಒಳಗೊಂಡಿದೆ. ಹೀಗಾಗಿ ಈ ಪುಸ್ತಕ ಓದಿದರೆ ಹಲವು ವೈವಿಧ್ಯಮಯ ವಿಚಾರಗಳು ಮನಮುಟ್ಟಲಿವೆ. ನಾನು 10ರಿಂದ 12 ದೇಶ ನೋಡಿದ್ದೇನೆ. ಆದರೆ ಆ ಬಗ್ಗೆ ಬರೆಯಲಿಲ್ಲ. ನೋಡಿ ಬಂದ ಮೇಲೆ ಹಲವು ವಿಚಾರಗಳನ್ನು ನಾವು ಮರೆಯುವುದೇ ಹೆಚ್ಚು ಹಾಗಾಗಿ ಬರೆದಿಡುವುದು, ಪುಸ್ತಕ ರೂಪದಲ್ಲಿ ಹೊರ ತರುವುದು ಬಹಳ ಮಹತ್ವದಾಗುತ್ತದೆ ಎಂದು ಹೇಳಿದರು.

ಪ್ರವಾಸ ಕಥನಕ್ಕೆ ವಿಶೇಷ ಶ್ರದ್ಧೆ ಬೇಕು: ಪ್ರವಾಸ ಕಥನ ಬರೆಯಲು ವಿಶೇಷ ಶ್ರದ್ಧೆ ಅಗತ್ಯ. ಅಂತಹ ಶ್ರದ್ಧೆ ಈ ಕೃತಿಯ ಪ್ರತಿಯೊಂದು ಲೇಖನದಲ್ಲಿ ನೋಡಬಹುದು. ಈ ಪುಸ್ತಕ ಓದಿದರೆ ಆ ದೇಶಗಳನ್ನು ನೋಡುವ ಅಪೇಕ್ಷೆ ಮೂಡುತ್ತದೆ ಜೊತೆಗೆ ಆ ಸ್ಥಳಗಳ ಬಗ್ಗೆ ಮಾಹಿತಿ ದೊರೆಯುತ್ತದೆ. ಒಂದು ಪ್ರವಾಸ ಕಥನ ಮಾಹಿತಿ ನೀಡುವ ಗುಣ ಹೊಂದಿರಬೇಕು. ಆ ದೇಶಕ್ಕೆ ಹೋಗುವುದು ಹೇಗೆ? ಆ ಜಾಗ ಸುರಕ್ಷಿತವಾಗಿಯೇ? ಎಂಬ ಬಗ್ಗೆ ಮಾಹಿತಿ ಒಳಗೊಂಡಿರಬೇಕು. ಜೊತೆಗೆ ಅಲ್ಲಿನ ಒಳನೋಟಗಳನ್ನು ನೀಡಿರಬೇಕು. ಇವರ ಈ ಪುಸ್ತಕದಲ್ಲಿ ಅಂತಹ ಒಳನೋಟಗಳಿವೆ ಎಂದರು.

ವಿಯೆಟ್ನಾಂ ಸಣ್ಣ ರಾಷ್ಟ್ರವಾದರೂ ಅದೊಂದು ದೊಡ್ಡ ಆತ್ಮಾಭಿಮಾನ ಹೊಂದಿರುವ ದೇಶ. ಆ ದೇಶದ ಬಗ್ಗೆ ಮಹತ್ವದ ಮಾಹಿತಿಗಳನ್ನು ಈ ಪುಸ್ತಕದಲ್ಲಿ ನೀಡಿದ್ದಾರೆ. ಅಲ್ಲಿನ ರಾಜಕೀಯ ನಿಲುವುಗಳ ಬಗ್ಗೆಯೂ ಪುಟ್ಟ ಟಿಪ್ಪಣಿ ನೀಡಿದ್ದಾರೆ. ಚೀಟಿ ಕಟ್ಟಿದವರನ್ನು ಪ್ರವಾಸಕ್ಕೆ ಕರೆಯುವುದು ರೂಢಿಯಲ್ಲಿದೆ. ಇಂತಹ ಪ್ರವಾಸಗಳಲ್ಲಿ ಅವಸರದ ಪ್ರವಾಸಗಳೇ ಹೆಚ್ಚು. ಒಂದು ದೇಶ ನೋಡಿ ಅಲ್ಲಿನ ಬಗ್ಗೆ ತಿಳಿದುಕೊಳ್ಳಬೇಕೆಂದರೆ ಅಲ್ಲಿ ಕನಿಷ್ಠ 6 ತಿಂಗಳು ವಾಸ್ತವ್ಯ ಹೂಡಬೇಕಾಗುತ್ತದೆ ಎಂದು ಹೇಳಿದರು.

ಕೃತಿ ಕುರಿತು ಪತ್ರಕರ್ತ ಹಾಗೂ ಪ್ರಕಾಶಕ ಜಿ.ಎನ್. ಮೋಹನ್ ಮಾತನಾಡಿದರು. ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತ್‌ಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಕೃತಿ ಕರ್ತೃ ಸುಚಿತ್ರಾ ಹೆಗಡೆ, ಕವಿತಾ ಪ್ರಕಾಶನದ ಗಣೇಶ ಅಮೀನಗಡ ಮತ್ತಿತರರು ಹಾಜರಿದ್ದರು.




ಮೈಸೂರು ಮಾನಸ ಗಂಗೋತ್ರಿಯ ವಿಜ್ಞಾನ ಭವನದಲ್ಲಿ ಭಾನುವಾರ ಸುಚಿತ್ರಾ ಹೆಗಡೆ ಅವರ 'ಜಗವ ಸುತ್ತುವ ಮಾಯೆ' ಕೃತಿ ಬಿಡುಗಡೆ ಮಾಡಲಾಯಿತು.

ಕಾವ್ಯದ ಗುಣವಿರುವುದು ಈ ಕೃತಿಯ ಅನನ್ಯತೆ

ಪುಸ್ತಕದಲ್ಲಿ ಲೇಖಕರು ಕಾವ್ಯ ಪ್ರಕಾರದ ಶೈಲಿ ಅನಾವರಣ ಮಾಡಿದ್ದಾರೆ. ಇದನ್ನು ಓದುತ್ತಿದ್ದರೆ ಎಷ್ಟೋ ಕವಿಗಳ ಕವಿತೆಗಳು ನಮ್ಮ ಮನದಲ್ಲಿ ಮೂಡುತ್ತವೆ. ಹಾಗಾಗಿ ಇದೊಂದು 'ಲಿಟರರಿ ಟೂರಿಸಂ' ಆಗಿದೆ. ಯಾರು ಸಂಚರಿಸುತ್ತಾರೋ ಅವರು ಮಧು ಸಂಗ್ರಹಿಸುತ್ತಾರೆ ಎಂಬ ಮಾತಿದೆ. ನಾವು ಚಲಿಸುತ್ತಿದ್ದರೆ ಆಗ ಮಧು ಸಂಗ್ರಹಿಸಿದಂತೆ. ಸುಚಿತ್ರಾ ಹೆಗಡೆ ಅವರು ಮಧು ಸಂಗ್ರಹಿಸಿದ್ದಾರೆ ಎಂಬುದಕ್ಕೆ ಈ ಕೃತಿ ಪುರಾವೆಯಾಗಿದೆ. ಪ್ರವಾಸ ಕಥನಗಳು ಹಾಗೂ ಆತ್ಮ ಕಥನಗಳು ದೊಡ್ಡ ಸಂಖ್ಯೆಯಲ್ಲಿ ಹೊರಬರುತ್ತಿವೆ. ಇಂತಹ ಸಂದರ್ಭದಲ್ಲಿ ಈ ಕೃತಿಯ ಅನನ್ಯ ಗುಣವೆಂದರೆ ಕಾವ್ಯದ ಶೈಲಿಯಲ್ಲಿ ಮೂಡಿಬಂದಿರುವುದಾಗಿದೆ.

-ಜಿ.ಎನ್.ಮೋಹನ್

ಮೈಸೂರಲ್ಲಿ ಎನ್‌ಡಿಎ, ಸಿಡಿಎಸ್ ಪರೀಕ್ಷೆಗಳು ಸುಗಮ



ಮೈಸೂರು, ಸೆ4 (ಆರ್‌ಕೆಬಿ)- ಭಾರತೀಯ ಸಶಸ್ತ್ರ ಪಡೆಗಳ ತ್ರಿ-ಸೇವೆಗಳಿಗೆ (ಸೇನೆ, ನೌಕಾಪಡೆ ಮತ್ತು ವಾಯುಪಡೆ) ಮುಖ್ಯ ದ್ವಾರವಾಗಿರುವ ರಾಷ್ಟ್ರೀಯ ರಕ್ಷಣಾ ಅಕಾಡೆಮಿ (ಎನ್‌ಡಿಎ) ಮತ್ತು ಕಂಬೈನ್ಡ್ ಡಿಫೆನ್ಸ್ ಸರ್ವೀಸಸ್ (ಸಿಡಿಎಸ್) ಪರೀಕ್ಷೆಗಳು ಇಂದು ಮೈಸೂರಿನ ಆರು ಕೇಂದ್ರಗಳಲ್ಲಿ ಸುಲಲಿತವಾಗಿ ನಡೆಯಿತು.

ಸೈನ್ಯ, ನೌಕಾಪಡೆ ಮತ್ತು ವಾಯು ಪಡೆಯ ವಿಭಾಗಗಳಿಗೆ ಪ್ರವೇಶಕ್ಕಾಗಿ ಎನ್‌ಡಿಎ ಪರೀಕ್ಷೆಯನ್ನು ನಡೆಸಿದರೆ, ಭಾರತೀಯ ಮಿಲಿಟರಿ ಅಕಾಡೆಮಿ (ಐಎಂಎ), ಇಂಡಿಯನ್ ನೇವಲ್ ಅಕಾಡೆಮಿ (ಐಎನ್‌ಎ), ಏರ್ ಫೋರ್ಸ್ ಅಕಾಡೆಮಿ ಮತ್ತು ಆಫೀಸರ್ಸ್ ಟ್ರೈನಿಂಗ್ ಅಕಾಡೆಮಿಗೆ ಪ್ರವೇಶಕ್ಕಾಗಿ ಸಿಡಿಎಸ್ ಅನ್ನು ನಡೆಸಲಾಗುತ್ತದೆ.

ಲಿಖಿತ ಪರೀಕ್ಷೆಗಳು ಎರಡು ಅವಧಿಗಳಲ್ಲಿ ನಡೆದವು. ಎನ್‌ಡಿಎ ಪರೀಕ್ಷೆಗೆ ಆರು ಪರೀಕ್ಷಾ ಕೇಂದ್ರಗಳಲ್ಲಿ ಒಟ್ಟು 1,442 ಅಭ್ಯರ್ಥಿಗಳು ನೋಂದಾಯಿಸಿಕೊಂಡಿದ್ದರು. ಈ ಪೈಕಿ 820 ಮಂದಿ ಹಾಜರಾಗಿದ್ದರೆ, 622 ಮಂದಿ ಗೈರು ಹಾಜರಾಗಿದ್ದರು. ಅಂತೆಯೇ, 573 ಅಭ್ಯರ್ಥಿಗಳು ಸಿಡಿಎಸ್ ಪರೀಕ್ಷೆಗೆ ನೋಂದಾಯಿಸಿಕೊಂಡಿದ್ದರು, ಈ ಪೈಕಿ 309 ಮಂದಿ ಹಾಜರಾಗಿದ್ದರೆ, 264 ಮಂದಿ ಗೈರು ಹಾಜರಾಗಿದ್ದರು ಎಂದು ಮೂಲಗಳು ತಿಳಿಸಿವೆ.

ಮೈಸೂರು ನಗರ ಪೊಲೀಸರು ಪರೀಕ್ಷಾ ಕೇಂದ್ರಗಳ ಸುತ್ತ 200 ಮೀ. ಸುತ್ತ ನಿಷೇಧಾಜ್ಞೆ ಜಾರಿಗೊಳಿಸಿದ್ದರು. ಪರೀಕ್ಷೆಗಳು ಸುಗಮವಾಗಿ ನಡೆಯುವುದನ್ನು ಖಚಿತಪಡಿಸಿಕೊಳ್ಳಲು ಎಲ್ಲಾ ಆರು ಪರೀಕ್ಷಾ ಕೇಂದ್ರಗಳ ವ್ಯಾಪ್ತಿಯನ್ನು ಬೆಳಗ್ಗೆ 6 ರಿಂದ ಸಂಜೆ 6 ರವರೆಗೆ, ಅಲ್ಲದೆ, ಕೇಂದ್ರಗಳ ಸುತ್ತಮುತ್ತಲಿನ ಎಲ್ಲಾ ಫೋಟೊಕಾಪಿ ಅಂಗಡಿಗಳನ್ನು ದಿನದ ಮಟ್ಟಿಗೆ ಮುಚ್ಚಲು ಆದೇಶಿಸಲಾಗಿತ್ತು.

ಜೋಯಾಲುಕ್ಕಾಸ್ ಜುವೆಲ್ಲರಿ ನವೀಕೃತ ಮಳಿಗೆ ಉದ್ಘಾಟನೆ



ಮೈಸೂರು,ಸೆ.4(ಎಂಟಿವೈ)- ಮೈಸೂರಿನ ಬಿ.ಎನ್.ರಸ್ತೆಯಲ್ಲಿ ಪ್ರಮುಖ ಆಭರಣ ಸಂಸ್ಥೆಗಳಲ್ಲಿ ಒಂದಾದ ಜೋಯಾಲುಕ್ಕಾಸ್ ಜುವೆಲ್ಲರಿಯ ನವೀಕೃತ ಮಳಿಗೆಯನ್ನು ಮೇಯರ್ ಸುನಂದಾ ಪಾಲನೇತ್ರ ಹಾಗೂ ನಟಿ ಅನುಷಾ ರೈ ಉದ್ಘಾಟಿಸಿದರು.

ಹೊಸ ಹೊಸ ವಿನ್ಯಾಸ ಆಭರಣಗಳನ್ನು ಗ್ರಾಹಕರ ಅಭಿರುಚಿಗೆ ತಕ್ಕಂತೆ ಪೂರೈಸುತ್ತಿರುವ ನಿಟ್ಟಿನಲ್ಲಿ ಜೋಯಾಲುಕ್ಕಾಸ್ ಸಂಸ್ಥೆಯ ನವೀಕೃತ ಮಳಿಗೆಯನ್ನು ಗ್ರಾಹಕರ ಸೇವೆಗೆ ಸಮರ್ಪಿಸಿದ್ದು, ಸೆ.4ರಿಂದ 6ರವರೆಗೆ 50 ಸಾವಿರ ರೂ. ಮೌಲ್ಯದ ಆಭರಣ ಖರೀದಿಸಿದ ಗ್ರಾಹಕರಿಗೆ 200 ಮಿ.ಗ್ರಾಂ ಚಿನ್ನದ ನಾಣ್ಯ ಉಚಿತವಾಗಿ ನೀಡುವುದರೊಂದಿಗೆ ವಜ್ರಾಭರಣಗಳ ಮೇಲೆ ಶೇ.25ರಷ್ಟು ರಿಯಾಯಿತಿ ಘೋಷಿಸಿದೆ.

ಮಳಿಗೆ ಉದ್ಘಾಟಿಸಿದ ಬಳಿಕ ಮೇಯರ್ ಸುನಂದಾ ಪಾಲನೇತ್ರ ಮಾತನಾಡಿ, ಉತ್ತಮ ಚಿನ್ನಾಭರಣಗಳನ್ನು ನೀಡುವ ಮೂಲಕ ಸಾರ್ವಜನಿಕರನ್ನು ಹೆಚ್ಚಾಗಿ ಆಕರ್ಷಿಸುತ್ತಿರುವ ಜೋಯಾಲುಕ್ಕಾಸ್ ಇನ್ನೂ ಹೆಚ್ಚಿನ ಮಳಿಗೆಗಳನ್ನು ತೆರೆಯಲಿ. ಸಾರ್ವಜನಿಕರಿಗೆ ಉತ್ತಮ ಸೇವೆ ನೀಡುವಂತಾಗಲಿ ಎಂದು ಶುಭ ಕೋರಿದರು.

ಗ್ರಾಹಕರ ಸ್ನೇಹಿ ಮಳಿಗೆ: ಗ್ರಾಹಕರ ಅನುಕೂಲವನ್ನು ಗಮನದಲ್ಲಿಟ್ಟುಕೊಂಡು, ಹೊಸದಾಗಿ ನವೀಕರಿಸಿದ ಮಳಿಗೆಯಲ್ಲಿ ಉತ್ತಮವಾದ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಿದೆ. ಶಾಪಿಂಗ್ ಸ್ಥಳ ವಿಶಾಲವಾಗಿದೆ. ಪ್ರಪಂಚದ ಅತಿದೊಡ್ಡ ಚಿನ್ನಾಭರಣಗಳ ಸಂಸ್ಥೆಯಾಗಿರುವ ಇದು ಗ್ರಾಹಕರ ಬೇಡಿಕೆಗೆ ಅನುಗುಣವಾಗಿ ಗುಣಮಟ್ಟದ ಚಿನ್ನಾಭರಣ, ವಜ್ರ ಹಾಗೂ ಪ್ಲಾಟಿನಂಗಳನ್ನು ಮಾರಾಟ ಮಾಡುವ ಮೂಲಕ ಎಲ್ಲರ ಗಮನ ಸೆಳೆಯುತ್ತಿದೆ.

ಈ ಸಂದರ್ಭದಲ್ಲಿ ಪಾಲಿಕೆ ಸದಸ್ಯ ಸತೀಶ್, ಜೋಯಾಲುಕ್ಕಾಸ್ ಸಂಸ್ಥೆಯ ಟಿ.ಆರ್.ಜಾರ್ಜ್, ರಾಜೇಶ್ ಕೃಷ್ಣ (ರಿಟೇಲ್ ಮ್ಯಾನೇಜರ್), ಜಿನೇಶ್ (ರೀಜನಲ್ ಮ್ಯಾನೇಜರ್ ಕರ್ನಾಟಕ), ಮಾರ್ಕೆಟಿಂಗ್ ವಿಭಾಗದ ಸಜು ಪೌಲ್, ಸಿಲಿ ಪೌಲ್(ಬ್ರಾಂಚ್ ಇನ್‌ಚಾರ್ಜ್) ಹಾಗೂ ಇನ್ನಿತರರು ಇದ್ದರು.

ಮೈಸೂರಲ್ಲಿ ಚಿತ್ರನಗರಿ ಶೀಘ್ರ ನಿರ್ಮಿಸಿ: ವಸಿಷ್ಠ ಸಿಂಹ ಮನವಿ

ಮೈಸೂರು, ಸೆ4(ಆರ್‌ಕೆಬಿ)- ಮೈಸೂರಿನಲ್ಲಿ ಚಿತ್ರನಗರಿ ಅಭಿವೃದ್ಧಿ ಕೆಲಸವನ್ನು ಸರ್ಕಾರ ಶೀಘ್ರ ಪ್ರಾರಂಭಿಸುವಂತೆ ಗಾಯಕ, ಚಿತ್ರನಟ ವಸಿಷ್ಠ ಸಿಂಹ ಇಂದಿಲ್ಲಿ ಸಂಸದ ಪ್ರತಾಪ್‌ಸಿಂಹ ಅವರನ್ನು ಒತ್ತಾಯಿಸಿದ್ದಾರೆ.

ಮೈಸೂರಿನಲ್ಲಿ ಸಂಸದ ಪ್ರತಾಪ್‌ಸಿಂಹ ಅವರನ್ನು ಭೇಟಿ ಮಾಡಿದ ಅವರು, ಮೈಸೂರಿನ ಭವಿಷ್ಯದ ಬೆಳವಣಿಗೆ ದೃಷ್ಟಿಯಲ್ಲಿ ದಶಪಥ ಹೆದ್ದಾರಿ ರಸ್ತೆಯನ್ನು ಕಾಳಜಿಯಿಂದ ಕೈಗೊಂಡಿದ್ದೀರಿ. ಇದರಿಂದ ಮೈಸೂರಿನಲ್ಲಿ ನೂರಾರು ಕಾರ್ಖಾನೆ, ಕೈಗಾರಿಕೋದ್ಯಮ ಸ್ಥಾಪನೆಯಾಗಿ ಲಕ್ಷಾಂತರ ಮಂದಿಗೆ ಉದ್ಯೋಗ ಸಿಕ್ಕಂತಾಗುತ್ತದೆ. ಮೈಸೂರಿನಿಂದ ವಿವಿಧೆಡೆಗೆ ರೈಲುಗಳ ಸಂಚಾರ ಮಾಡಿರುವುದು ಬಹಳಷ್ಟು ಉಪಯುಕ್ತವಾಗಿದೆ. ವಿಮಾನ ನಿಲ್ದಾಣವಿದ್ದರೂ ಪ್ರಯಾಣಿಕರೇ ಇಲ್ಲದೆ ಭಣಗುಡುತ್ತಿದ್ದ ವಿಮಾನ ನಿಲ್ದಾಣ ಅಭಿವೃದ್ಧಿಪಡಿಸಿ, ಸಂಪರ್ಕಕ್ಕೆ ತಂದಿದ್ದೀರಿ ಎಂದರು.

ಅಂತೆಯೇ ಸಮೀಪಿಸುತ್ತಿರುವ ದಸರಾ ಸಂದರ್ಭದಲ್ಲಿ ಕಲಾವಿದರ ತವರೂರಾದ ಮೈಸೂರಿನಲ್ಲಿ ಕಲಾವಿದರ ಬಗ್ಗೆ ಸರ್ಕಾರ ಗಮನ ಹರಿಸಬೇಕಿದೆ. ಮೈಸೂರಿನ ಇಮ್ಮಾವು ಬಳಿ ಚಿತ್ರನಗರಿಯನ್ನು ಸ್ಥಾಪಿಸಲಾಗುತ್ತದೆ ಎಂದು ಹಲವು ವರ್ಷಗಳ ಹಿಂದೆ ಘೋಷಿಸಿದ್ದ ಸರ್ಕಾರ ಅದರ ಅಭಿವೃದ್ಧಿ ಕೆಲಸಗಳನ್ನು ಶೀಘ್ರ ಕೈಗೊಳ್ಳಬೇಕು ಎಂದು ಮನವಿ ಪತ್ರದಲ್ಲಿ ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ನಿರ್ದೇಶಕ ಕಾರ್ತಿಕ್, ಅಜಯ್‌ಶಾಸ್ತ್ರಿ ವಿಕ್ರಂ ಅಯ್ಯಂಗಾರ್, ಲಿಂಗರಾಜು ದರ್ಶನ್, ಮುರಳೀಧರ್, ಕೌಶಲ್, ಪ್ರದೀಪ್ ಇನ್ನಿತರರು ಉಪಸ್ಥಿತರಿದ್ದರು.



ಎಟಿಎಂಇ ಇಂಜಿನಿಯರಿಂಗ್ ಕಾಲೇಜು ವತಿಯಿಂದ

ಇಂದಿನಿಂದ ಮೂರು ದಿನ ವಿಜ್ಞಾನ ಉತ್ಸವ

ಮೈಸೂರು ಜಿಲ್ಲೆಯ 7ರಿಂದ 12ನೇ ತರಗತಿ ವಿದ್ಯಾರ್ಥಿಗಳು ಪಾಲ್ಗೊಳ್ಳಲು ಅವಕಾಶ

ಮೈಸೂರು,ಸೆ.4(ಪಿಎಂ)- ಮೈಸೂರಿನ ಎಟಿಎಂಇ ಇಂಜಿನಿಯರಿಂಗ್ ಕಾಲೇಜು ವತಿಯಿಂದ ಸೆ.5ರಿಂದ 7ರವರೆಗೆ ಮೈಸೂರು ಜಿಲ್ಲೆಯ 7ರಿಂದ 12ನೇ ತರಗತಿ ವಿದ್ಯಾರ್ಥಿಗಳಿಗಾಗಿ ಎಸ್‌ವಿಇಐ ಸಂಯುಕ್ತ ಪದವಿಪೂರ್ವ ಕಾಲೇಜಿನಲ್ಲಿ ಕೇಂದ್ರ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಅನುಮೋದಿತ 'ವಿಜ್ಞಾನ ಉತ್ಸವ (ಸೈನ್ಸ್ ಫೆಸ್ಟ್)' ಆಯೋಜಿಸಲಾಗಿದೆ ಎಂದು ಕಾಲೇಜಿನ ಪ್ರಾಂಶುಪಾಲ ಡಾ.ಎಲ್.ಬಸವರಾಜು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಜ್ಞಾನ ವಿಷಯಗಳ ಕುರಿತಂತೆ ಒಟ್ಟು ಐದು ಉತ್ಸವಗಳಲ್ಲಿ ಸ್ಪರ್ಧೆಗಳನ್ನು ನಡೆಸಲು ಕೇಂದ್ರ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಅನುಮೋದನೆ ನೀಡಿ, ಇದಕ್ಕಾಗಿ ಒಟ್ಟು 17.90 ಲಕ್ಷ ರೂ. ಮಂಜೂರು ಮಾಡಿದೆ. ನಮ್ಮ ಕಾಲೇಜಿನ ಸಹ ಪ್ರಾಧ್ಯಾಪಕ ಡಾ.ಎಲ್.ಯತೀಶ್ ಹಾಗೂ ಸಹಾಯಕ ಪ್ರಾಧ್ಯಾಪಕ ಕೆ.ಎನ್.ಗುರುಪ್ರಸಾದ್ ಸಿದ್ಧಪಡಿಸಿದ ಯೋಜನೆ ಇದಾಗಿದೆ ಎಂದರು.

ಐದು ಉತ್ಸವಗಳ ಪೈಕಿ ಇದೀಗ 3ನೇ ಉತ್ಸವ ಮೈಸೂರಿನ ವಿಜಯನಗರ 4ನೇ ಹಂತದ ಎಸ್‌ವಿಇಐ ಸಂಯುಕ್ತ ಪದವಿಪೂರ್ವ ಕಾಲೇಜಿನಲ್ಲಿ ಆಯೋಜಿಸಲಾಗಿದೆ. ಈಗಾಗಲೇ ಚಾಮರಾಜನಗರದಲ್ಲಿ ಮೊದಲನೇ ಉತ್ಸವ ಹಾಗೂ ಮಂಡ್ಯದಲ್ಲಿ ಎರಡನೇ ಉತ್ಸವ ನಡೆಸಲಾಗಿದೆ. ಇದೀಗ 3ನೇ ಉತ್ಸವವನ್ನು ಮೈಸೂರಿನಲ್ಲಿ ಆಯೋಜಿಸಿದ್ದು, ಮುಂದಿನ ದಿನಗಳಲ್ಲಿ 4ನೇ ಉತ್ಸವವನ್ನು ಕೊಡಗು ಜಿಲ್ಲೆಯಲ್ಲಿ ಹಮ್ಮಿಕೊಳ್ಳಲಾಗುವುದು. ಅಂತಿಮವಾಗಿ 5ನೇ ಉತ್ಸವ ಮೈಸೂರಿನ ಬನ್ನೂರು ರಸ್ತೆಯಲ್ಲಿರುವ ಎಟಿಎಂಇ ಇಂಜಿನಿಯರಿಂಗ್ ಕಾಲೇಜಿನಲ್ಲಿ ನಡೆಯಲಿದೆ ಎಂದರು.

ಮೈಸೂರಿನಲ್ಲಿ ನಡೆಯುವ 3ನೇ ಉತ್ಸವಕ್ಕೆ ಸೆ.5ರಂದು ಬೆಳಗ್ಗೆ 11ಕ್ಕೆ ಎಟಿಎಂಇ ಕಾಲೇಜು ಅಧ್ಯಕ್ಷ ಎಲ್.ಅರುಣ್ ಕುಮಾರ್ ಚಾಲನೆ ನೀಡಲಿದ್ದಾರೆ. ಬಳಿಕ 12ರಿಂದ ಮಧ್ಯಾಹ್ನ 3ರವರೆಗೆ 'ಪ್ರಬಂಧ ಸ್ಪರ್ಧೆ', 'ಆಶುಭಾಷಣ ಸ್ಪರ್ಧೆ' ಮತ್ತು 'ಭಿತ್ತಿಪತ್ರ ಪ್ರದರ್ಶನ' ಸ್ಪರ್ಧೆಗಳು ನಡೆಯಲಿವೆ. ಅಂತೆಯೇ ಸೆ.6ರಂದು ಬೆಳಗ್ಗೆ 9.30ರಿಂದ ಮಧ್ಯಾಹ್ನ 3ರವರೆಗೆ 'ಹ್ಯಾಕಾಥಾನ್', 'ವಿಜ್ಞಾನ ರಸಪ್ರಶ್ನೆ' ಸ್ಪರ್ಧೆಗಳು ಹಾಗೂ ಸೆ.7ರಂದು ಬೆಳಗ್ಗೆ 9.30ರಿಂದ ಮಧ್ಯಾಹ್ನ 1.30ರವರೆಗೆ 'ತಾಂತ್ರಿಕ ಯೋಜನೆಗಳ ಪ್ರದರ್ಶನ' ಸ್ಪರ್ಧೆಗಳು ನಡೆಯಲಿವೆ. ಈ ಉತ್ಸವದಲ್ಲಿ ಜಿಲ್ಲೆಯ 350ರಿಂದ 400 ವಿದ್ಯಾರ್ಥಿಗಳು ಪಾಲ್ಗೊಳ್ಳುವ ನಿರೀಕ್ಷೆ ಇದೆ ಎಂದು ವಿವರಿಸಿದರು.

ಎಲ್ಲಾ 4 ಉತ್ಸವಗಳ ವಿಜೇತರು ಹಾಗೂ ದ್ವಿತೀಯ ಸ್ಥಾನ ಪಡೆದವರು ಅಂತಿಮವಾಗಿ ನಡೆಯುವ 5ನೇ ಉತ್ಸವದಲ್ಲಿ ಭಾಗವಹಿಸಲು ಅರ್ಹರಾಗುತ್ತಾರೆ. ಎಲ್ಲಾ ಉತ್ಸವಗಳಲ್ಲೂ ವಿಜೇತರು ಹಾಗೂ ದ್ವಿತೀಯ ಸ್ಥಾನ ಗಳಿಸಿದವರಿಗೆ ನಗದು ಬಹುಮಾನ ಇರುತ್ತದೆ ಎಂದರು.

3ನೇ ಉತ್ಸವದಲ್ಲಿ ಮೈಸೂರು ಜಿಲ್ಲೆಯ ಶಾಲಾ-ಕಾಲೇಜು ವಿದ್ಯಾರ್ಥಿಗಳು ಭಾಗವಹಿಸಬಹುದು. ಪ್ರವೇಶ ಉಚಿತವಿದ್ದು, ಆಸಕ್ತರು ಮುಂಗಡವಾಗಿ ಎಟಿಎಂಇ ಕಾಲೇಜಿನ ವೆಬ್‌ಸೈಟ್‌ಗೆ (www.atme.in) ಭೇಟಿ ನೀಡಿ, ಉಚಿತವಾಗಿ ನೋಂದಣಿ ಮಾಡಿಕೊಳ್ಳಬಹುದು. ಹೆಚ್ಚಿನ ವಿವರಗಳಿಗೆ ಮೊ. 99022 38768, 97393 19567 ಅನ್ನು ಸಂಪರ್ಕಿಸಬಹುದು ಎಂದು ಹೇಳಿದರು.

ಎಟಿಎಂಇ ಕಾಲೇಜು ಆಡಳಿತಾಧಿಕಾರಿ ಡಾ.ಕೆ.ಎಲ್. ಸಚ್ಚಿದಾನಂದಮೂರ್ತಿ, ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಷನ್ ವಿಭಾಗದ ಮುಖ್ಯಸ್ಥ ಡಾ.ಪಿ.ಕೆ. ಮಹೇಶ್, ಸಹ ಪ್ರಾಧ್ಯಾಪಕ ಡಾ.ಎಲ್.ಯತೀಶ್, ಸಹಾಯಕ ಪ್ರಾಧ್ಯಾಪಕ ಕೆ.ಎನ್.ಗುರುಪ್ರಸಾದ್, ಎಸ್‌ವಿಇಐ ಸಂಯುಕ್ತ ಪಿಯು ಕಾಲೇಜಿನ ವಾಣಿಜ್ಯ ವಿಭಾಗದ ಮುಖ್ಯಸ್ಥ ರವಿಕಿರಣ್ ಗೋಷ್ಠಿಯಲ್ಲಿದ್ದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ವಿಜ್ಞಾನ ಉತ್ಸವದ ಪೋಸ್ಟರ್ ಅನ್ನು ಬಿಡುಗಡೆ ಮಾಡಲಾಯಿತು.

ಮೈಸೂರು ಮಿತ್ರ ಸೋಮವಾರ 5 ಸೆಪ್ಟೆಂಬರ್ 2022

ಬೂತ್ ಮಟ್ಟದಿಂದ ಪಕ್ಷ ಸಂಘಟಿಸಿ

ನಂಜನಗೂಡು, ಸೆ.4– ಶಾಸಕನಾದ ಬಳಿಕ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಿದ್ದೇನೆ. ಕಾರ್ಯಕರ್ತರು ಬೂತ್ ಮಟ್ಟದಿಂದ ಪಕ್ಷ ಸಂಘಟಿಸಿ ಎಂದು ಶಾಸಕ ಬಿ.ಹರ್ಷವರ್ಧನ್ ತಿಳಿಸಿದರು.



ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಸೆ.7 ರಂದು ಕ್ಷೇತ್ರಕ್ಕೆ ಆಗಮಿಸುವ ಹಿನ್ನೆಲೆಯಲ್ಲಿ ತಾಲೂಕಿನ ಹುಲ್ಲಹಳ್ಳಿಯ ಸಂತಾನ ಗಣಪತಿ ಕಲ್ಯಾಣ ಮಂಟಪದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಕ್ಷೇತ್ರದಲ್ಲಿ ಈ ಹಿಂದಿನ ಶಾಸಕರು ಮಾಡದ ಅಭಿವೃದ್ಧಿಯನ್ನು ನಾನು ಮಾಡಿದ್ದೇನೆ ಈ ವಿಚಾರ ಕ್ಷೇತ್ರದ ಮತದಾರರಿಗೆ ತಿಳಿದಿದೆ. ಮುಂಬರುವ ವಿಧಾನಸಭಾ ಚುನಾವಣೆಗೆ ನಾವು ತಳಮಟ್ಟದಿಂದ ಪಕ್ಷ ಸಂಘಟಿಸಬೇಕಿದೆ. ಪ್ರತಿಯೊಬ್ಬ ಕಾರ್ಯಕರ್ತರು ಪ್ರತಿ ಗ್ರಾಮದಲ್ಲೂ ಬೂತ್ ಕಮಿಟಿ ರಚನೆ ಮಾಡಿ ಪಕ್ಷ ಸಂಘಟನೆಗೆ ಮುಂದಾಗಬೇಕಿದೆ. ಕಾಂಗ್ರೆಸ್‌ನವರು ಜನರ ಮೆಚ್ಚುಗೆಗಾಗಿ ಪಾದಯಾತ್ರೆ ಮಾಡುತ್ತಿದ್ದಾರೆ. ಇವರ ನಾಟಕ ಕ್ಷೇತ್ರದ ಜನತೆಗೆ ಗೊತ್ತಿದೆ. ಆದರೆ ನಮ್ಮ ಕಾರ್ಯಕರ್ತರು ಏನೇ ಭಿನ್ನಾಭಿಪ್ರಾಯಗಳಿದ್ದರೂ ಅದನ್ನು ಬದಿಗಿಟ್ಟು ಪಕ್ಷ ಸಂಘಟನೆಗೆ ಶ್ರಮಿಸಿ ಎಂದರು.

ತಾಲೂಕು ಬಿಜೆಪಿ ಅಧ್ಯಕ್ಷ ಪಿ.ಮಹೇಶ್, ಹುಲ್ಲಹಳ್ಳಿ ಶಕ್ತಿ ಕೇಂದ್ರದ ಅಧ್ಯಕ್ಷ ಪರಶಿವಮೂರ್ತಿ, ರಾಜ್ಯ ಕಾರ್ಯಕಾರಣಿ ಸದಸ್ಯ ಸುಬ್ಬಣ್ಣ, ತಾಪಂ ಮಾಜಿ ಅಧ್ಯಕ್ಷ ಬಿ.ಎಸ್.ಮಹದೇವಪ್ಪ, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಹೆಚ್.ಎಂ.ಕೆಂಡಗಣ್ಣಪ್ಪ, ಗ್ರಾಪಂ ಅಧ್ಯಕ್ಷ ಮಹೇಶ್, ಹುರ ಶಕ್ತಿ ಕೇಂದ್ರದ ಅಧ್ಯಕ್ಷ ಮಹೇಶ್, ಗ್ರಾಪಂ ಸದಸ್ಯರಾದ ಬಸಪ್ಪ, ನಾಗೇಂದ್ರ, ಮಲ್ಲಿಕಾರ್ಜುನ, ತಾಪಂ ಮಾಜಿ ಸದಸ್ಯ ಶಿವಣ್ಣನಾಯ್ಕ, ಮುಖಂಡರಾದ ಶಂಕರ, ಎಸ್.ಬಸವರಾಜ್, ಅಬ್ದುಲ್ ರಜಾಕ್ ಸೇರಿದಂತೆ ಪ್ರಮುಖರಿದ್ದರು.

ಎನ್‌ಆರ್‌ಎಲ್‌ಎಂ ವರ್ಕ್ ಶೆಡ್ ಕಾಮಗಾರಿಗೆ ಭೂಮಿ ಪೂಜೆ

ತಿ.ನರಸೀಪುರ ಸೆ.4– ಗ್ರಾಮೀಣ ಭಾಗದಲ್ಲಿ ಶೈಕ್ಷಣಿಕ ಹಾಗೂ ಆರ್ಥಿಕ ಚಟುವಟಿಕೆಗಳಿಗೆ ಉತ್ತೇಜನ ನೀಡಲು ಪ್ರಾಯೋಗಿಕ ತರಬೇತಿಗಳಿಗೆ ಅಗತ್ಯವಾದ ಕಾರ್ಯಾಗಾರ ಕಟ್ಟಡಗಳನ್ನು ನಿರ್ಮಿಸಬೇಕು ಎಂದು ಹೊಸಕೋಟೆ ಗ್ರಾಪಂ ಅಧ್ಯಕ್ಷ ಎಂ.ಆನಂದ ತಿಳಿಸಿದರು.



ತಾಲೂಕಿನ ಹಳೇ ಕೆಂಪಯ್ಯನಹುಂಡಿ ಗ್ರಾಮದಲ್ಲಿ ಎನ್‌ಆರ್‌ಎಲ್‌ಎಂ ವರ್ಕ್ ಶೆಡ್ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಪ್ರತಿಯೊಂದು ಗ್ರಾಮದಲ್ಲೂ ಸಹಕಾರ ಹಾಗೂ ಮಹಿಳಾ ಸಂಘಗಳು ಪ್ರಬಲಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಶೈಕ್ಷಣಿಕ ಹಾಗೂ ಆರ್ಥಿಕ ಚಟುವಟಿಕೆಗಳ ಪ್ರಗತಿಗೆ ತರಬೇತಿ ಕಾರ್ಯಾಗಾರ ಕಟ್ಟಡದ ಅಗತ್ಯವಿದೆ ಎಂದರು.

ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ನಡೆಯುವ ತರಬೇತಿ ಕಾರ್ಯಾಗಾರಗಳು ಗ್ರಾಮ ಮಟ್ಟದಲ್ಲೂ ನಡೆದಾಗ ಸ್ಥಳೀಯ ಯುವಕರು ಹಾಗೂ ಮಹಿಳೆಯರಿಗೆ ಹೆಚ್ಚಿನ ಅನುಕೂಲವಾಗಲಿದೆ. ತಾಲೂಕಿನಲ್ಲಿ ಪ್ರಥಮ ಬಾರಿಗೆ ಹೊಸಕೋಟೆ ಗ್ರಾಪಂ ವ್ಯಾಪ್ತಿಯ ಹಳೆಕೆಂಪಯ್ಯನಹುಂಡಿ ಗ್ರಾಮದಲ್ಲಿ ವರ್ಕ್‌ಶೆಡ್ ನಿರ್ಮಾಣಗೊಳ್ಳುತ್ತಿರುವುದು ಹೆಮ್ಮೆಯ ವಿಚಾರ. ಕಾಮಗಾರಿ ಆದಷ್ಟು ಬೇಗ ಪೂರ್ಣಗೊಂಡು, ತರಬೇತಿಗಳಿಗೆ ಉಪಯೋಗವಾಗಲಿ ಎಂದರು.

ಈ ವೇಳೆ ಪಿಡಿಒ ಎಂ.ಎಸ್.ಚಿದಾನಂದ, ಸದಸ್ಯರಾದ ಇಂದ್ರಮ್ಮ ನಾಗರಾಜು, ಗಂಗಾಧರ್, ಆರ್.ಶೋಭ, ಕಾರ್ಯದರ್ಶಿ ಕೆ.ಸಿ.ಪುಟ್ಟರಾಜು, ಸಿಬ್ಬಂದಿಗಳಾದ ಪಿ.ಪ್ರದೀಪ, ಹೆಚ್.ಎ.ಸುನಂದ, ಎನ್.ಸವಿತಾ, ಮಹಿಳಾ ಸ್ವಸಹಾಯ ಸಂಘದ ಸದಸ್ಯರಾದ ಶ್ವೇತ, ರುಕ್ಮಿಣಿ, ಪುಷ್ಪಲತಾ ಹಾಗೂ ಗ್ರಾಮಸ್ಥರು ಹಾಜರಿದ್ದರು.

ಕಬಡ್ಡಿ ಪಂದ್ಯಾವಳಿ ತೀರ್ಪುಗಾರರಿಂದ ಅನ್ಯಾಯ ಆರೋಪ

ಮೇಟಿಕುಪ್ಪೆ ಗ್ರಾಮಸ್ಥರಿಂದ ಆಕ್ರೋಶ

ಸಭೆ ನಡೆಸಿ ಸಮಾಧಾನಪಡಿಸಿದ ಬಿಇಓ



ಹೆಚ್.ಡಿ.ಕೋಟೆ, ಸೆ.4– ಕಬಡ್ಡಿ ಪಂದ್ಯಾವಳಿಯಲ್ಲಿ ತಮ್ಮ ಗ್ರಾಮದ ಶಾಲಾ ಮಕ್ಕಳಿಗೆ ತೀರ್ಪುಗಾರರು ಅನ್ಯಾಯ ಮಾಡಿದ್ದಾರೆ ಎಂದು ಆರೋಪಿಸಿದ ಮೇಟಿಕುಪ್ಪೆ ಗ್ರಾಮಸ್ಥರು ಪಂದ್ಯಾವಳಿಯನ್ನು ಅರ್ಧಕ್ಕೆ ನಿಲ್ಲಿಸಿ, ಬಿಇಓ ಕಚೇರಿಗೆ ತೆರಳಿ ನ್ಯಾಯಕ್ಕಾಗಿ ಆಗ್ರಹಿಸಿದ ಪ್ರಸಂಗ ಪಟ್ಟಣದಲ್ಲಿ ಜರುಗಿದೆ.

ಪಟ್ಟಣದ ಸೆಂಟ್ ಮೇರಿಸ್ ಶಾಲಾವರಣದಲ್ಲಿ ಶನಿವಾರ ಹೆಚ್.ಡಿ.ಕೋಟೆ ತಾಲೂಕು ಮಟ್ಟದ ಕಬಡ್ಡಿ ಪಂದ್ಯಾವಳಿ ಏರ್ಪಡಿಸಲಾಗಿತ್ತು. ಪಂದ್ಯಾವಳಿಯಲ್ಲಿ ತೀರ್ಪುಗಾರರು ಉದ್ದೇಶಪೂರ್ವಕವಾಗಿ ಮೇಟಿಕುಪ್ಪೆ ಸರ್ಕಾರಿ ಶಾಲೆ ಮಕ್ಕಳನ್ನು ಸೋಲಿಸುವ ಉದ್ದೇಶದಿಂದ ಎದುರಾಳಿ ತಂಡದ ಆಟಗಾರರಿಗೆ ಹೆಚ್ಚು ಅಂಕ ನೀಡಿ ಅನ್ಯಾಯ ಎಸಗಿದ್ದಾರೆ. ಹಾಗಾಗಿ ತೀರ್ಪುಗಾರರ ಮೇಲೆ ಕ್ರಮ ಕೈಗೊಳ್ಳುವಂತೆ ಗ್ರಾಮದ ಮುಖಂಡರು ಬಿಇಓ ಉದಯಕುಮಾರ್ ಅವರಿಗೆ ದೂರು ನೀಡಿ ಸಲ್ಲಿಸಿ, ಒತ್ತಾಯಿಸಿದರು. ನಂತರ ಬಿಇಓ ಉದಯಕುಮಾರ್ ಅವರು ದೈಹಿಕ ಶಿಕ್ಷಣ ಅಧಿಕಾರಿ ರಾಮ ಪ್ರಸಾದ್, ದೈಹಿಕ ಶಿಕ್ಷಕರ ಸಂಘದ ತಾಲೂಕು ಅಧ್ಯಕ್ಷ ಅಂತೋಣಿ ಅವರನ್ನು ತಮ್ಮ ಕಚೇರಿಗೆ ಕರೆದು ಗ್ರಾಮಸ್ಥರ ಸಮ್ಮುಖದಲ್ಲಿ ವಿಚಾರಣೆ ನಡೆಸಿದರು.

ಈ ವೇಳೆ ರಾಮ ಪ್ರಸಾದ್ ಹಾಗೂ ಅಂತೋಣಿ ನಮ್ಮ ದೈಹಿಕ ಶಿಕ್ಷಕರು ಇಂದು ನಡೆದ ಕಬಡ್ಡಿ ಪಂದ್ಯಾವಳಿಯಲ್ಲಿ ನೀಡಿರುವ ತೀರ್ಪು ಸರಿ ಇದೆ. ಗ್ರಾಮಸ್ಥರು ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ ಎಂದು ಸಮಜಾಯಿಷಿ ನೀಡಿದರು.

ಇದಕ್ಕೆ ಆಕ್ರೋಶ ವ್ಯಕ್ತಪಡಿಸಿದ ಮೇಟಿಕುಪ್ಪೆ ಗ್ರಾಮಸ್ಥರು, ಹೋಬಳಿ ಮಟ್ಟದ ಕ್ರೀಡಾಕೂಟದಲ್ಲೂ ಗ್ರಾಮೀಣ ಮಕ್ಕಳ ಪ್ರತಿಭೆಗೆ ಮಾನ್ಯತೆ ನೀಡಿ ತೀರ್ಪು ಕೊಡದೆ ಅನ್ಯಾಯ ಮಾಡಿದ್ದೀರಾ. ಇಂದು ನಡೆದ ಕಬಡ್ಡಿ ಪಂದ್ಯಾವಳಿಯಲ್ಲಿಯೂ ನಮ್ಮ ಶಾಲೆ ಮಕ್ಕಳು ಉತ್ತಮ ಪ್ರದರ್ಶನ ನೀಡಿದರೂ ಅಂಕ ಕೊಡದೆ ಕಳಪೆ ಪ್ರದರ್ಶನ ನೀಡಿದ ಪಟ್ಟಣದ ಸೆಂಟ್ ಮೇರಿಸ್ ಶಾಲೆ ಮಕ್ಕಳಿಗೆ ಬೋನಸ್ ಪಾಯಿಂಟ್ ನೀಡಿದ್ದೀರಾ ಎಂದು ಕಿಡಿಕಾರಿದರು.

ಬಿಇಓ ಉದಯಕುಮಾರ್ ಮಾತನಾಡಿ, ಯಾವುದೇ ಕಾರಣಕ್ಕೂ ಮಕ್ಕಳಿಗೆ ಅನ್ಯಾಯವಾಗಲು ಬಿಡುವುದಿಲ್ಲ. ಅರ್ಧಕ್ಕೆ ನಿಂತಿರುವ ಕಬಡ್ಡಿ ಪಂದ್ಯಾವಳಿಯನ್ನು ಮಂಗಳವಾರ ಪಟ್ಟಣದ ವಿಶ್ವ ಭಾರತಿ ಶಾಲೆ ಆವರಣದಲ್ಲಿ ನಡೆಸಿ ಪಾರದರ್ಶಕ ತೀರ್ಪು ನೀಡಲಾಗುತ್ತದೆ. ಗ್ರಾಮಸ್ಥರು ಸಹಕರಿಸಬೇಕು ಎಂದು ಮನವಿ ಮಾಡಿದರು.

ಈ ವೇಳೆ ಮೇಟಿಕುಪ್ಪೆ ಗ್ರಾಮದ ಗುರುಸ್ವಾಮಿ, ಶಿವನಂಜಪ್ಪ ಮಲ್ಲೇಶ, ಮಾದಪ್ಪ, ನಾಗನಾಯಕ, ಚನ್ನಬಸವಚಾರಿ, ಮಂಜುನಾಥ, ಬಸವಲಿಂಗ, ಮಾದೇವಸ್ವಾಮಿ, ಪ್ರಕಾಶ್, ಬಿಆರ್‌ಸಿ ಕೃಷ್ಣಯ್ಯ, ಶಿಕ್ಷಕರಾದ ನಂಜರಾಜು, ಗೋಪಾಲಯ್ಯ, ರಾಮಮೂರ್ತಿ ಇದ್ದರು.

ರೈತರು ನೈಸರ್ಗಿಕ ಕೃಷಿ ಅನುಸರಿಸಿ



ಬನ್ನೂರು, ಸೆ.4– ರೈತರು ಸುಭಾಷ್ ಪಾಳೇಕಾರ್ ಅವರ ನೈಸರ್ಗಿಕ ಕೃಷಿ ಅನುಸರಿಸುವ ಮೂಲಕ ಸ್ವಾವಲಂಬಿ ಜೀವನ ನಡೆಸುವಂತೆ ನೈಸರ್ಗಿಕ ಕೃಷಿ ವಿಭಾಗದ ರಾಜ್ಯಾಧ್ಯಕ್ಷ ಬನ್ನೂರು ಕೃಷ್ಣಪ್ಪ ತಿಳಿಸಿದರು.

ಇಲ್ಲಿಗೆ ಸಮೀಪದ ಸೀಗೋಡಿಪುರದಲ್ಲಿರುವ ಸುಭಾಷ್ ಪಾಳೇಕಾರ್ ಅವರ ನೈಸರ್ಗಿಕ ಕೃಷಿ ಆಧಾರಿತ ವನಸಿರಿ ತೋಟಕ್ಕೆ ಭೇಟಿ ನೀಡಿ, ಸುತ್ತಮುತ್ತಲ ಗ್ರಾಮಗಳ ರೈತರಿಗೆ ಶೂನ್ಯ ಬಂಡವಾಳ ಕೃಷಿ ಬಗ್ಗೆ ಮಾಹಿತಿ ನೀಡಿ ಮಾತನಾಡಿದ ಅವರು, ಸರ್ಕಾರ ರೈತರ ಶೋಷಣೆ ಮಾಡು ತ್ತಿದೆ. ನಕಲಿ ಬಿತ್ತನೆಬೀಜ, ಹೊರ ದೇಶದ ಕೃಷಿ ಮಾದರಿ ಪ್ರಾತ್ಯಕ್ಷಿಕೆ ನೀಡಿ ರೈತರನ್ನು ಬಲಿಪಶು ಮಾಡುತ್ತಿದೆ. ಇಂದು ನಾವು ಸೇವಿಸುತ್ತಿರುವ ಆಹಾರ ವಿಷಮಯವಾಗಿದ್ದು, ರೈತ ರಾಸಾಯನಿಕ ಗೊಬ್ಬರದ ಮೂಲಕ ವಿಷಯುಕ್ತ ಬೆಳೆ ಬೆಳೆಯುತ್ತಿದ್ದು, ಪ್ರಕೃತಿ ವಿಕೋಪಕ್ಕೆ ಬಲಿಯಾಗಿ ನರಳುತ್ತಿದ್ದಾನೆ. ಹೀಗಾಗಿ ರೈತರು ಇಂತಹ ಆಮಿಷಗಳಿಗೆ ಬಲಿಯಾಗದೆ ನೈಸರ್ಗಿಕ ಕೃಷಿ ಅವಲಂಬಿಸಿ ಬದುಕನ್ನು ಹಸನಾಗಿಸಿಕೊಳ್ಳಬಹುದು ಎಂದರು.

ಈ ವೇಳೆ ವಿಠಲ್ ವಸಿಷ್ಠ, ನವೀನ್, ರಾಜಶೇಖರ್, ಕಾರ್ತಿಕ್, ಗುರು ಪ್ರಸಾದ್, ಶೀಲಾ, ನಾಗೇಶ್, ನಾಗರಾಜು, ನಾಗೇಶ್, ಶಿವಮೂರ್ತಿ, ದೇವರಾಜು, ಕೆಂಪೇಗೌಡ, ಸತೀಶ್, ಕೆಂಪಯ್ಯ, ಶಿವನಂಜಯ್ಯ, ರಮೇಶ್, ಮಹದೇವ, ಮಸಣಯ್ಯ, ಗುರು, ಅರುಣ್, ನಾರಾಯಣ್‌ಗೌಡ, ದೇವೇಗೌಡ, ರಾಜಶೇಖರಮೂರ್ತಿ ಹಲವರು ಉಪಸ್ಥಿತರಿದ್ದರು.

ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ



ಮಲ್ಕುಂಡಿ, ಸೆ.4– ಶಾಸಕ ಬಿ.ಹರ್ಷವರ್ಧನ್ ಅವರ ಪರಿಶ್ರಮದಿಂದ ಕ್ಷೇತ್ರದ ಪ್ರತಿ ಗ್ರಾಮಗಳ ಅಭಿವೃದ್ಧಿ ನಡೆಯುತ್ತಿದೆ ಎಂದು ಗ್ರಾಪಂ ಅಧ್ಯಕ್ಷ ರಂಗರಾಮು ಹೇಳಿದರು.

ನಂಜನಗೂಡು ತಾಲೂಕಿನ ಅಂಬಳೆ ಗ್ರಾಮದಲ್ಲಿ 30 ಲಕ್ಷ ರೂ.ವೆಚ್ಚದ ರಸ್ತೆ ಹಾಗೂ ಚರಂಡಿ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಕ್ಷೇತ್ರಕ್ಕೆ ಶಾಸಕ ಬಿ.ಹರ್ಷವರ್ಧನ್ ಅವರು ಮೂಲಭೂತ ಸೌಕರ್ಯ ಕಲ್ಪಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಿದ್ದಾರೆ. ಗ್ರಾಮದಲ್ಲಿ ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ರಸ್ತೆ ಅಭಿವೃದ್ಧಿ ಕಾಣುತ್ತಿದೆ. ಈ ರಸ್ತೆಯಲ್ಲಿ ಮಳೆಯಾದರೆ ಸಾರ್ವಜನಿಕರು ತಿರುಗಾಡಲು ತುಂಬಾ ಸಮಸ್ಯೆಯಾಗಿತ್ತು. ಇದನ್ನು ಅರಿತ ಶಾಸಕರು ಅನುದಾನ ಬಿಡುಗಡೆ ಮಾಡಿಸಿದ್ದಾರೆ ಎಂದರು. ಗ್ರಾಪಂ ಉಪಾಧ್ಯಕ್ಷೆ ಸಾಕಮ್ಮ, ಗ್ರಾಪಂ ಸದಸ್ಯ ಮಹದೇವಸ್ವಾಮಿ, ಮುಖಂಡ ಸಿದ್ದಪ್ಪ ಹಾಗೂ ಗ್ರಾಮಸ್ಥರು ಹಾಜರಿದ್ದರು.



ಸರಗೂರು ತಾಲೂಕಿಗೆ ಕ್ಷೇತ್ರ ಶಿಕ್ಷಣಾಧಿಕಾರಿ ನೇಮಿಸಿ, ಕಚೇರಿ ತೆರೆಯುವಂತೆ ತಾಲೂಕು ಶಿಕ್ಷಕರ ಸಂಘದ ಅಧ್ಯಕ್ಷ ಡಿ.ಎಂ.ಮಹದೇವಸ್ವಾಮಿ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರಿಗೆ ಮನವಿ ಸಲ್ಲಿಸಿದರು. ಕಾರ್ಯದರ್ಶಿ ಹೆಚ್.ಬಿ.ಜ್ಯೋತಿ, ಉಪಾಧ್ಯಕ್ಷ ಟಿ.ಎಂ.ಸುರೇಶ್ ಕುಮಾರ್, ಸಹ ಕಾರ್ಯದರ್ಶಿ ಬಸವರಾಜು, ಜಿಲ್ಲಾ ಉಪಾಧ್ಯಕ್ಷ ಸಿದ್ದರಾಜು, ಖಜಾಂಚಿ ರಾಮೇಗೌಡ, ಸದಸ್ಯರಾದ ಬಂಗಾರಯ್ಯ, ಶಾಂತವ್ವ, ಸತೀಶ್, ಬಾಲಚಂದ್ರ, ರೇಖಾ, ಕಿರಣ್ ಇನ್ನಿತರರಿದ್ದರು.

ಕಳಪೆ ಕಾಮಗಾರಿ: ತನಿಖೆಗೆ ಒತ್ತಾಯಿಸಿ ಪ್ರತಿಭಟನೆ

ಹುಣಸೂರು, ಸೆ.4– ತಾಲೂಕಿನ ಕೊಳಗಟ್ಟ ಗ್ರಾಮ ವ್ಯಾಪ್ತಿಯಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಮಾಡಿರುವ ಕಳಪೆ ಕಾಮಗಾರಿಯನ್ನು ತನಿಖೆಗೆ ಒಳಪಡಿಸಬೇಕು ಹಾಗೂ ಅರ್ಧಕ್ಕೆ ನಿಂತಿರುವ ಕಾಮಗಾರಿ ಪೂರ್ಣಗೊಳಿಸಬೇಕು ಎಂದು ಒತ್ತಾಯಿಸಿ ದಸಂಸ ಡಿ.ಜಿ.ಸಾಗರ್ ಬಣದ ಕಾರ್ಯಕರ್ತರು ನಗರದ ಎಸಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.



ದಸಂಸ ಜಿಲ್ಲಾ ಸಂಘಟನಾ ಸಂಚಾಲಕ ಕೃಷ್ಣ ಮಾತನಾಡಿ, ತಾಲೂಕಿನ ಲಕ್ಷ್ಮಣತೀರ್ಥ ನದಿಯಿಂದ ಕೊಳಗಟ್ಟ ಗ್ರಾಮದ ಕೆರೆ ತುಂಬಿಸುವ ಮೂಲಕ ದಲಿತರ ಜಮೀನಿಗೆ ನೀರು ಕಲ್ಪಿಸುವ ಯೋಜನೆ ಇದಾಗಿದ್ದು, ಕಾಮಗಾರಿ ಪ್ರಾರಂಭವಾಗಿ ನೀರು ಕಾಲುವೆ, ಕಾಂಕ್ರಿಟ್ ಕಾಲುವೆ, ಕೆರೆ ಅಭಿವೃದ್ಧಿ ಕಾಮಗಾರಿ ನಡೆದಿದ್ದು, ದಲಿತರ 800 ಎಕರೆಗೆ ನೀರಾವರಿ ಕಲ್ಪಿಸಲು ಯೋಜನೆಯಲ್ಲಿ ಅವಕಾಶವಿದ್ದರೂ ಕೇವಲ ಮುಖ್ಯರಸ್ತೆ ಪಕ್ಕದಲ್ಲಿರುವ ರೈತರಿಗೆ ನೆಪಮಾತ್ರಕ್ಕೆ ನೀರಾವರಿ ಕಲ್ಪಿಸಿ ಸರ್ಕಾರಕ್ಕೆ ಸುಳ್ಳು ಮಾಹಿತಿ ನೀಡಿ ದಲಿತರಿಗೆ ಅನ್ಯಾಯವೆಸಗಿದ್ದಾರೆ. ಅಲ್ಲದೇ ಕಾಮಗಾರಿ ಸ್ಥಗಿತಗೊಳಿಸಿರುವ ಸಣ್ಣ ನೀರಾವರಿ ಇಲಾಖೆಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಮೇಲೆ ಕ್ರಮ ಕೈಗೊಳ್ಳಬೇಕು. ಈಗಾಗಲೇ ನಡೆದಿರುವ ಕಾಮಗಾರಿ ಗುಣಮಟ್ಟದ ಬಗ್ಗೆ ತನಿಖೆ ನಡೆಸಬೇಕು. ಉಳಿದ ಕಾಮಗಾರಿ ಪೂರ್ಣಗೊಳಿಸುವಂತೆ ಒತ್ತಾಯಿಸಿದರು.

ಉಳಿದಿರುವ ಕಾಮಗಾರಿ ಪೂರ್ಣಗೊಳಿಸದಿದ್ದಲ್ಲಿ ಜಿಲ್ಲಾಧಿಕಾರಿ ಕಚೇರಿ ಎದುರು ಉಗ್ರ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಕೆ ನೀಡಿದರು. ಇದೇ ವೇಳೆ ಪ್ರತಿಭಟನಾಕಾರರು ಉಪವಿಭಾಗಾಧಿಕಾರಿ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ಜಿಲ್ಲಾ ಸಂಚಾಲಕ ಕೆ.ಚಂದ್ರಶೇಖರ್, ಪೌರ ಕಾರ್ಮಿಕರ ಸಂಘದ ರಂಗನಾಥ್, ವೆಂಕಟೇಶ್, ಚಂದ್ರು, ಶಶಿಕಲಾ ಇನ್ನಿತರರಿದ್ದರು.

ಮೂಗೂರಲ್ಲಿ ಸಾಮಾಜಿಕ ಲೆಕ್ಕ ಪರಿಶೋಧನಾ ಗ್ರಾಮ ಸಭೆ

ಮೂಗೂರು, ಸೆ.4– ಇಲ್ಲಿನ ಗ್ರಾಪಂನಿಂದ ಗ್ರಾಮದ ಬಂಡಿ ಮಂಟಪದಲ್ಲಿ ಜಮಾಬಂದಿ ಹಾಗೂ ಸಾಮಾಜಿಕ ಲೆಕ್ಕ ಪರಿಶೋಧನಾ ಗ್ರಾಮ ಸಭೆ ನಡೆಯಿತು.



ಗ್ರಾಪಂ ಅಧ್ಯಕ್ಷೆ ಚಂದ್ರಮ್ಮ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ 2021–22ನೇ ಸಾಲಿನ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಮಂಜೂರಾದ ಕಾಮಗಾರಿ ಖರ್ಚು–ವೆಚ್ಚದ ಬಗ್ಗೆ ಚರ್ಚಿಸಿ, ಸಾರ್ವಜನಿಕರ ಅಹವಾಲು ಸ್ವೀಕರಿಸಲಾಯಿತು. ಬಾಕಿ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಪಿಡಿಓ ಪೂರ್ಣಿಮಾಗೆ ಉಸ್ತುವಾರಿ ಅಧಿಕಾರಿ ರಶ್ಮಿ ಸೂಚಿಸಿದರು. ಅಲ್ಲದೇ ಗ್ರಾಮದಲ್ಲಿ ಕುಡಿಯುವ ನೀರು, ಕಸ ವಿಲೇವಾರಿ ಇತರೆ ವಿಷಯಗಳ ಬಗ್ಗೆ ಚರ್ಚಿಸಲಾಯಿತು. ಸಭೆಗೆ ಗೈರಾದ ಅಧಿಕಾರಿಗಳ ಬಗ್ಗೆ ಮೇಲಧಿಕಾರಿಗಳಿಗೆ ಪತ್ರ ಬರೆಯುವಂತೆ ಸಾರ್ವಜನಿಕರು ಆಗ್ರಹಿಸಿದರು.

ಸಭೆಯಲ್ಲಿ ತಾಲೂಕು ಸಾಮಾಜಿಕ ಪರಿಶೋಧನಾ ಸಂಯೋಜಕ ಜಿ.ರಂಗರಾಜು, ಉಪಾಧ್ಯಕ್ಷ ಮೋಹನ್‌ಕುಮಾರ್, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಮದ್ದಾನಪ್ಪ, ಕಾರ್ಯದರ್ಶಿ ದೀಪ, ಜವರೇಗೌಡ, ಗ್ರಾಪಂ ಸದಸ್ಯರಾದ ಶಿವಣ್ಣ, ಜಿ.ಪಿ.ಪುಟ್ಟಮಾದಯ್ಯ, ಮಹದೇವನಾಯಕ, ಭಾಗ್ಯಮ್ಮ, ಆಶಾ ಕಾರ್ಯಕರ್ತೆ ನೀಲ, ಭಾಗ್ಯ, ಗಾಯಿತ್ರಿ ಹಾಗೂ ಗ್ರಾಪಂ ಸಿಬ್ಬಂದಿ ಇದ್ದರು.

ರುದ್ರಾರಾಧ್ಯ ನಿಧನ

ಪಿರಿಯಾಪಟ್ಟಣ, ಸೆ.4– ತಾಲೂಕಿನ ಬೆಕ್ಕರೆ ಗ್ರಾಮದ ಆರಾಧ್ಯ ಸಮುದಾಯದ ಯಜಮಾನ ರುದ್ರಾರಾಧ್ಯ (87) ಭಾನುವಾರ ಮಧ್ಯಾಹ್ನ ನಿಧನರಾದರು. ಮೃತರು ಪತ್ನಿ ಸರೋಜಮ್ಮ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸೋಮವಾರ ಮಧ್ಯಾಹ್ನ ಸ್ವಗ್ರಾಮದಲ್ಲಿ ಜರುಗಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಚಿಕ್ಕನಾಗನಾಯಕ

ಹೆಡತಲೆ, ಸೆ.4– ನಂಜನಗೂಡು ತಾಲೂಕಿನ ಹೆಡತಲೆ ಗ್ರಾಮದ ನಿವಾಸಿ ಚಿಕ್ಕನಾಗನಾಯಕ (80) ಭಾನುವಾರ ನಿಧನರಾದರು. ಮೃತರು ಇಬ್ಬರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಮಧ್ಯಾಹ್ನ 2 ಗಂಟೆಗೆ ಸ್ವಗ್ರಾಮದಲ್ಲಿ ನಡೆಯಲಿದೆ.

ಬೇಡಿಕೆ ಈಡೇರಿಕೆಗೆ ಸಂಘಟಿತವಾಗಿ ಹೋರಾಡಿ

ಅಖಿಲ ಭಾರತ ಜೀವ ವಿಮಾ ಪ್ರತಿನಿಧಿಗಳ ಸಂಘಟನೆಯ ಮೈಸೂರು ವಿಭಾಗೀಯ ಅಧ್ಯಕ್ಷ ಟಿ.ಎಸ್.ಸಿದ್ದಲಿಂಗ ಒಡೆಯರ್

ತಿ.ನರಸೀಪುರ, ಸೆ.4– ಪಾಲಿಸಿ ವಿಮಾ ಕಂತಿನ ಮೇಲೆ ವಿಧಿಸುತ್ತಿರುವ ಜಿಎಸ್‌ಟಿ ರದ್ದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಅಖಿಲ ಭಾರತ ಜೀವ ವಿಮಾ ಪ್ರತಿನಿಧಿಗಳ ಸಂಘಟನೆ ಸಂಘಟಿತವಾಗಿ ಹೋರಾಡಬೇಕಿದೆ ಎಂದು ಸಂಘಟನೆಯ ಮೈಸೂರು ವಿಭಾಗೀಯ ಅಧ್ಯಕ್ಷ ಟಿ.ಎಸ್.ಸಿದ್ದಲಿಂಗ ಒಡೆಯರ್ ಹೇಳಿದರು.



ತಾಲೂಕಿನ ಮರಡಿಪುರದಲ್ಲಿ ನಡೆದ ಅಖಿಲ ಭಾರತ ಜೀವ ವಿಮಾ ಪ್ರತಿನಿಧಿಗಳ ಸಂಘಟನೆಯ ವಾರ್ಷಿಕ ಸಭೆ ಹಾಗೂ ಪ್ರತಿನಿಧಿಗಳ ಸಮಾವೇಶದಲ್ಲಿ ಮಾತನಾಡಿದ ಅವರು, ಜೀವ ವಿಮಾ ನಿಗಮದ ಕೆಲವು ನಿಯಮಗಳಿಂದ ಪ್ರತಿನಿಧಿಗಳಿಗೆ ಹಾಗೂ ಪಾವತಿದಾರರಿಗೆ ಸಮಸ್ಯೆಯಾಗುತ್ತದೆ. ನೇರ ಹಾಗೂ ಆನ್‌ಲೈನ್ ವಿಮಾ ಪಾಲಿಸಿಗಳ ಮಾರಾಟ ನಿಲ್ಲಬೇಕು. ವಿಮಾ ಕ್ಷೇತ್ರಕ್ಕೆ ಬರುತ್ತಿರುವ ನೇರ ಬಂಡವಾಳ ರದ್ದು, ಪ್ರತಿನಿಧಿಗಳ ಕಲ್ಯಾಣ ನಿಧಿ ಸ್ಥಾಪನೆ, ಅಪಘಾತ ವಿಮೆ ಹೆಚ್ಚಳ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಲಾಗುವುದು. ಒತ್ತಾಯಕ್ಕೆ ಬಲ ಸಿಗಬೇಕಾದರೆ ಪ್ರತಿನಿಧಿಗಳು ಹೆಚ್ಚು ಸಂಘಟಿತರಾಗಬೇಕು ಎಂದರು.

ವಿಭಾಗೀಯ ಕಾರ್ಯದರ್ಶಿ ಪ್ರದೀಪ್ ಮಾತನಾಡಿ, ವಿಮಾ ಕ್ಷೇತ್ರದಲ್ಲಿ ಪೋರ್ಟಿಂಗ್ ಹಾಗೂ ನೇರ ಮಾರಾಟ ವ್ಯವಸ್ಥೆಯಿಂದಾಗಿ ಪ್ರತಿನಿಧಿಗಳ ವೃತ್ತಿ ಬದುಕಿಗೆ ಹೊಡೆತ ಬೀಳುತ್ತಿದೆ. ಜೊತೆಗೆ ಪ್ರತಿನಿಧಿಗಳು ನೀಡುವ ಕಮೀಷನ್ ದರ ಕೂಡ ಕಡಿಮೆ ಮಾಡುವ ಹುನ್ನಾರ ನಡೆದಿದೆ. ಮುಂದಿನ ದಿನಗಳಲ್ಲಿ ಪ್ರತಿನಿಧಿಗಳಿಗೆ ಸಾಕಷ್ಟು ಸಮಸ್ಯೆ ಎದುರಾಗಲಿದ್ದು, ಅವುಗಳ ವಿರುದ್ಧ ನಾವು ಸಂಘಟಿತರಾಗಿ ಹೋರಾಡಬೇಕಿದೆ ಎಂದರು.

ಕೊಳ್ಳೇಗಾಲ ಶಾಖೆ ಲಿಕಾಯ್ ಅಧ್ಯಕ್ಷ ಬಸವಲಿಂಗಪ್ಪ, ಪ್ರತಿನಿಧಿಗಳು ಹೆಚ್ಚು ಸದಸ್ಯತ್ವ ಪಡೆದು ಒಗಟ್ಟಿನಿಂದ ಸಂಘಟನೆ ಮುನ್ನಡೆಸುವಂತೆ ಮನವಿ ಮಾಡಿದರು. ಇದೇ ವೇಳೆ ಕೊಳ್ಳೇಗಾಲ ಉಪಶಾಖಾಧಿಕಾರಿ ರೂಪೇಶ್ ಕುಮಾರ್, ಉಪಗ್ರಹ ಶಾಖಾಧಿಕಾರಿ ಬಿ.ಎಂ.ನಾಗರಾಜಮೂರ್ತಿ, ಅಭಿವೃದ್ಧಿ ಅಧಿಕಾರಿಗಳಾದ ರಾಜಣ್ಣ, ಮಂಜುನಾಥ ಹೆಗಡೆ, ಬಾಲಮುರುಳಿ ಪ್ರತಿನಿಧಿಗಳ ಸಮಾವೇಶಕ್ಕೆ ಶುಭ ಕೋರಿದರು.

ಇದೇ ವೇಳೆ ಸಂಘಟನೆಗೆ ಆಯ್ಕೆಯಾದ ನೂತನ ಪದಾಧಿಕಾರಿಗಳನ್ನು ಅಭಿನಂದಿಸಲಾಯಿತು. ಈ ಸಂದರ್ಭ ಗೌರವಾಧ್ಯಕ್ಷ ಜಿ.ಸಿ.ಗುರುಪಾದಸ್ವಾಮಿ, ನಂಜನಗೂಡು ಶಾಖೆ ಅಧ್ಯಕ್ಷ ರವಿಕುಮಾರ್, ಕೋಶಾಧ್ಯಕ್ಷ ಅರವಿಂದ ಕುಮಾರ್, ಶ್ರೀಧರ್ ರಾವ್, ಎಸ್.ಸೋಮಶೇಖರ್, ಎಂ.ಅಂಕಪ್ಪ ಮಹೇಶ್, ಮಹದೇವಪ್ಪ, ವೀರಭದ್ರಸ್ವಾಮಿ, ಮಹದೇವಸ್ವಾಮಿ, ಎಂ.ಪಿ.ಶಿವರುದ್ರಸ್ವಾಮಿ, ಗುರುಪ್ರಸಾದ್, ಸತೀಶ್, ಶಿವರುದ್ರಮ್ಮ, ಆರ್.ಮಹದೇವ್, ಬಿ.ಎಸ್.ಸುನೀತಾ, ಅಂಬಿಕಾ, ಸುಮ, ಕೃಷ್ಣಮೂರ್ತಿ, ಮರಿಸ್ವಾಮಿ, ನಂಜುಂಡಸ್ವಾಮಿ ಸೇರಿದಂತೆ ಪ್ರತಿನಿಧಿಗಳು ಹಾಜರಿದ್ದರು.



ಹುಣಸೂರು ತಾಲೂಕಿನ ಹಿರೀಕ್ಯಾತನಹಳ್ಳಿ ಪಿಎಸಿಎಸ್ ಅಧ್ಯಕ್ಷರಾಗಿ ಆಯ್ಕೆಯಾದ ಮಂಜುನಾಥ್, ಶಾಸಕ ಜಿ.ಟಿ.ದೇವೇಗೌಡರನ್ನು ಮೈಸೂರಿನ ಅವರ ನಿವಾಸದಲ್ಲಿ ಸನ್ಮಾನಿಸಿದರು. ಈ ವೇಳೆ ಸಂಘದ ನಿರ್ದೇಶಕರಾದ ಮಹದೇವ್, ಅಶೋಕ, ಮುಖಂಡರಾದ ಸುರೇಶ್, ಪುಟ್ಟರಾಜು, ಶ್ರೀಧರ್, ಹರೀಶ್, ಮಂಜು ಹಾಜರಿದ್ದರು.



ಪಿರಿಯಾಪಟ್ಟಣ ತಾಲೂಕಿನ ಚೆನ್ನೇನಹಳ್ಳಿ ಕೊಪ್ಪಲಿನಲ್ಲಿ ಪಡಿತರ ಉಪಕೇಂದ್ರವನ್ನು ಮೈಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ ಉದ್ಘಾಟಿಸಿದರು. ಈ ವೇಳೆ ಮೈಮುಲ್ ನಿರ್ದೇಶಕ ಹೆಚ್.ಡಿ.ರಾಜೇಂದ್ರ ಡೈರಿ ಅಧ್ಯಕ್ಷ ಎಂ.ಜೆ.ಸ್ವಾಮಿ, ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕ ಸಿ.ಎನ್.ರವಿ, ಆಹಾರ ಇಲಾಖೆ ಶಿರಸ್ತೇದಾರ್ ಸಣ್ಣಸ್ವಾಮಿ, ಚಿಟ್ಟೇನಹಳ್ಳಿ ಗ್ರಾಪಂ ಅಧ್ಯಕ್ಷ ಜೆ.ಕುಮಾರ್ ಇದ್ದರು.



ಹೆಚ್.ಡಿ.ಕೋಟೆ ಪಟ್ಟಣದ 11ನೇ ವಾರ್ಡ್‌ನಲ್ಲಿ ಪ್ರತಿಷ್ಠಾಪಿಸಿರುವ ಗೌರಿ–ಗಣೇಶನಿಗೆ ಬಿಜೆಪಿ ಮುಖಂಡ ಡಾ.ಕೃಷ್ಣಸ್ವಾಮಿ ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ಜಿಲ್ಲಾ ಸಹ ವಕ್ತಾರ ಸಿ.ಕೆ.ಗಿರೀಶ್, ಮುಖಂಡರಾದ ಯೋಗೇಶ್, ಕೆಂಡಗಣ್ಣಸ್ವಾಮಿ, ಗುರುಸ್ವಾಮಿ, ಎಸ್.ಟಿ.ಮೋರ್ಚಾ ಅಧ್ಯಕ್ಷ ರಾಜು, ಆಶ್ರಯ ಸಮಿತಿ ಸದಸ್ಯ ಮಾದೇಶ್, ವಿರಾಜ್ ಶ್ರೀರಾಮುಲು, ಗೋಪಾಲಯ್ಯ, ಶಿವಕುಮಾರ್, ಶಿವು, ಸೋಮಶೇಖರ್, ಕೃಷ್ಣಯ್ಯ ಇತರರಿದ್ದರು.

ಮೈಸೂರಲ್ಲಿ ಬೃಹತ್ ಸಾಮೂಹಿಕ ಗಣೇಶ ವಿಸರ್ಜನಾ ಮೆರವಣಿಗೆ

ಸಾಂಸ್ಕೃತಿಕ ಕಲಾ ತಂಡಗಳು, ಸಾವಿರಾರು ಭಕ್ತ ಸಮೂಹ ಭಾಗಿ



ಮೈಸೂರು, ಸೆ.4(ಎಂಕೆ)– ಮೈಸೂರಿನಲ್ಲಿ ಬೃಹತ್ ಸಾಮೂಹಿಕ ಗಣೇಶ ವಿಸರ್ಜನಾ ಮೆರವಣಿಗೆ ಸಾಂಸ್ಕೃತಿಕ ಕಲಾತಂಡಗಳು, ಸಾವಿರಾರು ಭಕ್ತ ಸಮೂಹದ ನಡುವೆ ವಿಜೃಂಭಣೆಯಿಂದ ನೆರವೇರಿತು.

ಎರಡು ವರ್ಷದ ಬಳಿಕ ಮೈಸೂರು ಗಣೇಶ ಉತ್ಸವ ಸಮಿತಿ ವತಿಯಿಂದ ವಿವಿಧ ಹಿಂದೂಪರ ಸಂಘಟನೆಗಳ ಸಹಯೋಗದೊಂದಿಗೆ ಆಯೋಜಿಸಿದ್ದ ಸಾಮೂಹಿಕ ಗಣೇಶ ವಿಸರ್ಜನಾ ಮೆರವಣಿಗೆ ಯಶಸ್ವಿಯಾಯಿತು.

ನಂದಿ ಧ್ವಜ, ಪೂಜಾ ಕುಣಿತ, ಡೊಳ್ಳು ಕುಣಿತ, ಕಂಸಾಳೆ, ವೀರಗಾಸೆ ಇನ್ನಿತರೆ ಸಾಂಸ್ಕೃತಿಕ ಕಲಾ ತಂಡಗಳ ಜೊತೆಗೆ ಒಂದು ತಂಡ ಜೆಎಲ್‌ಬಿ ರಸ್ತೆಯಲ್ಲಿರುವ ಮಾಧವ ಕೃಪಾದಿಂದ ಹೊರಟರೆ, ಮತ್ತೊಂದು ತಂಡ ವೀರನಗೆರೆಯಿಂದ ಅಶೋಕ ರಸ್ತೆ ಮೂಲಕ ಸಾಗಿ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ತಲುಪಿತು. ಬಳಿಕ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಕೆ.ಆರ್.ವೃತ್ತ ಮಾರ್ಗವಾಗಿ ಡಿ.ದೇವರಾಜ ಅರಸು ರಸ್ತೆಯಲ್ಲಿ ಸಾಗಿ, ಮಹಾರಾಣಿ ಕಾಲೇಜು ಜಂಕ್ಷನ್ ಬಳಿ ಸಮಾಪ್ತಿಯಾಯಿತು.

ಭಕ್ತ ಸಮೂಹ: ಬೃಹತ್ ಸಾರ್ವಜನಿಕ ಗಣೇಶ ವಿಸರ್ಜನಾ ಮೆರವಣಿಗೆಯಲ್ಲಿ ಭಕ್ತ ಸಮೂಹವೇ ನೆರೆದಿತ್ತು. ನಗರದ ವಿವಿಧೆಡೆಯಿಂದ 25ಕ್ಕೂ ಹೆಚ್ಚು ಗಣೇಶ ವಿಗ್ರಹಗಳ ಮೆರವಣಿಯಲ್ಲಿ ಸಾವಿರಾರು ಮಂದಿ ಭಕ್ತರು ಸಾಗಿದರು. ಕೇಸರಿ ಬಾವುಟಗಳನ್ನು ಹಿಡಿದು ಜಯಘೋಷ ಮೊಳಗಿಸಿದರು. ಮೆರವಣಿಗೆಯ ಮಾರ್ಗದುದ್ದಕ್ಕೂ ಪಟಾಕಿ ಸಿಡಿಸಿ ಸಂಭ್ರಮಿಸಿದರು. ಯುವಕರಂತೂ ಕುಣಿದು ಕುಪ್ಪಳಿಸಿದರು.

ಭಾವಚಿತ್ರಗಳ ಮೆರವಣಿಗೆ: ಗಣೇಶ ವಿಗ್ರಹದ ಜೊತೆಗೆ ಛತ್ರಪತಿ ಶಿವಾಜಿ, ಸಂಗೊಳ್ಳಿ ರಾಯಣ್ಣ, ಬಾಲಗಂಗಾಧರ ತಿಲಕ್, ವೀರ ಸಾವರ್ಕರ್, ಡಾ.ಬಿ.ಆರ್.ಅಂಬೇಡ್ಕರ್ ಸೇರಿದಂತೆ ಹಲವು ಸ್ವಾತಂತ್ರ್ಯ ಹೋರಾಟಗಾರರು ಭಾವಚಿತ್ರವನ್ನು ಮೆರವಣಿಗೆ ಮಾಡಲಾಯಿತು. ಅಲ್ಲದೆ ಸ್ವಾತಂತ್ರ್ಯ ಹೋರಾಟಗಾರರಿಗೆ ಜಯಘೋಷಣೆ ಕೂಗಲಾಯಿತು.

ಚಿತ್ರನಟ ವಸಿಷ್ಠ ಸಿಂಹ ಭಾಗಿ: ವೀರನಗೆರೆ ಆರಂಭವಾದ ಬೃಹತ್ ಮೆರವಣಿಗೆಯಲ್ಲಿ ಚಿತ್ರ ನಟ ವಸಿಷ್ಠ ಸಿಂಹ ಭಾಗವಹಿಸಿ ಗಮನ ಸೆಳೆದರು. ಈ ವೇಳೆ ಅಭಿಮಾನಿಗಳ ಜೊತೆ ಹೆಜ್ಜೆ ಹಾಕಿದ ವಸಿಷ್ಠ ಸಿಂಹ, ಎಲ್ಲರನ್ನು ರಂಜಿಸಿದರು. ಹಲವರು ವಸಿಷ್ಠ ಸಿಂಹ ಜೊತೆ ಫೋಟೋ ಕ್ಲಿಕ್ಕಿಸಿಕೊಳ್ಳಲು ಮುಗಿಬಿದ್ದ ಘಟನೆಯೂ ನಡೆಯಿತು.

ಬಿಗಿ ಭದ್ರತೆ: ಮೆರವಣಿಗೆಯ ಮಾರ್ಗದುದ್ದಕ್ಕೂ ಬಿಗಿ ಭದ್ರತೆ ಒದಗಿಸಲಾಗಿತ್ತು. ಯಾವುದೇ ಅಹಿತಕರ ಘಟನೆ ನಡೆಯದಂತೆ ಮುನ್ನೆಚ್ಚರಿಕೆ ವಹಿಸಿದ್ದ ಪೊಲೀಸರು ಮೆರವಣಿಗೆ ಸರಾಗವಾಗಿ ನಡೆಯಲು ಅನುವು ಮಾಡಿಕೊಟ್ಟರು. ಮೀಲಾದ್ ಪಾರ್ಕ್, ಕೋಟೆ ಆಂಜನೇಯ ದೇವಸ್ಥಾನದ ಬಳಿ ಹೆಚ್ಚಿನ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ಬಿಜೆಪಿ ರಾಜ್ಯ ಉಪಾಧ್ಯಕ್ಷ ರಾಜೇಂದ್ರ ಬಿಜೆಪಿ ನಗರಾಧ್ಯಕ್ಷ ಶ್ರೀವತ್ಸ, ಜಿಲ್ಲಾಧ್ಯಕ್ಷೆ ಮಂಗಳ ಸೋಮಶೇಖರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ನಗರ ಪ್ರಧಾನ ಕಾರ್ಯದರ್ಶಿ ಗಿರಿಧರ್, ಪಾಲಿಕೆ ಸದಸ್ಯ ಮಾವಿ ರಾಮ್ ಪ್ರಸಾದ್, ಗಣೇಶ ಸಾಮೂಹಿಕ ವಿಸರ್ಜನ ಸಮಿತಿ ಕಾರ್ಯದರ್ಶಿ ಮೈಕಾ ಪ್ರೇಮ್‌ಕುಮಾರ್, ಲೋಹಿತ್ ಅರಸ್, ಅನಿಲ್ ಥಾಮಸ್, ಆನಂದ್, ಲೋಹಿತ್ ಮತ್ತಿತರರು ಉಪಸ್ಥಿತರಿದ್ದರು.

ಹಿಂದೂ ಪರಂಪರೆಯನ್ನು ಬೆಳೆಸಿ, ಗಟ್ಟಿಗೊಳಿಸಬೇಕಾಗಿದೆ...



ಪರಾಕ್ರಮಿಗಳಾದ ಭಾರತೀಯರು ಹಿಂದೂ ಪರಂಪರೆಯನ್ನು ಬೆಳೆಸಿ, ಮತ್ತಷ್ಟು ಗಟ್ಟಿಗೊಳಿಸುವಂತೆ ಉಡುಪಿ ಜಿಲ್ಲೆ ಹಿಂದೂ ಜಾಗರಣ ವೇದಿಕೆ ಸದಸ್ಯ ಶ್ರೀಕಾಂತ್ ಶೆಟ್ಟಿ ಕರೆ ನೀಡಿದರು. ಬೃಹತ್ ಸಾರ್ವಜನಿಕ ಗಣೇಶ ವಿಸರ್ಜನಾ ಮೆರವಣಿಗೆ ವೇಳೆ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಎದುರು ನಡೆದ ವೇದಿಕೆ ಕಾರ್ಯಕ್ರಮದಲ್ಲಿ ದಿಕ್ಸೂಚಿ ಭಾಷಣ ಮಾಡಿದ ಅವರು, ಹಿಂದೂಗಳ ಧಾರ್ಮಿಕ ಭಾವನೆಗೆ ಧಕ್ಕೆ ತರುವ ಕೆಲಸ ಮಾಡಿದವರಿಗೆ ಈ ಮೂಲಕ ಎಚ್ಚರಿಕೆ ನೀಡುತ್ತಿದ್ದೇವೆ. ಹಿಂದೂಗಳ ಸದಾಚಾರ, ಸಭ್ಯತೆಗಳನ್ನೇ ದೌರ್ಬಲ್ಯಗಳೆಂದು ಭಾವಿಸಿದಿರಿ ಎಂದು ಎಚ್ಚರಿಸಿದರು.

ಸ್ವಾತಂತ್ರ್ಯ ಪೂರ್ವದಲ್ಲಿ ಸಾಮಾಜಿಕ ದ್ವೇಷದಿಂದಾಗಿ ಬ್ರಿಟಿಷರ ಆಳ್ವಿಕೆಗೆ ಒಳಪಡಬೇಕಾಯಿತೇ ಹೊರತು ಭಾರತೀಯರು ಎಂದಿಗೂ ಪರಾಕ್ರಮಿಗಳು. ಯಾರೊಂದಿಗೂ ಸೋಲನ್ನು ಒಪ್ಪಿಕೊಂಡವರಲ್ಲ. ಮೊದಲ ಮಹಾಯುದ್ಧದಲ್ಲಿ ಬ್ರಿಟಿಷರಿಗೆ ಮೈಸೂರು ಸಂಸ್ಥಾನದ ಸೇನೆ ನೆರವಾಗಿದ್ದನ್ನು ಯಾರು ಮರೆಯಬಾರದು ಎಂದು ತಿಳಿಸಿದರು.

ಮುಸ್ಲಿಂ ಭಾಂದವರಿಂದ ತಂಪು ಪಾನೀಯ ವಿತರಣೆ



ಗಣೇಶ ವಿಸರ್ಜನಾ ಮೆರವಣಿಗೆಯಲ್ಲಿ ಭಾಗವಹಿಸಿದ್ದ ಭಕ್ತರಿಗೆ ಮುಸ್ಲಿಂ ಭಾಂದವರು ತಂಪು ಪಾನೀಯ ವಿತರಿಸಿ ಸೌಹಾರ್ದತೆ ಮೆರೆದರು. ವೀರನಗೆರೆಯಿಂದ ಮೆರವಣಿಗೆ ಮಿಲಾದ್ ಪಾರ್ಕ್ ಸಮೀಪ ಬರುತ್ತಿದ್ದಂತೆ ಕೆಲ ಮುಸ್ಲಿಂ ಭಾಂದವರು ತಂಪು ಪಾನೀಯ ನೀಡಿ ಬಾಯಾರಿಕೆ ತಣಿಸಿದರು.





ಮೈಸೂರಿನ ಬಿ.ಎಂ.ಶ್ರೀನಗರ 2ನೇ ಮುಖ್ಯರಸ್ತೆ ಶ್ರೀ ಮಹಾಗಣಪತಿ ದೇವಾಲಯ ಹಾಗೂ 15ನೇ ಕ್ರಾಸ್‌ನಲ್ಲಿ ಪ್ರತಿಷ್ಠಾಪಿಸಿದ್ದ ಗಣೇಶ ಮೂರ್ತಿಗಳನ್ನು ಸೋಮವಾರ ಪ್ರತ್ಯೇಕ ಮೆರವಣಿಗೆಯೊಂದಿಗೆ ವಿಸರ್ಜಿಸಲಾಯಿತು.

ಭಾರತದ ವಿರುದ್ಧ ಪಾಕಿಸ್ತಾನಕ್ಕೆ ಭರ್ಜರಿ ಜಯ

ದುಬೈ, ಸೆ.4– ಮೊಹಮ್ಮದ್ ರಿಜ್ವಾನ್ ಅವರ ಅರ್ಧಶತಕ ಹಾಗೂ ನವಾಜ್ ಅವರ ಮಿಂಚಿನ ಬ್ಯಾಟಿಂಗ್ ನೆರವಿನಿಂದ ಪಾಕಿಸ್ತಾನ ಭಾರತದ ವಿರುದ್ಧ 5 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಇಲ್ಲಿನ ಅಂತರಾಷ್ಟ್ರೀಯ ಕ್ರಿಕೆಟ್ ಮೈದಾನದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಭಾರತ ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 181 ರನ್‌ಗಳ ಬೃಹತ್ ಮೊತ್ತ ದಾಖಲಿಸಿತು. ತಂಡದ ಪರ ವಿರಾಟ್ ಕೊಹ್ಲಿ 60, ನಾಯಕ ರೋಹಿತ್ ಶರ್ಮಾ, ಕೆಎಲ್.ರಾಹುಲ್ ತಲಾ 28, ಸೂರ್ಯ ಕುಮಾರ್ ಯಾದವ್ 13, ರಿಷಬ್ ಪಂತ್ 14, ದೀಪಕ್ ಹೂಡಾ 16 ರನ್ ಗಳಿಸಿದರು.



ಪಾಕ್ ಪರ ಶಾದಾಬ್ ಖಾನ್ 2, ನಸೀಮ್ ಷಾ, ಮೊಹಮ್ಮದ್ ಹಸನೈನ್, ಹ್ಯಾರಿಸ್ ರೌಫ್ ಹಾಗೂ ಮೊಹಮ್ಮದ್ ನವಾಜ್ ತಲಾ ಒಂದೊಂದು ವಿಕೆಟ್ ಉರುಳಿಸಿದರು.

182 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಪಾಕಿಸ್ತಾನ 19.5 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 182 ರನ್ ಗಳಿಸುವ ಮೂಲಕ ಜಯ ಸಾಧಿಸಿತು. ಪಾಕ್ ಪರ ಮೊಹಮ್ಮದ್ ರಿಜ್ವಾನ್ 71, ಮೊಹಮ್ಮದ್ ರಿಜ್ವಾನ್ 42, ಫಖಾರ್ ಜಮಾನ್ 15, ಆಸೀಫ್ ಅಲಿ 14ರನ್ ಗಳಿಸಿದರು. ಭಾರತದ ಪರ ಭುವನೇಶ್ವರ್ ಕುಮಾರ್, ಹರ್ಷದೀಪ್ ಸಿಂಗ್, ರವಿ ಬಿಷ್ಣೋಯಿ, ಚಹಲ್ ಹಾಗೂ ಪಾಂಡ್ಯ ತಲಾ ಒಂದೊಂದು ವಿಕೆಟ್ ಪಡೆದರು. ಮೊಹಮ್ಮದ್ ನವಾಜ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಇಂದು ಮೈಸೂರಲ್ಲಿ ಶಿಕ್ಷಕ ದಿನಾಚರಣೆ

ಜಿಲ್ಲೆಯ 30 ಮಂದಿಗೆ ಉತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ

ಮೈಸೂರು, ಸೆ.4(ಎಸ್‌ಪಿಎನ್)– ಮೈಸೂರು ಕಲಾಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಶಾಲಾ ಶಿಕ್ಷಣ ಮತ್ತು ಸಾರಕ್ಷತಾ ಇಲಾಖೆ ವತಿಯಿಂದ ನಾಳೆ (ಸೆ. 5) ಬೆಳಗ್ಗೆ 10 ಗಂಟೆಗೆ ಶಿಕ್ಷಕರ ದಿನಾಚರಣೆಯನ್ನು ಏರ್ಪಡಿಸಲಾಗಿದೆ.

ಶಾಸಕ ಎಲ್.ನಾಗೇಂದ್ರ ಅವರ ಅಧ್ಯಕ್ಷತೆಯಲ್ಲಿ ನಡೆಯುವ ಶಿಕ್ಷಕರ ದಿನಾಚರಣೆ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್.ಟಿ. ಸೋಮಶೇಖರ್ ಉದ್ಘಾಟಿಸಲಿದ್ದು, ಮುಖ್ಯ ಅತಿಥಿಗಳಾಗಿ ಹಂಗಾಮಿ ಮೇಯರ್ ಸುನಂದ ಪಾಲನೇತ್ರ ಭಾಗವಹಿಸಲಿದ್ದಾರೆ ಎಂದು ಶಾಲಾ ಶಿಕ್ಷಣ ಮತ್ತು ಸಾರಕ್ಷತಾ ಇಲಾಖೆ ಪ್ರಕಟಣೆ ತಿಳಿಸಿದೆ.

ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ್ ಪ್ರಸಾದ್, ಸುಮಲತಾ ಅಂಬರೀಷ್, ಶಾಸಕರಾದ ಜಿ.ಟಿ.ದೇವೇಗೌಡ, ಸಾ.ರಾ.ಮಹೇಶ್, ತನ್ವೀರ್ ಸೇಠ್, ಎಸ್.ಎ.ರಾಮದಾಸ್, ಕೆಮಹದೇವ್, ಹೆಚ್.ಪಿ.ಮಂಜುನಾಥ್, ಅಶ್ವಿನ್ ಕುಮಾರ್, ಅನಿಲ್ ಚಿಕ್ಕಮಾದು, ಡಾ.ಯತೀಂದ್ರ ಸಿದ್ದರಾಮಯ್ಯ ಸೇರಿದಂತೆ ಇತರ ಗಣ್ಯರು ಭಾಗವಹಿಸಲಿದ್ದಾರೆ. ಸಮಾರಂಭದಲ್ಲಿ ಕಿರಿಯ, ಹಿರಿಯ ಹಾಗೂ ಪ್ರೌಢಶಾಲಾ ವಿಭಾಗದಿಂದ ತಲಾ 10 ಶಿಕ್ಷಕರಂತೆ 30 ಶಿಕ್ಷಕರಿಗೆ ಉತ್ತಮ ಶಿಕ್ಷಕ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಉತ್ತಮ ಶಿಕ್ಷಕರು: 2022–23ನೇ ಸಾಲಿನ ಜಿಲ್ಲಾ ಮಟ್ಟದ ಪ್ರಶಸ್ತಿಗೆ ಕಿರಿಯ, ಹಿರಿಯ ಹಾಗೂ ಪ್ರೌಢಶಾಲಾ ವಿಭಾಗದಿಂದ ಆಯ್ಕೆಯಾದ ಶಿಕ್ಷಕರ ವಿವರ ಇಂತಿದ್ದು, ಸರ್ಕಾರಿ ಕಿರಿಯ ಶಾಲೆ ವಿಭಾಗದಿಂದ ಹೆಚ್.ಡಿ.ಕೋಟೆ ತಾಲೂಕಿನ ಚಾಕಹಳ್ಳಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ 'ಶಿಕ್ಷಕ ಜೂಲಿಯಟ್ ವಿಲ್ಮಾ, ಸರಗೂರು ತಾಲೂಕಿನ ಬೆಜ್ಜಲಪುರ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಎಂ.ರವಿಚಂದ್ರನ್, ಹುಣಸೂರು ತಾಲೂಕಿನ ನಾಗನಹಳ್ಳಿ ಸರ್ಕಾರಿ ಶಾಲೆಯ ಶಿಕ್ಷಕ ಟಿ.ಲೋಕೇಶ್, ಕೆ.ಆರ್.ತಾಲೂಕು ಗಂಧನಹಳ್ಳಿ ಸರ್ಕಾರಿ ಶಾಲೆಯ ಶಿಕ್ಷಕ ಎ.ತಾಸೀನ್ ತಾಜ್, ಮೈಸೂರಿನ ಅಶೋಕಪುರಂ ನೆಲ್ಲೂರು ಶೆಡ್ ಸರ್ಕಾರಿ ಶಾಲೆಯ ಶಿಕ್ಷಕ ಎಸ್.ಇಂದಿರಾ, ಮೈಸೂರು ತಾಲೂಕಿನ ಹಳೇ ಕಾಮನಕೊಪ್ಪಲು ಶಾಲೆಯ ಶಿಕ್ಷಕ ಬಿ.ಎಸ್.ಮೋಹನ್, ನಂಜನಗೂಡು ತಾಲೂಕಿನ ಕಾಹಳ್ಳಿ ಶಾಲೆಯ ಶಿಕ್ಷಕಿ ಕೆ.ವಿ.ಮಂಜುಳ, ತಿ.ನರಸೀಪುರ ತಾಲೂಕಿನ ಕೋಣಗಹಳ್ಳಿ ಶಾಲೆಯ ಕೆಂಪರಾಜು ಅವರನ್ನು ಆಯ್ಕೆ ಮಾಡಲಾಗಿದೆ.

ಹಿರಿಯ ಪ್ರಾಥಮಿಕ ಶಾಲಾ ವಿಭಾಗದಿಂದ ಹೆಚ್.ಡಿ.ಕೋಟೆ ತಾಲೂಕಿನ ಬೆಟ್ಟದಬೀಡು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕಿ ಎಂ.ಎ.ಸವಿತ, ಸರಗೂರು ತಾಲೂಕು ಎಂ.ಸಿ.ತಳಲು ಶಾಲೆಯ ಶಿಕ್ಷಕ ಹೆಚ್.ಎಂ.ಚಂದ್ರಶೇಖರ್, ಬೆಂಕಿಪುರ ಶಾಲೆಯ ಶಿಕ್ಷಕ ಜೆ.ಎಂ.ಗುರುಮೂರ್ತಿ, ಕೆ.ಆರ್.ನಗರ ತಾಲೂಕಿನ ಹರಂಬಳ್ಳಿ ಶಾಲೆಯ ಶಿಕ್ಷಕ ಎನ್.ಎಲ್.ರಾಮಪ್ರಸಾದ್, ಮೈಸೂರು ಗೌಸಿಯಾನಗರ ಶಾಲೆಯ ಶಿಕ್ಷಕ ಹೆಚ್.ಜೆ.ಲೋಕೇಶ, ಮೈಸೂರು ಕುವೆಂಪುನಗರ ಕರ್ನಾಟಕ ಪಬ್ಲಿಕ್ ಶಾಲೆಯ ಶಿಕ್ಷಕ ಬಿ.ಮಂಜುಪ್ರಭಾ, ಮೈಸೂರು ತಾಲೂಕು ದುದ್ದಗೆರೆ ಶಾಲೆಯ ಶಿಕ್ಷಕ ಜಲಜಾಕ್ಷಿ, ಪಿರಿಯಾಪಟ್ಟಣ ತಾಲೂಕಿನ ಕಿರನಲ್ಲಿ ಶಾಲೆಯ ಶಿಕ್ಷಕ ಕೆ.ಎಸ್.ಪ್ರದೀಪ್, ನಂಜನಗೂಡು ತಾಲೂಕಿನ ಶಿರಮಳ್ಳಿ ಶಾಲೆಯ ಶಿಕ್ಷಕ ಎಂ.ಆರ್. ಶ್ರೀನಿವಾಸ ನಾಯಕ, ತಿ.ನರಸೀಪುರ ತಾಲೂಕಿನ ಮೂಗೂರು ಕರ್ನಾಟಕ ಪಬ್ಲಿಕ್ ಶಾಲೆಯ ಶಿಕ್ಷಕಿ ಆರ್.ಭ್ರಮರಾಂಭ ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರೌಢಶಾಲೆ ವಿಭಾಗದಿಂದ ಹೆಚ್.ಡಿ.ಕೋಟೆ ತಾಲೂಕಿನ ಸವ್ವೆ ಪ್ರೌಢಶಾಲೆಯ ದೈಶಿಶಿ ಗೋಪಾಲ, ಸರಗೂರು ಸರ್ಕಾರಿ ಬಾಲಕರ ಪಿಯು ಕಾಲೇಜು(ಪ್ರೌ ವಿ) ಶಿಕ್ಷಕ ಸಣ್ಣ ಸೋಮಯ್ಯ, ಹುಣಸೂರು ತಾಲೂಕಿನ ಮನುಗನಹಳ್ಳಿ ಶಾಲೆಯ ಶಿಕ್ಷಕ ಸಿ.ಎನ್.ಗೀತಾ, ಸಾಲಿಗ್ರಾಮ ಪಿಯು ಕಾಲೇಜು(ಪ್ರೌವಿ) ಶಿಕ್ಷಕ ಬಿ.ಸಿ.ಸತೀಶ, ಮೈಸೂರು ವಿನಾಯಕ ನಗರ ಪ್ರೌಢಶಾಲೆಯ ಶಿಕ್ಷಕ ಎಸ್.ಆನಂದ, ಮೈಸೂರು ರೈಲ್ವೆ ಕಾರ್ಯಾಗಾರ ಸರ್ಕಾರಿ ಪ್ರೌಢಶಾಲೆಯ ಶಿಕ್ಷಕ ಕೆ.ಎಂ.ಮಹೇಶ, ಮೈಸೂರು ತಾಲೂಕಿನ ಉದ್ಬೂರು ಶಾಲೆಯ ಶಿಕ್ಷಕ ಹೆಚ್.ಕೆ.ಸಂಜಯ್ ಕುಮಾರ್, ಪಿರಿಯಾಪಟ್ಟಣ ತಾಲೂಕಿನ ಮುತ್ತೂರು ಪ್ರೌಢಶಾಲೆಯ ಪ್ರಭಾಕರ ಸಿಂಗ್, ತಲಕಾಡು ಪಿಯು ಕಾಲೇಜಿ(ಪ್ರೌವಿ)ನ ಶಿಕ್ಷಕ ನಂಜುಂಡ ಸ್ವಾಮಿ, ನಂಜನಗೂಡು ತಾಲೂಕಿನ ಕುಪ್ಪರಹಳ್ಳಿ ಪ್ರೌಢಶಾಲೆಯ ಶಿಕ್ಷಕ ಗೋವಿಂಧ ಅವರನ್ನು ಆಯ್ಕೆ ಮಾಡಲಾಗಿದೆ.

ಟೆಂಡರ್ ಆಹ್ವಾನ

ಮೈಸೂರು, ಸೆ.4– ಜಿಲ್ಲಾಧಿಕಾರಿಗಳ ಕಾರ್ಯಾಲಯದ ವತಿಯಿಂದ ಜಿಲ್ಲೆಯ 11 ಮತದಾರರ ನೋಂದಣಿ ಅಧಿಕಾರಿಗಳ ಕಚೇರಿಯಲ್ಲಿ ಚುನಾವಣಾ ಕಾರ್ಯಗಳನ್ನು ನಿರ್ವಹಿಸಲು ಹೊರಗುತ್ತಿಗೆ ಆಧಾರದ ಮೇಲೆ ಡಾಟಾ ಎಂಟ್ರಿ ಅಪರೇಟರ್‌ಗಳನ್ನು ಸೇವೆಯನ್ನು ಪಡೆಯಲು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಮರು ಟೆಂಡರ್ ಕರೆಯಲಾಗಿದೆ. ಆಸಕ್ತಿಯುಳ್ಳ ಎಜೆನ್ಸಿಯವರು ಟೆಂಡರ್‌ನಲ್ಲಿ ಭಾಗವಹಿಸಲು ಕರ್ನಾಟಕ ಸರ್ಕಾರದ ಅಧಿಕೃತ ಟೆಂಡರ್ https:// eporoc.karnataka.gov.in ಪೋರ್ಟಲ್ ನಿಂದ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಂಡು ವಿದ್ಯುನ್ಮಾನ online ಮೂಲಕ ಕರ್ನಾಟಕ ಸರ್ಕಾರದ ಪ್ರಸ್ತುತ ಸಂಬಂಧಿತ ಕಾಯ್ದೆಗಳ ಅನುಸಾರದಂತೆ ಭಾಗವಹಿಸಬಹುದು

ರೋಗಗಳಿಂದ ರಕ್ಷಣೆ ಪಡೆಯಲು ವಯಸ್ಕರಿಗೂ ವ್ಯಾಕ್ಸಿನ್ ಅಗತ್ಯ

ಅಪೋಲೋ ಆಸ್ಪತ್ರೆ ತಜ್ಞ ವೈದ್ಯರ ಸಲಹೆ



ಮೈಸೂರು, ಸೆ.4(ಎಸ್‌ಬಿಡಿ)– ರೋಗಗಳಿಂದ ರಕ್ಷಣೆ ಪಡೆಯುವ ನಿಟ್ಟಿನಲ್ಲಿ ಮಕ್ಕಳಂತೆ ವಯಸ್ಕರಿಗೂ ವ್ಯಾಕ್ಸಿನೇಷನ್ (ಲಸಿಕೆ) ಅಗತ್ಯವಿದೆ ಎಂದು ಮೈಸೂರಿನ ಅಪೋಲೋ ಬಿಜಿಎಸ್ ಆಸ್ಪತ್ರೆಯ ಕನ್ಸಲ್ಟೆಂಟ್ ಫಿಸಿಷಿಯನ್ ಡಾ.ಸಂಜೀವ್ ರಾವ್ ಗಿರಿಮಾಜಿ ತಿಳಿಸಿದರು.

ಸೋಂಕುಗಳ ವಿರುದ್ಧ ರಕ್ಷಣಾ ಕಾರ್ಯ ವಿಧಾನವಾಗಿ 19 ವರ್ಷ ಮೇಲ್ಪಟ್ಟವರಿಗೆ ಆಸ್ಪತ್ರೆಯಲ್ಲಿ ಪ್ರಾರಂಭಿಸಿರುವ ವ್ಯಾಕ್ಸಿನೇಷನ್ ಕಾರ್ಯಕ್ರಮದ ಉದ್ಘಾಟನೆ ವೇಳೆ ಮಾತನಾಡಿದ ಅವರು, ವ್ಯಾಕ್ಸಿನೇಷನ್ ಮಕ್ಕಳಿಗೆ ಮಾತ್ರ ಇರುವುದಲ್ಲ. ಬಾಲ್ಯದಲ್ಲಿ ಪಡೆದ ಲಸಿಕೆಗಳಿಂದ ದೊರೆತ ರೋಗ ನಿರೋಧಕ ಶಕ್ತಿ ಕಾಲಾನಂತರದಲ್ಲಿ ಕಡಿಮೆಯಾಗುವ ಸಾಧ್ಯತೆ ಇರುತ್ತದೆ. ಪರಿಣಾಮ ವಯಸ್ಕರಾದಾಗ ವಿವಿಧ ರೋಗಗಳಿಗೆ ತುತ್ತಾಗುವ ಅಪಾಯವಿರುತ್ತದೆ. ಹಾಗಾಗಿ ವಯಸ್ಕರು ಇನ್‌ಫ್ಲುಯೆಂಜಾ, ನ್ಯುಮೋಕೋಕಲ್, ಟೆಟಾನಸ್, ಡಿಫ್ತಿರಿಯಾ, ಪರ್ಟಸಿಸ್‌ಗೆ ನೀಡುವ ಟಿ–ಡಿಪಿ ಇನ್ನಿತರ ವ್ಯಾಕ್ಸಿನೇಷನ್ ಪಡೆಯುವುದು ಒಳ್ಳೆಯದು ಎಂದರು.

ಆಸ್ಪತ್ರೆಯ ಉಪಾಧ್ಯಕ್ಷರೂ ಆದ ಘಟಕದ ಮುಖ್ಯಸ್ಥ ಎನ್.ಜಿ.ಭರತೀಶ ರೆಡ್ಡಿ ಮಾತನಾಡಿ, ವಯಸ್ಸಾದಂತೆ ರೋಗ ನಿರೋಧಕ ಶಕ್ತಿ ಸಹಜವಾಗಿ ಕಡಿಮೆಯಾಗಿ ವಿವಿಧ ರೋಗ ಗಳಿಗೆ ತುತ್ತಾಗುತ್ತೇವೆ. ವ್ಯಾಕ್ಸಿನೇಷನ್ ಪಡೆದರೆ ಸಂಭಾವ್ಯ ಗಂಭೀರ ಕಾಯಿಲೆಗಳಿಂದ ರಕ್ಷಣೆ ಪಡೆಯಬಹುದು. ಇದರಿಂದ ಅನಗತ್ಯ ಬಳಲಿಕೆ, ವೆಚ್ಚವೂ ಕಡಿಮೆಯಾಗಲಿದೆ ಲಸಿಕೆ ಪಡೆಯದವರಲ್ಲಿ ರೋಗ ಉಲ್ಬಣವಾಗುವ ಸಾಧ್ಯತೆ ಹೆಚ್ಚಿರುತ್ತದೆ. ಆದ್ದರಿಂದ ವಯಸ್ಕರು ವೈದ್ಯರ ಸಲಹೆ ಪಡೆದು ಅಗತ್ಯ ವ್ಯಾಕ್ಸಿನೇಷನ್ ಪಡೆಯಬೇಕು ಎಂದು ತಿಳಿಸಿದರು.

ಆಸ್ಪತ್ರೆಯ ಮೆಡಿಕಲ್ ಸೂಪರಿಂಟೆಂಡೆಂಟ್ ಡಾ.ಅಮನ್ ನಾಯಕ್ ಮಾತನಾಡಿ, ವಯಸ್ಕರು ಅಗತ್ಯ ಲಸಿಕೆ ಪಡೆಯುವುದರಿಂದ ಅನೇಕ ರೀತಿಯ ಸಂಭಾವ್ಯ ಗಂಭೀರ ಕಾಯಿಲೆಗಳನ್ನು ತಡೆಗಟ್ಟಬಹುದು. ವೈರಸ್‌ಗಳಂತಹ ರೋಗಕಾರಕ ಸೂಕ್ಷ್ಮಾಣು ಜೀವಿಗಳಿಗೆ ನಾವು ಒಡ್ಡಿಕೊಂಡಾಗ, ಅವು ನಮ್ಮ ದೇಹವನ್ನು ಪ್ರವೇಶಿಸಿ ಸೋಂಕಿಗೆ ತುತ್ತಾಗಿಸುತ್ತವೆ. ನಮ್ಮ ದೇಹದಲ್ಲಿ ಪ್ರತಿರಕ್ಷಣಾ ವ್ಯವಸ್ಥೆಯ ಮೂಲಕ ಪ್ರತಿಕಾಯಗಳನ್ನು ಉತ್ಪಾದನೆಯಾಗಿ ಅವು ರೋಗಕಾರಕ ಸೋಂಕಿನ ವಿರುದ್ಧ ಹೋರಾಡುತ್ತವೆ. ಈ ಪ್ರಕ್ರಿಯೆ ವೇಳೆ ನಾವು ಅನಾರೋಗ್ಯಕ್ಕೆ ಒಳಗಾಗುತ್ತೇವೆ ಅದೇ ರೀತಿಯ ಸೂಕ್ಷ್ಮಜೀವಿಗಳಿಂದ ಮತ್ತೆ ದಾಳಿ ಗೊಳಗಾದಾಗ ದೇಹದ ಪ್ರತಿರಕ್ಷಣಾ ವ್ಯವಸ್ಥೆಯು ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತದೆ. ಹೀಗೆ ನಾವು ರೋಗ ನಿರೋಧಕರಾಗಲು ಲಸಿಕೆಗಳು ನೆರವಾಗುತ್ತವೆ ಎಂದು ಹೇಳಿದರು.

ವ್ಯಾಕ್ಸಿನೇಷನ್ ಕುರಿತ ಮಾಹಿತಿ: ಅನಾ ರೋಗ್ಯಕ್ಕೆ ಒಳಗಾಗದೆ, ರೋಗನಿರೋಧಕ ಶಕ್ತಿಯ ಮೂಲಕ ವಿವಿಧ ತಡೆಗಟ್ಟಬಹುದಾದ ರೋಗಗಳಿಂದ ನಮ್ಮನ್ನು ನಾವು ರಕ್ಷಿಸಿಕೊಳ್ಳಬಹುದಾಗಿದೆ. ವ್ಯಾಕ್ಸಿನೇಷನ್ ಮೂಲಕ ವ್ಯಕ್ತಿಯು ರೋಗನಿರೋಧಕವಾಗುವಂತೆ ಮಾಡಬಹುದು. ನಿರ್ದಿಷ್ಟ ರೋಗಕ್ಕೆ ಪ್ರತಿರಕ್ಷೆಯನ್ನು ಉತ್ಪಾದಿಸಲು ದೇಹಕ್ಕೆ ಲಸಿಕೆ ನೀಡುವ ಪ್ರಕ್ರಿಯೆಯನ್ನು ವ್ಯಾಕ್ಸಿನೇಷನ್ ಎನ್ನಲಾಗುವುದು. ಆದರೆ ನೈಸರ್ಗಿಕ ಸೋಂಕಿನ ವಿರುದ್ಧ ನಮ್ಮ ಪ್ರತಿರಕ್ಷೆಯ ಪ್ರತಿಕ್ರಿಯೆ ವೇಳೆ ನಮಗೆ ಹೆಚ್ಚು ಅನಾರೋಗ್ಯ ಉಂಟಾಗುವುದಿಲ್ಲ. ಲಸಿಕೆಗಳು ರೋಗನಿರೋಧಕ ಶಕ್ತಿಯನ್ನು ಸುರಕ್ಷಿತವಾಗಿ ಅಭಿವೃದ್ಧಿಪಡಿಸುತ್ತವೆ.

ಯಾರಿಗೆ ಯಾವ ಲಸಿಕೆ?: ಇನ್‌ಫ್ಲುಯೆಂಜಾ ಲಸಿಕೆ ಜೀವ ಉಳಿಸುವ ವ್ಯಾಕ್ಸಿನ್ ಆಗಿದೆ. ಫ್ಲೂ ಋತು ಪ್ರಾರಂಭವಾಗುವ ಮುನ್ನ ಈ ಲಸಿಕೆ ಪಡೆಯುವುದರಿಂದ ಇನ್‌ಫ್ಲುಯೆನ್ಜ್ ವೈರಸ್‌ನಿಂದ ಉಂಟಾಗುವ ಸಮಸ್ಯೆಗಳಿಂದ ರಕ್ಷಣೆ ಪಡೆಯಬಹುದು. ಈ ವ್ಯಾಕ್ಸಿನ್ ಅನ್ನು 19 ವರ್ಷ ಮೇಲ್ಪಟ್ಟವರು ಪ್ರತಿ ವರ್ಷ ಪಡೆಯಬಹುದು. 65 ವರ್ಷ ಮೇಲ್ಪಟ್ಟವರು ನ್ಯುಮೋಕೊಕಲ್ ವ್ಯಾಕ್ಸಿನ್ ಪಡೆಯಬಹುದಾಗಿದ್ದು, ಇದು ಜೀವ ಉಳಿಸುವ ಲಸಿಕೆ ಯಾಗಿದೆ. ಟಿ–ಡಿಪಿ(ಡ್ಯಾಪ್) ಲಸಿಕೆಯನ್ನು ಡಿಫ್ತೀರಿಯಾ ತಡೆಗಟ್ಟಲು ನೀಡಲಾಗುತ್ತದೆ. ಉಸಿರಾಟದ ತೊಂದರೆ, ಹೃದಯ ವೈಫಲ್ಯ, ಪಾರ್ಶ್ವವಾಯು ಮತ್ತು ಸಾವಿಗೆ ಕಾರಣವಾ ಗುವಂಥ ಉಸಿರಾಟದ ಕಾಯಿಲೆಯನ್ನು ಈ ಲಸಿಕೆ ತಡೆಯಬಲ್ಲದು. ಡಿಫ್ತೀರಿಯಾ, ಟೆಟಾನಸ್ ಮತ್ತು ಪರ್ಟಸಿಸ್ ವಿರುದ್ಧವೂ ರಕ್ಷಣೆ ಒದಗಿಸುತ್ತದೆ. ಮಹಿಳೆಯರಿಗೆ ಹೆರಿಗೆ ಸಮಯದಲ್ಲಿ ಟಿಡ್ಯಾಪ್ ಲಸಿಕೆ ಪಡೆಯಲು ಶಿಫಾರಸು ಮಾಡ ಲಾಗುತ್ತದೆ. ಅಲ್ಲದೆ ಎಲ್ಲಾ ವಯಸ್ಕರೂ ಒಮ್ಮೆ ಈ ಲಸಿಕೆ ಪಡೆಯಬಹುದು ಎಂದು ಆಸ್ಪತ್ರೆಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಸಾರ್ವಜನಿಕ ತಿಳುವಳಿಕೆ

ಪ್ರವೀಣ್.ಬಿ.ಪಿ, ವಕೀಲರು, ಕಛೇರಿ ವಿಳಾಸ: 1411, ಒಂದನೇ ಮಹಡಿ, 6ನೇ ತಿರುವು, ತ್ಯಾಗರಾಜ ರಸ್ತೆ, ಕೆ.ಆರ್.ಮೊಹಲ್ಲಾ, ಮೈಸೂರು, ಆದ ನಾನು ಪ್ರಚುರ ಪಡಿಸುತ್ತಿರುವ ಈ ಸಾರ್ವಜನಿಕ ತಿಳುವಳಿಕೆ ನೋಟೀಸಿನ ಕ್ರಮವೇನೆಂದರೆ :–

ಆದಾಗಿ, ಈ ಕೆಳಗೆ ಷೆಡ್ಯೂಲ್ ನಲ್ಲಿ ನಮೂದು ಮಾಡಿರುವ ಸ್ವತ್ತನ್ನು ನನ್ನ ಕಕ್ಷಿದಾರರಾದ ದೇವರಾಜ.ಎ.ಎನ್ ಬಿನ್ ನಂಜಪ್ಪ ಎ.ಎಲ್ ರವರು ಸ್ವತ್ತಿನ ಮಾಲೀಕರಾದ ಶ್ರೀಮತಿ. ಜೆ.ಜಯಲಕ್ಷ್ಮೀ, ಜೆ.ಪವಳಮಣಿ, ಜೆ.ಸೆಲ್ವಮಣಿ, ಜೆ.ಕಾರ್ತಿಕೇಯನ್ ರವರಿಂದ ಖರೀದಿ ಮಾಡಲು ಇಚ್ಛಿಸಿದ್ದು, ಷೆಡ್ಯೂಲ್ ಸ್ವತ್ತಿನ ಮೇಲೆ ಸಾರ್ವಜನಿಕರಿಗೆ ಆಥವಾ ಇತರೆ ಯಾವುದೇ ವ್ಯಕ್ತಿಗಳಿಗಾಗಲೀ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಅಧಿಕಾರ, ಆಕ್ಷೇಪಣೆಗಳು, ಸಿವಿಲ್ ವಾಣಿಜ್ಯ, ತಂಟೆ ತಕರಾರು ಇದ್ದಲ್ಲಿ ಮೇಲ್ಕಂಡ ವಿಳಾಸಕ್ಕೆ ಈ ನೋಟೀಸ್ ಪ್ರಕಟಣೆಯಾದ 7 ದಿನಗಳೊಳಗಾಗಿ ಸಲ್ಲಿಸತಕ್ಕದ್ದು. ಒಂದು ವೇಳೆ ಸದರಿ ಸಮಯದ ಒಳಗೆ ಯಾವುದೇ ಆಕ್ಷೇಪಣೆಗಳು ಬರದಿದ್ದಲ್ಲಿ, ಸ್ವತ್ತು ಖರೀದಿಸಲು ಯಾವುದೇ ಆಕ್ಷೇಪಣೆಗಳು ಇಲ್ಲವೆಂದು ಪರಿಗಣಿಸಿ, ನನ್ನ ಕಕ್ಷಿದಾರರು ಖರೀದಿ ಪ್ರಕ್ರಿಯೆಯನ್ನು ಪೂರ್ಣಗೊಳಿಸುತ್ತಾರೆ. ಒಂದು ವೇಳೆ ಸದರಿ ಸ್ವತ್ತು ಖರೀದಿಯಾದ ನಂತರ ಯಾವುದೇ ರೀತಿಯ ಆಕ್ಷೇಪಣೆಗಳು ಬಂದಲ್ಲಿ, ಸದರಿ ಆಕ್ಷೇಪಣೆಗಳು ನಮ್ಮ ಕಕ್ಷಿದಾರರಿಗೆ ಬಾಧ್ಯಪಡಿಸುವುದಿಲ್ಲವೆಂದು ಈ ಮೂಲಕ ತಿಳಿಸಲಾಗಿದೆ.

ಷೆಡ್ಯೂಲ್: ಮೈಸೂರು ಸಿಟಿ, ದೇವರಾಜ ಮೊಹಲ್ಲ, ವಿಜಯನಗರ 2ನೇ ಹಂತ, ಮನೆ ನಂ.2549 ವಿಸ್ತೀರ್ಣ ಪೂರ್ವ ಪಶ್ಚಿಮ : 7.50 ಮೀಟರ್ ಉತ್ತರ ದಕ್ಷಿಣ : 9 ಮೀಟರ್‌ಗಳುಳ್ಳ ಮನೆಗೆ ಚೆಕ್ಕುಬಂದಿ; ಪೂರ್ವಕ್ಕೆ : ಸ್ವತ್ತಿನ ನಂ.2548, ಪಶ್ಚಿಮಕ್ಕೆ : ಸ್ವತ್ತಿನ ನಂ.2550, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ : ಸ್ವತ್ತಿನ ನಂ.2556

ಸಹಿ/– B.P. Praveen, B.A.L,LL.,B, Advocate, Law Lexicon Associates off : #1411, 1st floor, 6th Cross, Thyagaraja Road, K.R.Mohalla, Mysuru

ಸ್ಥಳ: ಮೈಸೂರು
ದಿನಾಂಕ: 02.09.2022